ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 19 ಸೋಮವಾರ 2023

ಸಂಪುಟ: 44 | ಸಂಚಿಕೆ: 64 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಮಣ್ಣೆತ್ತಿನ ಅಮಾವಾಸ್ಯೆ: ಚಾಮುಂಡಿಬೆಟ್ಟಕ್ಕೆ ಹರಿದು ಬಂದ ಭಕ್ತ ಸಾಗರ

ಮೈಸೂರಿನ ವಿವಿಧ ದೇವಾಲಯಗಳಲ್ಲಿ ಜನ ಜಾತ್ರೆ

ಮೈಸೂರು, ಜೂ.18(ಎಂಟಿವೈ)–ಆಷಾಢ ಮಾಸದ ಅಮಾವಾಸ್ಯೆ (ಮಣ್ಣೆತ್ತಿನ ಅಮಾವಾಸ್ಯೆ)ಯ ದಿನವಾದ ಭಾನುವಾರ ಚಾಮುಂಡಿಬೆಟ್ಟದ ದೇವಾಲಯ ಸೇರಿದಂತೆ ಮೈಸೂರಿನ ಬಹುತೇಕ ದೇವಾಲಯಕ್ಕೆ ಅಪಾರ ಸಂಖ್ಯೆಯ ಭಕ್ತರು ಭೇಟಿ ನೀಡಿ, ದೇವರ ದರ್ಶನ ಪಡೆಯುವ ಮೂಲಕ ಒಳಿತಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಚಾಮುಂಡಿಬೆಟ್ಟ: ಮೈಸೂರಿನ ಪ್ರಮುಖ ಧಾರ್ಮಿಕ ಕೇಂದ್ರವೂ, ಪ್ರವಾಸಿ ತಾಣವೂ ಆಗಿರುವ ಚಾಮುಂಡಿ ಬೆಟ್ಟದಲ್ಲಿ ಭಕ್ತ ಸಾಗರ ಕಂಡು ಬಂದಿತು. ಒಂದೆಡೆ ವಾರಾಂತ್ಯ ರಜೆ ಹಿನ್ನೆಲೆಯಲ್ಲಿ ಮೈಸೂರಿಗೆ ಆಗಮಿಸಿದ್ದ ಪ್ರವಾಸಿಗರು ಬೆಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರೆ, ಮತ್ತೊಂದೆಡೆ ಮಣ್ಣೆತ್ತಿನ ಅಮಾವಾಸ್ಯೆ ಅಂಗವಾಗಿ ಶಕ್ತಿ ದೇವರನ್ನು ಆರಾಧಿಸಲು ಮುಗಿಬಿದ್ದಿದ್ದರು. ಇದರಿಂದ ಚಾಮುಂಡಿ ಬೆಟ್ಟದಲ್ಲಿ ಬೆಳಗ್ಗಿನಿಂದ ಸಂಜೆವರೆಗೂ ಅಪಾರ ಸಂಖ್ಯೆಯಲ್ಲಿ ಭಕ್ತರು ಚಾಮುಂಡಿಬೆಟ್ಟಕ್ಕೆ ಬಂದು ದೇವಿಯ ದರ್ಶನ ಪಡೆಯಲು ಹಂಬಲಿಸಿದರು. ಬೆಟ್ಟದಲ್ಲಿ ಭಕ್ತರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ದೇವಿ ದರ್ಶನ ಪಡೆಯಲು



ಧರ್ಮ ದರ್ಶನದ ಸಾಲಿನಲ್ಲಿ ಸಾವಿರಾರು ಮಂದಿ ಭಕ್ತಿ ಸಾಲು ಗಟ್ಟಿ ನಿಂತಿದ್ದರೆ, ಟಿಕೆಟ್ ಪಡೆದು ವಿಶೇಷ ದರ್ಶನ ಪಡೆಯಲು ನಿಂತಿದ್ದವರ ಸಂಖ್ಯೆಯೂ ಹೆಚ್ಚಿತ್ತು. ಇದಲ್ಲದೇ ಬಹುತೇಕ ಭಕ್ತರು ದೇವಾಲಯಕ್ಕೆ ಪ್ರವೇಶಿಸಲಾಗದೇ ಮುಂಭಾಗದ ದ್ವಾರದ ಬಳಿಯೇ ಕೈಮುಗಿದು ವಾಪಸ್ಸಾಗುತ್ತಿದ್ದರು.

ಭರ್ಜರಿ ವ್ಯಾಪಾರ: ಚಾಮುಂಡಿಬೆಟ್ಟಕ್ಕೆ ಆಗಮಿಸಿದ ಭಕ್ತರಲ್ಲಿ ಅಧಿಕ ಪಾಲು ಮಹಿಳಾ ಭಕ್ತರೇ ಕಂಡು ಬಂದಿದ್ದು ವಿಶೇಷ. ರಾಜ್ಯ ಸರ್ಕಾರ ಘೋಷಿಸಿರುವ 'ಶಕ್ತಿ' ಯೋಜನೆಯಡಿ ಮಹಿಳಾ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸಾರಿಗೆ ಸಂಸ್ಥೆ ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಿ ಬೆಟ್ಟಕ್ಕೆ ಆಗಮಿಸಿದ್ದರು. ಇದರಿಂದ ಮಹಿಳಾ ಭಕ್ತರ ಸಂಖ್ಯೆ ಬೆಟ್ಟದಲ್ಲಿ ಹೆಚ್ಚಾಗಿ ಕಂಡು ಬಂದಿತು. ವಿವಿಧೆಡೆಯಿಂದ ಆಗಮಿಸಿದ್ದಂತಹ ಭಕ್ತರು ಚಾಮುಂಡಿ ಬೆಟ್ಟದಲ್ಲಿರುವ ಮಳಿಗೆಗಳಲ್ಲಿ ಆಟಿಕೆ ಸೇರಿದಂತೆ ಇನ್ನಿತರ ವಸ್ತುಗಳನ್ನು ಖರೀದಿಸುವ ಮೂಲಕ ವ್ಯಾಪಾರಿಗಳಿಗೆ ನೆರವಾದರು.

ಮಣ್ಣೆತ್ತಿನ ಅಮಾವಾಸ್ಯೆಯ ದಿನದಂದು ಶಿವನ ದರ್ಶನ ಪಡೆದರೆ ಒಳ್ಳೆಯದಾಗುತ್ತದೆ ಎಂಬ ಭಾವನೆ ಹಿಂದೂ ಸಂಪ್ರದಾಯದಲ್ಲಿದ್ದು, ಅದೇ ರೀತಿ ಆಷಾಢ ಮಾಸದಲ್ಲಿ ಶಕ್ತಿ ದೇವತೆ ದರ್ಶನ ಪಡೆದರೆ ಶುಭವಾಗುತ್ತದೆಂಬ ಸಂಪ್ರದಾಯ ಇರುವುದರಿಂದ ಅಮಾವಾಸ್ಯೆ ದಿನವಾದ ಭಾನುವಾರ ದೇವಾಲಯಗಳು ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದರು.

ವಿವಿಧ ದೇವಾಲಯಗಳು: ಮೈಸೂರಿನ ವಿವಿಧ ಬಡಾವಣೆಗಳಲ್ಲಿರುವ ಮಹದೇಶ್ವರ ಸ್ವಾಮಿ ದೇವಾಲಯ, ಚಾಮುಂಡೇಶ್ವರಿ ದೇವಾಲಯ, ಕೆ.ಜಿ.ಕೊಪ್ಪಲಿನ ಬಂದಂತಮ್ಮ ದೇವಾಲಯ, ವಿವಿಧೆಡೆ ಇರುವ ಚಂದ್ರಮೌಳೇಶ್ವರ ದೇವಾಲಯ ಸೇರಿದಂತೆ ಬಹುತೇಕ ದೇವಾಲಯಗಳಲ್ಲಿ ಮಣ್ಣೆತ್ತಿನ ಅಮಾವಾಸ್ಯೆಯ ಪೂಜಾ ಕೈಂಕರ್ಯಗಳು ಜರುಗಿದವು. ಈ ವೇಳೆ ಬಹುತೇಕ ದೇವಾಲಯಗಳಿಗೆ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ನಂಜನಗೂಡಿನ ನಂಜುಂಡೇಶ್ವರ ದೇವಾಲಯ: ದಕ್ಷಿಣ ಕಾಶಿ ಎಂದು ಕರೆಯಲ್ಪಡುವ ನಂಜನಗೂಡಿನ ನಂಜುಂಡೇಶ್ವರ ದೇವಾಲಯದಲ್ಲೂ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ಬೆಳಗಿನಿಂದ ಸಂಜೆವರೆಗೂ ನಂಜನಗೂಡಿಗೆ ಆಗಮಿಸಿದ್ದಂತಹ ಭಕ್ತರು ನಂಜುಂಡೇಶ್ವರನ ದರ್ಶನ ಪಡೆದು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಇದರಿಂದ ನಂಜನಗೂಡಿನ ದೇವಾಲಯದ ಸುತ್ತಮುತ್ತ ಪ್ರವಾಸಿಗರು ಮತ್ತು ಭಕ್ತರ ಜನಜಂಗುಳಿಯೇ ಕಂಡು ಬರುತ್ತಿತ್ತು. ▶ 8ನೇ ಪುಟಕ್ಕೆ

ಗೃಹಜ್ಯೋತಿ ಆರಂಭ

ಮೊದಲ ದಿನವೇ 55 ಸಾವಿರ ಅರ್ಜಿ ಸಲ್ಲಿಕೆ

ಬೆಂಗಳೂರು,ಜೂ.18–ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಜ್ಯೋತಿ ಯೋಜನೆಗೆ ಗ್ರಾಹಕರಿಂದ ಅರ್ಜಿ ಸ್ವೀಕಾರ ಭಾನುವಾರ ಬೆಳಗ್ಗೆ 11 ಗಂಟೆಗೆ ಆರಂಭವಾಗಿದ್ದು, ಮೊದಲ ದಿನವೇ 55 ಸಾವಿರ ಗ್ರಾಹಕರು ಅರ್ಜಿ ಸಲ್ಲಿಸಿದ್ದಾರೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.



ಗೃಹಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಕೆ ಹಿನ್ನೆಲೆ ಭಾನುವಾರವಾದ ಇಂದೂ ಕೂಡ ಬೆಸ್ಕಾಂ ಕಚೇರಿ ಹಾಗೂ ನಾಡ ಕಚೇರಿಗಳಲ್ಲಿ ಕಾರ್ಯನಿರ್ವಹಿಸುವಂತೆ ಅಧಿಕಾರಿಗಳಿಗೆ ಸರ್ಕಾರ ಸೂಚನೆ ನೀಡಿತ್ತು. ನೋಂದಣಿ ಪ್ರಕ್ರಿಯೆಗೆ ರಾಜ್ಯದ ಎಲ್ಲಾ ಕರ್ನಾಟಕ ಒನ್, ಗ್ರಾಮ ಒನ್, ಬೆಂಗಳೂರು ಒನ್ ಸೇರಿದಂತೆ ಎಲ್ಲಾ ಕಚೇರಿಗಳಲ್ಲೂ ಏಕಕಾಲಕ್ಕೆ ಯೋಜನೆ ಪ್ರಾರಂಭವಾಯಿತು. ನೋಂದಣಿಯನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸಂಜೆ 6 ಗಂಟೆವರೆಗೆ 55 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದ್ದು, ಮೊದಲ ದಿನವೇ ಗೃಹಜ್ಯೋತಿ ಯೋಜನೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.


ಅರ್ಜಿ ಸಲ್ಲಿಕೆ ಹೇಗೆ: ಸೇವಾ ಸಿಂಧು ವೆಬ್‌ಸೈಟ್ ಬಳಸಿ ಮೊಬೈಲ್, ಕಂಪ್ಯೂಟರ್, ಲ್ಯಾಪ್‌ಟಾಪ್‌ನಲ್ಲೂ ಅರ್ಜಿ ಸಲ್ಲಿಸಬಹುದು. ಅಷ್ಟೇ ಅಲ್ಲ ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್, ನಾಡ ಕಚೇರಿ, ಗ್ರಾಪಂ ಕಚೇರಿ, ವಿದ್ಯುತ್ ಕಚೇರಿಯಲ್ಲೂ ▶ 8ನೇ ಪುಟಕ್ಕೆ

ಸಹಾಯವಾಣಿಗೆ ಕರೆ ಮಾಡಿದರೆ ಸಹಾಯ ಮಾಡುವವರೇ ಇಲ್ಲ!

ಮೈಸೂರು, ಜೂ.18(ಬಿಎಲ್‌ಯು)– ಕಾಂಗ್ರೆಸ್ ಸರ್ಕಾರದ ಗೃಹಜ್ಯೋತಿ ಫ್ರೀ ಸ್ಕೀಂ ಬಗ್ಗೆ ಗೊಂದಲಗಳಿದ್ದರೆ ಅದನ್ನು ಬಗೆಹರಿಸಿಕೊಳ್ಳಲು ಸಹಾಯವಾಣಿ ತೆರೆಯಲಾಗಿದೆ. 1912 ಸಂಖ್ಯೆಗೆ ಕರೆ ಮಾಡಿದರೆ ನಿಮ್ಮ ಗೊಂದಲ ನಿವಾರಣೆ ಮಾಡಲಾಗುತ್ತದೆ ಎಂದು ಸರ್ಕಾರ ಹೇಳಿದೆ. ಆದರೆ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿದರೆ ಒಂದು ರಿಂಗ್ ಆಗುವುದಿಲ್ಲ, ಮತ್ತೊಂದು ರಿಂಗ್ ಆದರೂ ಕರೆ ಸ್ವೀಕರಿಸುವರು ಇಲ್ಲ. ಒಂದು ವೇಳೆ ನಿಮ್ಮ ಕರೆಯನ್ನು ಸ್ವೀಕರಿಸಿದರೆ ಅಲ್ಲಿ ರೆಕಾರ್ಡೆಡ್ ಆಡಿಯೋ ಧ್ವನಿ ಕೇಳಿ ಬರುತ್ತದೆ. ನಿಮ್ಮ ಕರೆಯನ್ನು ಸಿಬ್ಬಂದಿಗೆ ವರ್ಗಾವಣೆ ಮಾಡಲಾಗುತ್ತದೆ ಎಂದು ಮುದ್ರಿತ ಧ್ವನಿ ಹೇಳುತ್ತದೆ. ಆದರೆ ಆ ಕರೆ ಯಾರಿಗೂ ವರ್ಗಾವಣೆ ಆಗುವುದಿಲ್ಲ. ಹೀಗೆ ಸಹಾಯವಾಣಿಗೆ ಕರೆ ಮಾಡಿ ಸಾಕಾಗಿ ಇದರ ಸಹವಾಸವೇ ಬೇಡ ಎಂದು ಜನರು ಕೈಚೆಲ್ಲಿ ಕೂರುತ್ತಿದ್ದಾರೆ. ಗೃಹಜ್ಯೋತಿ ಯೋಜನೆ ಅನುಷ್ಠಾನದಲ್ಲಿ ಆರಂಭದಲ್ಲೆ ಇಷ್ಟೆಲ್ಲಾ ಗೊಂದಲಗಳು ಎದುರಾಗಿದೆ. ಮುಂದೆ ಇನ್ನು ಏನೆಲ್ಲಾ ಅವಾಂತರಗಳು ಸೃಷ್ಟಿಯಾಗುತ್ತದೆಯೊ ದೇವರೇ ಬಲ್ಲ. ಸರಿಯಾದ ತಯಾರಿ ಮಾಡಿಕೊಳ್ಳದೆ ಆತುರದಿಂದ ಯೋಜನೆ ಅನುಷ್ಠಾನಗೊಳಿಸಿರುವುದು ಇದಕ್ಕೆಲ್ಲಾ ಮೂಲ ಕಾರಣ.

ಆರಂಭಿಕ ವಿಘ್ನ

ಮೈಸೂರು, ಜೂ.18(ಬಿಎಲ್‌ಯು)–ಗೃಹಜ್ಯೋತಿ ಯೋಜನೆಗೆ ಇಂದಿನಿಂದ ಚಾಲನೆ ದೊರೆತಿದೆ. ರಾಜ್ಯ ಸರ್ಕಾರದ ಸೇವಾ ಸಿಂಧು ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳುವ ಪ್ರಕ್ರಿಯೆ ಇಂದಿನಿಂದ ಆರಂಭವಾಗಿದೆ. ಆದರೆ ಮೊದಲ ದಿನವೇ ಸೇವಾ



ಸಿಂಧು ಪೋರ್ಟಲ್ ಓಪನ್ ಆಗಲಿಲ್ಲ. ಆರಂಭದ ದಿನವೇ ಹೆಸರು ನೋಂದಾಯಿಸಿಕೊಳ್ಳಲು ಮೈಸೂರು ಒನ್ ಹಾಗೂ ಕರ್ನಾಟಕ ಒನ್ ಸೆಂಟರ್‌ಗೆ ತೆರಳಿ ನಿರಾಸೆಯಿಂದ ವಾಪಸ್ಸಾದರು. ಗೃಹಜ್ಯೋತಿ ಯೋಜನೆಯಲ್ಲಿ 200 ಯೂನಿಟ್ ತನಕ ಫ್ರೀ ಕರೆಂಟ್ ಎಂದು ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಈ ಯೋಜನೆ ಲಾಭ ಪಡೆಯಲು ಮೊದಲು ಸರ್ಕಾರದ ಸೇವಾ ಸಿಂಧು ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳಬೇಕು. ಇಂದು ಬೆಳಗ್ಗೆ 11 ಗಂಟೆಗೆ ಸೇವಾ ಸಿಂಧು ಪೋರ್ಟಲ್ ಅನ್ನು ಸರ್ಕಾರ ಲಾಂಚ್ ಮಾಡಿತು. ಈ ಯೋಜನೆ ಲಾಭ ಪಡೆಯಲು ಇಚ್ಛಿಸುವವರು ಮೈಸೂರು ಒನ್, ಕರ್ನಾಟಕ ಒನ್, ಗ್ರಾಮ ಒನ್, ನಾಡ ಕಚೇರಿ, ಗ್ರಾಮ ಪಂಚಾಯಿತಿ ಕಚೇರಿ ಹಾಗೂ ವಿದ್ಯುತ್ ಇಲಾಖೆಯ ಕಚೇರಿಗಳಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ಇಲ್ಲವೇ ಮನೆಯಲ್ಲೇ ಮೊಬೈಲ್, ▶ 8ನೇ ಪುಟಕ್ಕೆ

ವಿದ್ಯುತ್ ದರ ಏರಿಕೆ ವಿರೋಧಿಸಿ ಜೂನ್ 22ರಂದು ಕರ್ನಾಟಕ ಬಂದ್!

ಬೆಂಗಳೂರು: ಕರ್ನಾಟಕದಲ್ಲಿ ವಿದ್ಯುತ್ ದರ ಏರಿಕೆಯನ್ನು ವಿರೋಧಿಸಿ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಹಾಗೂ ಇಂಡಸ್ಟ್ರಿ ಜೂ.22ರಂದು ಒಂದು ದಿನ ಕರ್ನಾಟಕ ಬಂದ್‌ಗೆ ಕರೆ ನೀಡಿದೆ.

ಕೂಡಲೇ ವಿದ್ಯುತ್ ದರ ಏರಿಕೆಯನ್ನು ಹಿಂಪಡೆಯುವಂತೆ ಜೂ.10ರಂದು ಕೆಸಿಸಿಐ ಕಾಂಗ್ರೆಸ್ ಸರ್ಕಾರಕ್ಕೆ ಒಂದು ವಾರಗಳ ಗಡುವು ವಿಧಿಸಿತ್ತು ಒಂದು ವೇಳೆ ದರ ಏರಿಕೆಯನ್ನು ಹಿಂಪಡೆಯದೇ ಇದ್ದಲ್ಲಿ ಎಲ್ಲಾ ಕೈಗಾರಿಕೆಗಳನ್ನೂ ಬಂದ್ ಮಾಡಿ ಪ್ರತಿಭಟನೆಯ ಎಚ್ಚರಿಕೆಯನ್ನೂ ನೀಡಿತ್ತು. ಆದರೆ ರಾಜ್ಯ ಸರ್ಕಾರದ ಜತೆ ಚರ್ಚೆ ನಡೆಸಿ ಮನವರಿಕೆ ಮಾಡಿಕೊಡುವ ಪ್ರಯತ್ನ ವಿಫಲ ಹಿನ್ನೆಲೆ ಅನಿವಾರ್ಯವಾಗಿ ಸರ್ಕಾರದ ಗಮನ ಸೆಳೆಯಲು ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಬಂದ್‌ಗೆ ಕರೆ ನೀಡಿದೆ.

ಪಠ್ಯ ಪರಿಷ್ಕರಣೆ

ಹತ್ತು ದಿನಗಳೊಳಗೆ ಕಿರು ಪುಸ್ತಕ ವಿತರಣೆ

ಬೆಂಗಳೂರು: ಪಠ್ಯಪುಸ್ತಕಗಳಲ್ಲಿನ ಬದ



ಲಾವಣೆಗಳನ್ನು ಒಳಗೊಂಡಿರುವ ಪೂರಕ ಕಿರುಪುಸ್ತಕಗಳನ್ನು 10 ದಿನಗಳೊಳಗೆ ವಿತರಿಸಲಾಗುವುದು ಎಂದು ಪ್ರಾಥಮಿಕ–ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಠ್ಯಪುಸ್ತಕಗಳಲ್ಲಿ ದೊಡ್ಡ ಮಟ್ಟದ ಬದಲಾವಣೆಗಳನ್ನು ಮಾಡಲಾಗಿಲ್ಲ. ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣೆ ಸಮಿತಿಯು ಮಾಡಿದ ಬದಲಾವಣೆಗಳನ್ನು ಮಾತ್ರ ಬದಲಿಸಲಾಗಿದೆ ಎಂದು ಹೇಳಿದರು.

ಮಕ್ಕಳ ಹಿತದೃಷ್ಟಿಯಿಂದ ಕೆಲವು ಅಧ್ಯಾಯಗಳನ್ನು ಸಂಪೂರ್ಣವಾಗಿ ಅಲ್ಲದಿದ್ದರೂ ನಂತರ ಪದಗಳು ಮತ್ತು ವಾಕ್ಯಗಳ ಮೂಲಕ ಬದಲಾಯಿಸುವ ನಿರ್ಧಾರವನ್ನು ತೆಗೆದುಕೊಂಡಿದ್ದೇವೆ. ಕಿರು ಪುಸ್ತಕಗಳನ್ನು ವಿತರಿಸುತ್ತಿರುವುದರಿಂದ ಶಿಕ್ಷಣ ಇಲಾಖೆಗೂ ದೊಡ್ಡ ಹೊರೆಯಾಗುವುದಿಲ್ಲ. ಸರಿಸುಮಾರು 10ರಿಂದ 12 ಲಕ್ಷ ವೆಚ್ಚವಾಗುತ್ತದೆ ಎಂದರು. ಕಿರು ಪುಸ್ತಕವನ್ನು ರೂಪಿಸಲು ತಾತ್ಕಾಲಿಕವಾಗಿ ಐವರು ಸದಸ್ಯರ ಸಮಿತಿಯನ್ನು ರಚಿಸಲಾಗಿದ್ದು, ಮುಂದಿನ ವಾರದೊಳಗೆ ವಿತರಿಸಲಾಗುತ್ತದೆ ಎಂದು ಹೇಳಿದರು.

ಬಿಜೆಪಿಯವರು ಕೇಂದ್ರದ ಮೇಲೆ ಒತ್ತಡ ಹಾಕಿ ಅನ್ನಭಾಗ್ಯಕ್ಕೆ ಅಕ್ಕಿ ತರಲಿ

ಬೆಂಗಳೂರು, ಜೂ.18– ಬಿಜೆಪಿಯವರಿಗೆ ನಿಜವಾಗಿಯೂ ಬಡವರ ಬಗ್ಗೆ ಕಾಳಜಿ ಇದ್ದರೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಅಕ್ಕಿ ಕೊಡಿಸುವ ಕೆಲಸ ಮಾಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾನುವಾರ ಸುದ್ದಿಗಾರರ ಜತೆಗೆ ಮಾತನಾಡಿ, ಭಾರತೀಯ ಆಹಾರ ನಿಗಮದ ಡಿಜಿಎಂ ಹರೀಶ್ ಜತೆಗೆ ನಾನೇ ಮಾತನಾಡಿದ್ದೆ. 7 ಲಕ್ಷ ಟನ್ ಅಕ್ಕಿ ಸಂಗ್ರಹ ಇದೆ. ಅಕ್ಕಿ ನೀಡುವುದಕ್ಕೇನು ಸಮಸ್ಯೆ ಇಲ್ಲ ಎಂದು ಅವರು ಹೇಳಿದ್ದರು. 2.28 ಲಕ್ಷ ಟನ್ ಅಕ್ಕಿ ನೀಡುವಂತೆ ನಾವು ಜೂ.9ರಂದು ಆಹಾರ ನಿಗಮಕ್ಕೆ ಪತ್ರ ಬರೆದಿದ್ದೆವು. ಅಕ್ಕಿ ಪೂರೈಕೆ ಮಾಡಲಾಗುವುದು ಎಂದು ಜೂ.12ಕ್ಕೆ ಪತ್ರ ಬರೆದಿದ್ದರು. ಆನಂತರ ಅಕ್ಕಿ ನೀಡಬಾರದು ಎಂದು ಕೇಂದ್ರ ಗ್ರಾಹಕ ಇಲಾಖೆ ಆಹಾರ ನಿಗಮದ ವ್ಯವಸ್ಥಾಪಕ



ನಿರ್ದೇಶಕರಿಗೆ ಪತ್ರ ಬರೆದಿದ್ದರು. ಅಕ್ಕಿ ಕೊಡುವುದಿಲ್ಲ ಎಂದು ನಿಗಮವು ನಮಗೆ ಜೂ.14ಕ್ಕೆ ಪತ್ರ ಬರೆದಿದೆ ಎಂದು ವಿವರಿಸಿದರು. 5 ಕೆ.ಜಿ. ಅಕ್ಕಿ ನೀಡಿ ಉಳಿದ 5 ಕೆ.ಜಿ. ಅಕ್ಕಿಯ ದರವನ್ನು ಫಲಾನುಭವಿಗಳ ಖಾತೆಗೆ ಹಾಕಿ ಎಂದು ಬಿಜೆಪಿ ನಾಯಕರು ಸಲಹೆ ನೀಡುವ ಬದಲು ಅವರೇ ಕೇಂದ್ರದ ಮೇಲೆ ಒತ್ತಡ ಹಾಕಲಿ. ಬಡವರ ಕಾರ್ಯಕ್ರಮದಲ್ಲಿ ರಾಜಕೀಯ ಬೇಡ. ಅಕ್ಕಿ ಕೊಡಿ ಎಂದು ಹೇಳಬೇಕಿತ್ತು. ಕೇಂದ್ರ ಸರ್ಕಾರವು ಯಾಕೆ ಅಡ್ಡಿಪಡಿಸಬೇಕು. ದ್ವೇಷ ರಾಜಕಾರಣ ಯಾಕೆ ಮಾಡಬೇಕಿತ್ತು ▶ 8ನೇ ಪುಟಕ್ಕೆ

ಅಕ್ಕಿ ವಿತರಣೆ ರಾಜ್ಯ ಸರ್ಕಾರದ ಜವಾಬ್ದಾರಿ; ಎಲ್ಲಾದರೂ ಖರೀದಿ ಮಾಡಿಕೊಡಲಿ

ಶಿವಮೊಗ್ಗ, ಜೂ.18– ಅಕ್ಕಿ ವಿತರಣೆ



ರಾಜ್ಯ ಸರ್ಕಾರದ ಜವಾಬ್ದಾರಿ, ಕಾಂಗ್ರೆಸ್ ಎಲ್ಲಿಯಾದರೂ ಖರೀದಿ ಮಾಡಿಕೊಡಲಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ. ಶಿವಮೊಗ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ಕಿ ವಿತರಣೆ ವಿಚಾರದಲ್ಲಿ ಕಾಂಗ್ರೆಸ್ ಉದ್ದೇಶಪೂರ್ವಕವಾಗಿ ಗೊಂದಲ ಸೃಷ್ಟಿಸುತ್ತಿದೆ. ಈಗಾಗಲೇ ಕೇಂದ್ರ ಸರ್ಕಾರ 5 ಕೆ.ಜಿ. ಅಕ್ಕಿ ಉಚಿತವಾಗಿ ಕೊಡುತ್ತಿದೆ. ಹೆಚ್ಚುವರಿಯಾಗಿ ಅಕ್ಕಿ ಕೊಡಲು ಕೇಂದ್ರ ಒಪ್ಪಿರಲಿಲ್ಲ. ಅದು ರಾಜ್ಯ ಸರ್ಕಾರದ ಜವಾಬ್ದಾರಿ, ಎಲ್ಲಿಯಾದರೂ ಖರೀದಿ ಮಾಡಿಕೊಡಲಿ ಎಂದು ಹೇಳಿದರು.

ಕಾಂಗ್ರೆಸ್ ನಾಯಕರು 10 ಕೆ.ಜಿ. ಅಕ್ಕಿ ವಿತರಣೆ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಅದರಂತೆ ಅಕ್ಕಿ ವಿತರಣೆ ಮಾಡಬೇಕು. 1 ಗ್ರಾಂ ಕಡಿಮೆಯಾದರೂ ಜನ ಅದನ್ನು ಒಪ್ಪುವುದಿಲ್ಲ. ಕೇಂದ್ರ ಸರ್ಕಾರವನ್ನು ಅನಗತ್ಯ ದೂಷಿಸುವುದು ಸರಿಯಲ್ಲ. ಯಾವುದೇ ಸಮಯದಲ್ಲೂ ಮೋದಿಯವರು ಹೆಚ್ಚುವರಿ ಅಕ್ಕಿ ಕೊಡುತ್ತೇವೆ ಎಂದು ಹೇಳಿಲ್ಲ. ಈಗ 5 ಕೆ.ಜಿ. ಕೊಡುತ್ತಿರುವುದು ಕೂಡ ಕೇಂದ್ರ ಸರ್ಕಾರ, ಅದು ಉಚಿತವಾಗಿ ಎಂದರು.

ಇದೇ ವೇಳೆ ವಿಪಕ್ಷ ನಾಯಕನ ಆಯ್ಕೆ ವಿಚಾರ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಸದನ ಆರಂಭವಾಗುವುದರೊಳಗೆ ವಿಪಕ್ಷ ನಾಯಕನ ಆಯ್ಕೆ ಮಾಡುತ್ತೇವೆ. ಅದರಲ್ಲಿ ಏನೂ ವಿಶೇಷ ಇಲ್ಲ ಎಂದು ಯಡಿಯೂರಪ್ಪ ಹೇಳಿದರು.

ಚುನಾವಣಾ ರಾಜಕೀಯದಿಂದ ಸಂಸದ ಡಿ.ಕೆ.ಸುರೇಶ್ ನಿವೃತ್ತಿ?

ಬೆಂಗಳೂರು, ಜೂ.18– ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವಿನ ಹುಮ್ಮಸ್ಸಿನಲ್ಲಿರುವ ಕಾಂಗ್ರೆಸ್ ಮುಂದಿನ ವರ್ಷ ಎದುರಾಗಲಿರುವ ಲೋಕಸಭೆ ಚುನಾವಣೆಗೆ ಭರ್ಜರಿ ತಯಾರಿ ನಡೆಸಿದೆ. ರಾಜ್ಯದಲ್ಲಿ ಒಟ್ಟು 28 ಕ್ಷೇತ್ರಗಳಲ್ಲಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲಲು ಕಾಂಗ್ರೆಸ್ ಪಣತೊಟ್ಟಿದೆ. ಆದರೆ, ಇದರ ಮಧ್ಯೆ 2019ರ ಲೋಕಸಭೆ ಚುನಾವಣೆಯ ರಾಜ್ಯದ ಏಕೈಕ ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ರಾಜಕೀಯದ ಬಗ್ಗೆ ವೈರಾಗ್ಯದ ಮಾತುಗಳನ್ನಾಡುತ್ತಿದ್ದಾರೆ. ಅಲ್ಲದೇ ಇದೀಗ ರಾಜಕಾರಣದಿಂದ ಹಿಂದೆ ಸರಿಯುವ ಮಾತುಗಳನ್ನಾಡಿದ್ದು, ರಾಜ್ಯ ಕಾಂಗ್ರೆಸ್‌ನಲ್ಲಿ ಸಂಚಲನ ಮೂಡಿಸಿದೆ. ಬೆಂಗಳೂರಿನಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಡಿಕೆ ಸುರೇಶ್, ರಾಜಕಾರಣದಲ್ಲಿ ನೆಮ್ಮದಿ ಎನ್ನುವುದೇ ಇಲ್ಲ. ರಾಜಕೀಯ ಅಂದರೆ ಹೊರಗೆ ಜನರ ಬಳಿಯೂ ನೆಮ್ಮದಿ ಇಲ್ಲ. ಜೊತೆಗೆ ಇರುವವರ ಬಳಿಯೂ ನೆಮ್ಮದಿ ಇಲ್ಲ.



ರಾಜಕಾರಣ ಸಾಕಾಗಿದೆ. ಹೀಗಾಗಿ ರಾಜಕಾರಣದಿಂದ ದೂರ ಉಳಿಯುತ್ತೇನೆ ಎಂದು ಮತ್ತೊಮ್ಮೆ ಪುನರುಚ್ಚರಿಸಿದರು.

ಪಕ್ಷವನ್ನು ಅಧಿಕಾರಕ್ಕೆ ತರಲು ಕಷ್ಟ ಪಟ್ಟವರು ಸಂತೋಷವಾಗಿದ್ದಾರೆ. ಅವರೆಲ್ಲಾ ಅಧಿಕಾರದಲ್ಲಿ ಇದ್ದಾರೆ. ಸಂತೋಷವಾಗಿ ಅನುಭವಿಸಲಿ. ನನಗೆ ರಾಜಕಾರಣ ಬೇಡ ಎಂದು ಪರೋಕ್ಷವಾಗಿ ಸಿದ್ದರಾಮಯ್ಯಗೆ ಟಾಂಗ್ ಕೊಟ್ಟ ಡಿಕೆ ಸುರೇಶ್, ನಾನು ನನ್ನ ಮನಸ್ಸಿನಲ್ಲಿರುವ ವಿಚಾರವನ್ನು ಕಾರ್ಯಕರ್ತರ ಬಳಿ ತಿಳಿಸಿದ್ದೇನೆ. ಬೇರೆಯವರಿಗೆ ಅವಕಾಶ ಆಗಬೇಕು ಎನ್ನುವುದು ನನ್ನ ಉದ್ದೇಶ. ಸಾಕಷ್ಟು ಜನನಾಯಕರು ಇದ್ದಾರೆ. ನಾನು ಕಾರ್ಯಕರ್ತನಾಗಿ ಕೆಲಸ ಮಾಡಲು ಸಿದ್ಧವಾಗಿದ್ದೇನೆ ಎಂದು ಸ್ಪಷ್ಟಪಡಿಸಿದರು. ಇನ್ನೂ 11 ತಿಂಗಳ ಅವಕಾಶ ಇದೆ. ಕ್ಷೇತ್ರದ ಜನರಿಗೆ ನ್ಯಾಯ ಒದಗಿಸುವ ▶ 8ನೇ ಪುಟಕ್ಕೆ

ಅಣ್ಣ ಸಿಎಂ ಆಗಲ್ಲ ಎಂದು ಗೊತ್ತಾಗಿದಕ್ಕೆ ಡಿ.ಕೆ.ಸುರೇಶ್ ನಿವೃತ್ತಿ ಮಾತನಾಡುತ್ತಿದ್ದಾರೆ

ಬೆಂಗಳೂರು, ಜೂ.18– ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಲ್ಲ, ಪವರ್ ಶೇರಿಂಗ್ ಆಗಲ್ಲ, ಅಧಿಕಾರ ಹಂಚಿಕೆ ಎಂಬುದು ಒಂದು ನಾಟಕವಷ್ಟೇ ಎಂದು ಮಾಜಿ ಸಚಿವ ಆರ್.ಅಶೋಕ್ ತಿಳಿಸಿದ್ದಾರೆ.




ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಆರ್.ಅಶೋಕ್, ಡಿ.ಕೆ.ಶಿವಕುಮಾರ್ ಅವರದ್ದು ಮುಖ್ಯಮಂತ್ರಿ ಕನಸಷ್ಟೇ. ಯಾವ ಕಾರಣಕ್ಕೂ ಡಿ.ಕೆ. ಶಿವಕುಮಾರ್ ಸಿಎಂ ಆಗಲ್ಲ. ಚಾಣಾಕ್ಷ ರಾಜಕಾರಣಿ ಸಿದ್ದರಾಮಯ್ಯ ಅವರು ಡಿಕೆಶಿ ಅವರಂಥ ರಾಜಕಾರಣಿಯನ್ನು ಬಹಳಷ್ಟು ನೋಡಿದ್ದಾರೆ. ರಾಜಸ್ತಾನ, ಮಧ್ಯಪ್ರದೇಶದಲ್ಲಿಯೂ ಮೊದಲಿಗೆ ಅಧಿಕಾರ ಹಂಚಿಕೆ ಎಂದು ಹೇಳಲಾಗಿತ್ತು ಆದರೆ ಅಧಿಕಾರ ಹಂಚಿಕೆಗೆ ಒಪ್ಪಲಿಲ್ಲ. ಆ ಎರಡೂ ರಾಜ್ಯದ ನಾಯಕರಿಗಿಂತಲೂ ▶ 8ನೇ ಪುಟಕ್ಕೆ

ಜು.1ಕ್ಕೆ 10 ಕೆ.ಜಿ. ಅಕ್ಕಿ ಕೊಡದಿದ್ದರೆ ಪ್ರತಿಭಟನೆ

ಹುಬ್ಬಳ್ಳಿ, ಜೂ.18– ಜುಲೈ 1ರಂದು ರಾಜ್ಯ ಸರ್ಕಾರ ಬಡವರಿಗೆ 10 ಕೆ.ಜಿ. ಅಕ್ಕಿ ಕೊಡದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಹುಬ್ಬಳ್ಳಿಯ ಛಬ್ಬಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ಕಿ ವಿಷಯವಾಗಿ ಕಾಂಗ್ರೆಸ್ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಬೇಕಿತ್ತು. ಇದೀಗ ಅಕ್ಕಿ ಬರಲ್ಲ ಎಂದು ಕುಂಟು ನೆಪ ಹೇಳುತ್ತಿದ್ದಾರೆ. ಇದು ಕಾಂಗ್ರೆಸ್ ಗ್ಯಾರಂಟಿಯಿಂದ ಹಿಂದೆ ಹೋದಂತೆ ಅರ್ಥ. ಇದೀಗ ಛತ್ತೀಸ್‌ಗಡದಿಂದ ಅಕ್ಕಿ ತರುತ್ತೇವೆ ಎನ್ನುತ್ತಿದ್ದಾರೆ. ನಮಗೆ ಬಡ ಜನರಿಗೆ ಒಳ್ಳೆಯದಾದರೆ ಸಾಕು ಎಂದರು.



ಅಕ್ಕಿಯನ್ನು ಎಲ್ಲಿಂದ ತೆಗೆದುಕೊಳ್ಳಬೇಕು, ಹೇಗೆ ತೆಗೆದುಕೊಳ್ಳಬೇಕು ಎಂಬ ಪ್ರಶ್ನೆ ಇದೆ. ರಾಜ್ಯದ ರೈತರು ಅಕ್ಕಿ ಕೊಡುವುದಕ್ಕೆ ಮುಂದೆ ಬಂದರೆ ಅದನ್ನು ಖರೀದಿ ಮಾಡಬೇಕು. ಬಿಜೆಪಿಯವರೇ ಕೊಡಿಸಿ ಎನ್ನುವುದು ಸರಿಯಲ್ಲ. ▶ 8ನೇ ಪುಟಕ್ಕೆ

ಸಮಸ್ಯೆಗಳ ಆಗರವಾಗಿರುವ ಕೆ.ಆರ್.ಆಸ್ಪತ್ರೆ

■ ರೋಗಿಗಳಿಗೆ ಪೂರಕ ವ್ಯವಸ್ಥೆ ಕಲ್ಪಿಸಲು ಸರ್ಕಾರಕ್ಕೆ ಶಿಫಾರಸು ■ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ



ಮೈಸೂರು,ಜೂ.18(ಎಂಟಿವೈ)–ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ಹಲವು ಸಮಸ್ಯೆಗಳಿವೆ. ಆಸ್ಪತ್ರೆಗೆ ಮೂಲ ಸೌಲಭ್ಯಗಳ ಕೊರತೆ ನೀಗಿಸಿ, ರೋಗಿಗಳಿಗೆ ಪೂರಕವಾದ ವ್ಯವಸ್ಥೆ ಕಲ್ಪಿಸುವುದಕ್ಕಾಗಿ ಸರ್ಕಾರಕ್ಕೆ ವರದಿ ಸಲ್ಲಿಸಿ ಹಲವು ಶಿಫಾರಸ್ಸು ಮಾಡುವುದಾಗಿ ಉಪಲೋಕಾಯುಕ್ತ ಕೆ.ಎನ್. ಫಣೀಂದ್ರ ತಿಳಿಸಿದ್ದಾರೆ. ಕೆ.ಆರ್.ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕೆಆರ್.ಆಸ್ಪತ್ರೆಯಲ್ಲಿ ನವೀಕರಣ ಕಾಮಗಾರಿ ನಡೆಯುತ್ತಿದೆ. ಆಸ್ಪತ್ರೆಯಲ್ಲಿ ಕಾಲಕಾಲಕ್ಕೆ ನಿರ್ವಹಣೆ ಮಾಡದ ಕಾರಣ ಗೋಡೆ ಶಿಥಿಲಗೊಂಡಿವೆ. ಮಳೆ ನೀರು ಗೋಡೆಗೆ ಇಳಿದು ದುರ್ಬಲಗೊಂಡಿವೆ. ಆಸ್ಪತ್ರೆಯಲ್ಲಿ ಶುಚಿತ್ವ ಕಾಪಾಡದೆ ಇರುವುದು ಕಂಡುಬಂದಿದೆ. ಡೀನ್ ಮತ್ತು ವೈದ್ಯರು ಆಸ್ಪತ್ರೆ ವಾತಾವರಣ ಸ್ವಚ್ಛವಾಗಿಡಲು ಕ್ರಮ ಕೈಗೊಳ್ಳಬೇಕು. ನಿತ್ಯ ನಿರ್ವಹಣೆ ಮಾಡುವಂತೆ ನೋಡಿಕೊಳ್ಳಬೇಕು. ರೋಗಿಗಳು ಕೂರಲು ಹೊರಗೆ ಸರಿಯಾದ ವ್ಯವಸ್ಥೆ ಇಲ್ಲ. ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಅಗತ್ಯವಿರುವ ಅನುದಾನ ಬಿಡುಗಡೆಗೆ ಸಲಹೆ ನೀಡಲಾಗುವುದು. ರೋಗಿಗಳ ಮತ್ತು ಸಂಬಂಧಿಕರಿಂದ ಹಣಕ್ಕೆ ಡಿಮ್ಯಾಂಡ್ ಮಾಡುವುದನ್ನು ತಪ್ಪಿಸಬೇಕು. ಈ ಬಗ್ಗೆ ಆಗಿಂದಾಗ್ಗೆ ಸಭೆ ಕರೆದು ತಿಳುವಳಿಕೆ, ಎಚ್ಚರಿಕೆ ಕೊಡಬೇಕು ಎಂದು ನುಡಿದರು.



> “ಆಸ್ಪತ್ರೆಯಲ್ಲಿ ಸಾರ್ವಜನಿಕ ಸಮಸ್ಯೆಗಳು ಹೆಚ್ಚಾಗಿವೆ. ಕೆಲವು ರೋಗಿಗಳು ನೀಡಿರುವ ದೂರಿನಂತೆ ಇಂಜೆಕ್ಷನ್, ಔಷಧಿ ಸೇರಿದಂತೆ ಕೆಲ ಚಿಕಿತ್ಸಾ ವಸ್ತುವನ್ನು ಹೊರಗಿನಿಂದ ತರಲು ಹೇಳುತ್ತಿರುವುದು ತಿಳಿದುಬಂದಿದೆ. ಎಕ್ಸ್‌ರೇ, ಸ್ಕ್ಯಾನಿಂಗ್, ರಕ್ತ ಪರೀಕ್ಷೆ ಸೇರಿದಂತೆ ಕೆಲವು ಖಾಸಗಿ ಲ್ಯಾಬ್‌ನಿಂದ ಪರೀಕ್ಷೆ ಮಾಡಿಸಿಕೊಂಡು ಬರುವುದಕ್ಕೆ ಹೇಳುತ್ತಿರುವುದಾಗಿ ದೂರು ನೀಡಿದ್ದಾರೆ. ಬಿಪಿಎಲ್ ಕಾರ್ಡ್‌ವುಳ್ಳವರಿಗೆ ಉಚಿತ ಚಿಕಿತ್ಸೆ ನೀಡಬೇಕಾಗಿದೆ. ಬಿಪಿಎಲ್ ಕಾರ್ಡ್ ಹೊಂದಿರುವವರು ಖಾಸಗಿ ಲ್ಯಾಬ್‌ಗಳಲ್ಲಿ ಪರೀಕ್ಷೆ ಮಾಡಿಸಿಕೊಂಡು ಹಣ ಪಾವತಿಸಿರುವ ಬಿಲ್ ಇದ್ದರೆ, ಅವರಿಗೆ ಸರ್ಕಾರದಿಂದ ಹಣ ಪಾವತಿಸಲು ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ. ಔಷಧಗಳ ದಾಸ್ತಾನು ದಾಖಲಾತಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಆಸ್ಪತ್ರೆ ಆವರಣದಲ್ಲಿ ಶುಚಿತ್ವಕ್ಕೆ ಆದ್ಯತೆ ನೀಡುವಂತೆ ತಿಳಿಸಿದ್ದೇನೆ.
>
> **–ಕೆ.ಎನ್.ಫಣೀಂದ್ರ, ಉಪಲೋಕಾಯುಕ್ತ**

ಬಾಲಕಿಯರ ಬಾಲಮಂದಿರಕ್ಕೆ ಭೇಟಿ: ಕೆ.ಆರ್.ಆಸ್ಪತ್ರೆ ಭೇಟಿ ಬಳಿಕ ಲಲಿತಮಹಲ್ ರಸ್ತೆಯಲ್ಲಿರುವ ಮಹಿಳಾ ಮತ್ತು ಮಕ್ಕಳ ಇಲಾಖೆಯ ಬಾಲಕಿಯರ ಬಾಲಮಂದಿರಕ್ಕೆ ಭೇಟಿ ನೀಡಿದ ಉಪಲೋಕಾಯುಕ್ತರು, ಅಲ್ಲಿನ ಮಕ್ಕಳೊಂದಿಗೆ ಚರ್ಚಿಸಿದರು. ಬಾಲಮಂದಿರದಲ್ಲಿ ಉತ್ತಮವಾದ ವಾತಾವರಣ ನಿರ್ಮಾಣ ಮಾಡಬೇಕು. ಮಕ್ಕಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಬಾರದು. ಹಲ್ಲೆ ಮಾಡುವುದು, ಶುಚಿ–ರುಚಿ ಊಟದ ವ್ಯವಸ್ಥೆ ಮಾಡಬೇಕು. ಶೌಚಾಲಯದಲ್ಲಿ ಸ್ವಚ್ಛತೆ ಕಾಪಾಡಬೇಕು. 15 ದಿನದೊಳಗೆ ಬಾಲಮಂದಿರದ ವಾತಾವರಣದಲ್ಲಿನ ನ್ಯೂನತೆ ಸರಿಸಪಡಿಸಿ ವರದಿ ನೀಡುವಂತೆ ಸೂಚಿಸಿದರು. ಮಕ್ಕಳನ್ನು ಪ್ರೀತಿ ವಿಶ್ವಾಸದಿಂದ ಕಾಣುವ ಸಿಬ್ಬಂದಿಗಳನ್ನು ಬಾಲಮಂದಿರಕ್ಕೆ ನಿಯೋಜಿಸಬೇಕು. ಪೋಷಕರು ಭೇಟಿ ಮಕ್ಕಳಿಗೆ ಅವಕಾಶ ಮಾಡಿಕೊಡಬೇಕು. ಮಕ್ಕಳಿಗೆ ಬೇಕಾದ ಮೂಲ ಸೌಲಭ್ಯ ಕಲ್ಪಿಸಬೇಕು. ಮಕ್ಕಳಿಗೆ ಬೇಕಾದ ಆಟದ ಸಲಕರಣೆಗಳನ್ನು ನೀಡಲು ಅಗತ್ಯ ಕ್ರಮವಹಿಸಬೇಕು ಎಂದರು.

ಬಾಲಕರ ಬಾಲಮಂದಿರಕ್ಕೆ ಭೇಟಿ, ಪರಿಶೀಲನೆ: ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಬಾಲಮಂದಿರಕ್ಕೆ ಭೇಟಿ ನೀಡಿದ ಉಪಲೋಕಾಯುಕ್ತರು ಬಾಲಮಂದಿರದ ವ್ಯವಸ್ಥೆಯನ್ನು ಪರಿಶೀಲಿಸಿದರು. ಅಲ್ಲದೆ ಮಕ್ಕಳೊಂದಿಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಲೋಕಾಯುಕ್ತ ಉಪನಿಬಂಧಕರಾದ ಚೆನ್ನಕೇಶವರೆಡ್ಡಿ, ಅಪರ ನಿಬಂಧಕ ಶಿವಕುಮಾರ್ ಹಾಗೂ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಶಕ್ತಿ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ಕರೆ

ಮೈಸೂರು, ಜೂ.18(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿಯಲ್ಲಿ ರಾಜ್ಯದ ಮಹಿಳೆಯರಿಗಾಗಿ ಸರ್ಕಾರ ಜಾರಿಗೆಗೊಳಿಸಿರುವ 'ಶಕ್ತಿ ಯೋಜನೆ' ಉತ್ತಮ ಯೋಜನೆಯಾಗಿದ್ದು, ಇದನ್ನು ಬಹಳ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೆಎಸ್‌ಆರ್‌ಟಿಸಿ ನೌಕರರು ಶ್ರಮಿಸುವಂತೆ ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಕರೆ ನೀಡಿದೆ.




ಅನಂತ ಸುಬ್ಬರಾವ್

ಜೂ.11ರಿಂದ ಕೆಎಸ್‌ಆರ್‌ಟಿಸಿಯಲ್ಲಿ ಮಹಿಳೆಯರು ರಾಜ್ಯ ವ್ಯಾಪ್ತಿ ಉಚಿತವಾಗಿ ಪಯಾಣಿಸಲು ಅವಕಾಶ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಉತ್ತಮ ನಿರ್ಧಾರವಾಗಿದ್ದು, ಇದರಿಂದ ಕೆಎಸ್‌ಆರ್‌ಟಿಸಿ ಸಂಸ್ಥೆಗೂ ಉತ್ತಮ ಲಾಭಾಂಶ ತರಲಿದೆ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಹೆಚ್.ವಿ. ಅನಂತ ಸುಬ್ಬರಾವ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಈ ನಿರ್ಧಾರದಿಂದ ಗ್ರಾಹಕರನ್ನು ಸುಲಿಗೆ ಮಾಡುತ್ತಿದ್ದ ಖಾಸಗಿ ಬಸ್ ಮಾಲೀಕರಿಗೂ ಬಿಸಿ ತಟ್ಟಲಿದ್ದು, ಕ್ರಮೇಣ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಸುವ ಸಂಖ್ಯೆ ಕಡಿಮೆಯಾಗಲಿದೆ. ಈ ಅವಕಾಶ ಬಳಸಿಕೊಂಡು ನಾಲ್ಕು ನಿಗಮದ ನೌಕರರು ಬೆಳವಣಿಗೆ ಶ್ರಮಿಸುವಂತೆ ಮನವಿ ಮಾಡಿದ್ದಾರೆ.

ಈಗಲೂ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಖಾಸಗಿ ಬಸ್ ಹಾವಳಿ ಹೆಚ್ಚಾಗಿದ್ದು, ಇದರಿಂದ ಮಹಿಳೆಯರಿಗಾಗಿ ಜಾರಿಗೆ ತಂದಿರುವ 'ಶಕ್ತಿ ಯೋಜನೆ'ಯ ಲಾಭ ಲಭ್ಯವಾಗುವುದಿಲ್ಲ. ಪರ್ಯಾಯ ಮಾರ್ಗವಿಲ್ಲದ ಈ ಜಿಲ್ಲೆಯ ಮಹಿಳೆಯರು ಹಣ ಕೊಟ್ಟು ಸಂಚರಿಸುವ ಅನಿವಾರ್ಯತೆ ಎದುರಾಗಿದೆ ಸರ್ಕಾರಿ ಬಸ್ ಕಡಿಮೆ ಸಂಚರಿಸುವ ಕಡೆ, ಹೆಚ್ಚಿನ ಬಸ್‌ಗಳ ಕಾರ್ಯಾಚರಣೆ ಆರಂಭಿಸುವಂತೆ ಮನವಿ ಮಾಡಿದ್ದಾರೆ.

ಹಿಂದಿನ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯದ ಜನತೆ ಹೆಚ್ಚಿನ ಸಾರಿಗೆ ಸೇವೆ ಒದಗಿಸಲು ನಿಗಮಗಳ ಮೂಲಕ 'ಸಮಗ್ರ ಪ್ರದೇಶ ಯೋಜನೆ' ಅಳವಡಿಸಿದ್ದೀರಿ. ಈ ನೀತಿ ಪ್ರಕಾರ ರಾಜ್ಯದಲ್ಲಿ ಯಾವುದೇ ರೀತಿಯ ಸಾರಿಗೆ ಸೇವೆ ಒದಗಿಸುವ ಹಕ್ಕು ಈ 4 ನಿಗಮಗಳಿಗೆ ನೀಡಲಾಗಿತ್ತು. ಕೆಎಸ್‌ಆರ್‌ಟಿಸಿಯ 4 ನಿಗಮಗಳ ಸುಧಾರಣೆಗಾಗಿ ರಚಿಸಿರುವ ಏಕ ಸದಸ್ಯ ಸಮಿತಿಯ ಎಂ.ಆರ್.ಶ್ರೀನಿವಾಸ ಮೂರ್ತಿ ವರದಿಯಲ್ಲಿ ಉಲ್ಲೇಖವಾಗಿರುವಂತೆ ಬಸ್‌ಗಳ ಸಂಚಾರವೇ ಇಲ್ಲದ 2,500ಕ್ಕೂ ಹಳ್ಳಿಗಳನ್ನು ಗುರುತಿಸಿದ್ದು, ಈ ಸಮಸ್ಯೆಗೂ ಪರಿಹಾರ ಹುಡುಕುವಂತೆ ಮನವಿ ಮಾಡಿದ್ದಾರೆ.

ಸಿಎಸ್ ನೀತಿ ಮರು ಜಾರಿಗೊಳಿಸಿ: ಬದಲಾದ ಪರಿಸ್ಥಿತಿಯಲ್ಲಿ ಹಿಂದಿನ ಸರ್ಕಾರ ಈ ನಿಯಮಕ್ಕೆ ಬದಲಾವಣೆ ತಂದು ನಿಗಮಗಳಿಗೆ ಆರ್ಥಿಕವಾಗಿ ಲಾಭ ತರುತ್ತಿದ್ದ 41 ರೂಟ್‌ಗಳನ್ನು ಖಾಸಗಿಯವರಿಗೆ ವಹಿಸಿದಲ್ಲದೇ, ನಗರ ಪ್ರದೇಶದಲ್ಲಿ 20 ಕಿ.ಮೀವರೆಗೂ ಖಾಸಗಿ ಬಸ್‌ಗಳ ಓಡಾಟಕ್ಕೂ ಅನುಮತಿ ನೀಡಿತ್ತು. ಇದರಿಂದ ನಿಗಮಗಳ ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಜಾರಿಗೆ ತಂದಿದ್ದ ಸಮಗ್ರ ಪ್ರದೇಶ ಯೋಜನೆಯನ್ನು ಪುನಃ ಜಾರಿಗೊಳಿಸುವಂತೆ ಒತ್ತಾಯಿಸಿದ್ದಾರೆ.

ನೌಕರರ ನೇಮಕಕ್ಕೆ ಒತ್ತಾಯ

1976ರಲ್ಲಿ ಡಿ.ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ 'ದಿ ಕಾಂಟ್ರ್ಯಾಕ್ಟ್ ಕ್ಯಾರೇಜಸ್ ಅಬಾಲಿಷನ್ ಆಕ್ಟ್–1976ರ ನೀತಿಯನ್ನು ಪುನಃ ಜಾರಿಗೊಳಿಸಿದ್ದರಿಂದ ಕೆಎಸ್‌ಆರ್‌ಟಿಸಿ ಸಂಸ್ಥೆ ಇಂದು ದೊಡ್ಡ ಉದ್ಯಮವಾಗಿ ಬೆಳೆದಿದ್ದು, ಸಾರ್ವಜನಿಕರಿಗೆ ಉತ್ತಮ ಸೇವೆ ಹಾಗೂ 4 ನಿಗಮಗಳಲ್ಲಿ ಲಕ್ಷಾಂತರ ಮಂದಿಗೆ ಉದ್ಯೋಗ ಒದಗಿಸಲಾಗಿದೆ. ಡಿ.ದೇವರಾಜ ಅರಸು ಮುಖ್ಯಮಂತ್ರಿಗಳಾಗಿದ್ದಾಗ ಜಾರಿಗೊಂಡ ನೀತಿಯನ್ನು ಪುನಃ ಜಾರಿಗೊಳಿಸಿ, ಖಾಸಗಿ ಬಸ್‌ಗಳ ಸೇವೆಯನ್ನು ಕೆಎಸ್‌ಆರ್‌ಟಿಸಿಯಲ್ಲಿ ವಿಲೀನಗೊಳಿಸುವಂತೆ ಮನವಿ ಮಾಡಿದ್ದಾರೆ. ಸಾರಿಗೆ ನಿಗಮಗಳಲ್ಲಿ ಪ್ರಸ್ತುತ ಖಾಲಿ ಇರುವ 16, 969 ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಹೆಚ್.ವಿ.ಅನಂತ ಸುಬ್ಬರಾವ್ ಒತ್ತಾಯಿಸಿದ್ದಾರೆ.

ವಿದ್ಯುತ್ ದರ ಹೆಚ್ಚಳ: ಕೈಗಾರಿಕೆಗಳಿಗೆ ಸಂಕಷ್ಟ

ಮೈಸೂರು, ಜೂ.18(ಬಿಎಲ್‌ಯು)– ಕಾಂಗ್ರೆಸ್ ಸರ್ಕಾರದ ಗೃಹಜ್ಯೋತಿ ಸ್ಕೀಂನಿಂದ ಜನ ಸಾಮಾನ್ಯರಿಗೆ ಅನುಕೂಲವಾಗಿದೆ. ಆದರೆ ವಿದ್ಯುತ್ ಬೆಲೆ ಹೆಚ್ಚಳ ಮಾಡಿರುವ ಕಾರಣ ಮೈಸೂರಿನ ಕೈಗಾರಿಕೋದ್ಯಮ ತೀವ್ರ ಸಂಕಷ್ಟ ಎದುರಿಸಲಿದೆ.



ಮೈಸೂರಿನಲ್ಲಿ 26 ಸಾವಿರ ಸಣ್ಣ, ಸೂಕ್ಷ್ಮ ಕೈಗಾರಿಕೆಗಳಿವೆ. 126 ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳಿವೆ. ಇನ್ನು 165 ರಫ್ತು ಉದ್ಯಮವಿದೆ. ಇದರ ಜೊತೆಗೆ 46 ಸಾವಿರ ಎಂಎಸ್‌ಎಂಇ ಉದ್ಯಮಗಳಿವೆ. ರಾಜ್ಯ ಸರ್ಕಾರ ವಿದ್ಯುತ್ ದರ ಹೆಚ್ಚಳ ಮಾಡಿರುವ ಕಾರಣ 1 ಯೂನಿಟ್ ಬೆಲೆ ದುಬಾರಿಯಾಗಿದೆ. 1 ಯೂನಿಟ್‌ಗೆ 3.12 ರೂ. ಕೈಗಾರಿಕೆಗಳ ಮೇಲೆ ಹೊರೆಯಾಗಿದೆ. ಇದರಿಂದ 50 ಸಾವಿರ ರೂ. ಬಿಲ್ ಪಾವತಿ ಮಾಡುತ್ತಿರುವ ಉದ್ಯಮಿ 70ರಿಂದ 80 ಸಾವಿರ ರೂ. ಪಾವತಿ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಡೀಸೆಲ್ ಹಾಗೂ ಕಲ್ಲಿದ್ದಲು ಬೆಲೆ ವ್ಯತ್ಯಾಸದ ಶುಲ್ಕವನ್ನು ಸರ್ಕಾರ ಗ್ರಾಹಕರ ಮೇಲೆ ಹೊರೆಸಿದೆ. ಇದನ್ನು ಸರ್ಕಾರ ಇಂಧನ ವ್ಯತ್ಯಾಸ ಶುಲ್ಕ ಎಂದು ಹೆಸರಿಸಿದ್ದು, 1 ಯೂನಿಟ್‌ಗೆ 2.42 ರೂ. ಆಗಿದೆ. ವಿದ್ಯುತ್ ತಯಾರಿಸಲು ಬಳಸುವ ಕಲ್ಲಿದ್ದಲು ಹಾಗೂ ಇಂಧನದ ದರ ಹೆಚ್ಚಾದಂತೆ ಅದರ ಹೊರೆಯನ್ನು ಸರ್ಕಾರ ಅಂತಿಮವಾಗಿ ಗ್ರಾಹಕರ ಮೇಲೆ ಹೊರೆಸುತ್ತಿದೆ. ಈಗಿರುವ ಸಂಕಷ್ಟದ ವೇಳೆ ಕೈಗಾರಿಕೆ ನಡೆಸುವುದು ಕಷ್ಟ, ಆದ ಕಾರಣ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ದರ ಹೆಚ್ಚಳ ಮಾಡದಂತೆ ಮೈಸೂರಿನ ಕೈಗಾರಿಕೋದ್ಯಮಿಗಳು ಕೆಇಆರ್‌ಸಿಗೆ ಮನವಿ ಮಾಡಿದ್ದರು. ಆದ ಪರಿಣಾಮ ಎಸ್ಕಾಂಗಳು ಕೇಳಿದಷ್ಟು ದರ ಹೆಚ್ಚಳ ಮಾಡದೆ ಸಮತೋಲನವಾಗಿ ದರ ಹೆಚ್ಚಳ ಮಾಡಲು ಕೆಇಆರ್‌ಸಿ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಈಗ ಸರ್ಕಾರ ಇಷ್ಟು ದರ ಹೆಚ್ಚಳ ಮಾಡಿದೆ ಎಂದು ಮೈಸೂರಿನ ಕೈಗಾರಿಕೋದ್ಯಮಿ ಸುರೇಶ್ ಕುಮಾರ್ ಜೈನ್ ತಿಳಿಸಿದ್ದಾರೆ.



ಉದ್ಯೋಗ ಮೇಳದಲ್ಲಿ 800 ಮಂದಿಗೆ ಉದ್ಯೋಗ

ಮೈಸೂರು, ಜೂ.18– ಮೈಸೂರು ಕಾಲೇಜ್ ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಉದ್ಯೋಗ ಮೇಳದಲ್ಲಿ 800ಕ್ಕೂ ಅಭ್ಯರ್ಥಿಗಳು ಉದ್ಯೋಗ ಪಡೆದುಕೊಂಡರು.

ಕಾಲೇಜು ಮತ್ತು ಮಾನವ ಸಂಪನ್ಮೂಲ ಸಂಸ್ಥೆ ಲೀಡ್ ಟ್ರೈನಿಂಗ್ ಅಂಡ್ ಕಾರ್ಪೋರೇಟ್ ಸಲ್ಯೂಷನ್ ವತಿಯಿಂದ ಶನಿವಾರ ಕಾಲೇಜಿನ ಆವರಣದಲ್ಲಿ ಏರ್ಪಡಿಸಿದ್ದ ಬೃಹತ್ ಉದ್ಯೋಗ ಮೇಳದಲ್ಲಿ 4000ಕ್ಕೂ ಹೆಚ್ಚು ಅಭ್ಯರ್ಥಿಗಳು ಭಾಗವಹಿಸಿ, 61ಕ್ಕೂ ಹೆಚ್ಚು ಕಂಪನಿಗಳಲ್ಲಿ ಸುಮಾರು 800 ಅಭ್ಯರ್ಥಿಗಳು ಆಯ್ಕೆಗೊಂಡರು. ಮೇಳದಲ್ಲಿ ಕಾಲೇಜಿನ ಅಧ್ಯಕ್ಷ ಶಿವಪ್ಪ, ಕಾರ್ಯದರ್ಶಿ ಪ್ರೊ.ಎಂ.ಮಂಜುನಾಥ್, ಖಜಾಂಚಿ ಪೂರ್ಣಿಮಾ ಕಿರಣ್, ಟ್ರಸ್ಟಿ ಕೆ.ಎನ್.ಪುಟ್ಟಬುದ್ಧಿ, ಪ್ರಾಂಶುಪಾಲರಾದ ಡಾ.ಎಂ.ಎಸ್.ಪ್ರಭುಸ್ವಾಮಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಜೂ.27ರೊಳಗೆ ಪಡಿತರ ಪಡೆಯಿರಿ

ಮೈಸೂರು,ಜೂ.18–ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರ ಚೀಟಿದಾರರಿಗೆ ಜೂನ್–2023 ಮಾಹೆಯ ಪಡಿತರ ಚೀಟಿಯನ್ನು ವಿತರಿಸುತ್ತಿದ್ದು, ಸದರಿ ಪಡಿತರವನ್ನು ಜೂ.27 ರೊಳಗೆ ಪಡೆದುಕೊಳ್ಳಬೇಕು. ಈ ಸಂಬಂಧ ರಜೆ ದಿನಗಳಲ್ಲಿಯೂ ನ್ಯಾಯಬೆಲೆ ಅಂಗಡಿಗಳು ತೆರೆಯಲಾಗುತ್ತಿದ್ದು, ಜಿಲ್ಲೆಯ ಎಲ್ಲಾ ಪಡಿತರ ಚೀಟಿದಾರರು ಅಂತಿಮ ದಿನಾಂಕದೊಳಗೆ ಹತ್ತಿರದ ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ನೀಡಿ ಜೂನ್ ಮಾಹೆಯ ಪಡಿತರವನ್ನು ಪಡೆದುಕೊಳ್ಳುವುದು. ಅಂತ್ಯೋದಯ (ಎ.ಎ.ವೈ) ಪಡಿತರ ಚೀಟಿಗೆ ಅಕ್ಕಿ 21 ಕೆ.ಜಿ ಮತ್ತು ರಾಗಿ 14 ಕೆ.ಜಿ ಉಚಿತ, ಪಿ.ಹೆಚ್.ಹೆಚ್ (ಬಿ.ಪಿ.ಎಲ್/ಆದ್ಯತಾ) ಪ್ರತಿ ಯೂನಿಟ್‌ಗೆ ಅಕ್ಕಿ 4 ಕೆ.ಜಿ ಮತ್ತು ರಾಗಿ 2 ಕೆ.ಜಿ ಉಚಿತ ಹಾಗೂ ಎನ್.ಪಿ.ಹೆಚ್.ಹೆಚ್(ಎ.ಪಿ.ಎಲ್) ಏಕಸದಸ್ಯ ಪಡಿತರ ಚೀಟಿಗೆ ಅಕ್ಕಿ 5 ಕೆ.ಜಿ ಇಬ್ಬರು ಮತ್ತು ಹೆಚ್ಚಿನ ಸದಸ್ಯರಿರುವ ಪಡಿತರ ಚೀಟಿಗೆ 10 ಕೆ.ಜಿ ಅಕ್ಕಿಯನ್ನು ಪ್ರತಿ ಕೆ.ಜಿಗೆ 15 ರೂಪಾಯಿಗಳಂತೆ ನೀಡಲಾಗುವುದು ಇದರ ಜೊತೆಗೆ ಅಂತರ ನ್ಯಾಯಬೆಲೆ ಅಂಗಡಿ, ಅಂತರ ಜಿಲ್ಲೆ, ಅಂತರರಾಜ್ಯ ಪಡಿತರ ಚೀಟಿಗಳಿಗೆ ಪೋರ್ಟಬಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ವರ್ಗದ ಪಡಿತರ ಚೀಟಿಗೆ ಜಿಲ್ಲೆಯ ರಾಜ್ಯದ ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಎಎಸ್, ಕೆಎಎಸ್ ಆಕಾಂಕ್ಷಿಗಳಿಗೆ ಉಚಿತ ಕಾರ್ಯಾಗಾರ ಉದ್ಘಾಟನೆ



ಮೈಸೂರು, ಜೂ. 18– ಮೈಸೂರು ವಿಶ್ವವಿದ್ಯಾನಿಲಯದ ಕೆರಿಯರ್ ಹಬ್, ನೇಗಿಲಯೋಗಿ ವಿದ್ಯಾವರ್ಧಕ ಸ್ಪರ್ಧಾತ್ಮಕ ಕೇಂದ್ರ ಮತ್ತು ಡಿ ಬನುಮಯ್ಯ ಕಲಾ ಮತ್ತು ವಾಣಿಜ್ಯ ಕಾಲೇಜಿನ ಜಂಟಿ ಆಶ್ರಯದಲ್ಲಿ ಐ.ಎ.ಎಸ್ ಹಾಗೂ ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಒಂದು ದಿನದ ಉಚಿತ ಕಾರ್ಯಾಗಾರ ಆಯೋಜಿಸಲಾಗಿತ್ತು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಜಿ.ಗೌಡ ಕಾರ್ಯಾಗಾರ ಉದ್ಘಾಟಿಸಿದರು. ಡಿ ಬನುಮಯ್ಯ ಕಲಾ ಮತ್ತು ವಾಣಿಜ್ಯ ಕಾಲೇಜು ಪ್ರಾಂಶುಪಾಲ ಡಾ. ಬಿ.ಹಿರಣಯ್ಯ, ಡಿ.ರವಿಕುಮಾರ್, ಎಂ.ಜೆ.ಜಯಶ್ರೀ ಭಾಗವಹಿಸಿದ್ದರು.

ಬಳಿಕ ಮಾತನಾಡಿದ ರಾಜೇಶ್ ಗೌಡ, ಅಧಿಕಾರಿಗಳಾಗುವುದು ಸುಲಭದ ಕೆಲಸವಲ್ಲ. ಅಧಿಕಾರಿ ಆಗಲು ಬಯಸುವವರು ಮೊದಲಿಗೆ ಗುರಿಯನ್ನು ಇಟ್ಟುಕೊಳ್ಳಬೇಕು. ನಿರಂತರ ಅಭ್ಯಾಸ, ಏಕಾಗ್ರತೆ, ಕಠಿಣ ಶ್ರಮಪಟ್ಟರೆ ಯಶಸ್ಸು ಸಾಧಿಸಬಹುದು. ಪ್ರಸ್ತುತ ಸಮಾಜದಲ್ಲಿ ಮಾಹಿತಿಯ ಹೊಳೆಯ ರೀತಿಯಲ್ಲಿ ಹರಿಯುತ್ತಿದೆ. ಈ ಮಾಹಿತಿಯಲ್ಲಿ ಅವಶ್ಯಕತೆ ಇರುವ ಮಾಹಿತಿಯನ್ನು ಗುರುತಿಸಿ ಅದನ್ನು ಬಳಸಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆ ತೆಗುದುಕೊಳ್ಳುವವರು ತಾಳ್ಮೆಯನ್ನು ಮೈಗೂಡಿಸಿಕೊಳ್ಳಬೇಕು. ಮೊದಲು ಅಡಿಪಾಯವನ್ನು ಭದ್ರವಾಗಿ ಹಾಕಿಕೊಳ್ಳಬೇಕು. ಸಾಮಾನ್ಯವಾಗಿ ಪದವಿ ಮಟ್ಟದ ಪ್ರಶ್ನೆಗಳನ್ನು ಕೇಳುತ್ತಾರೆ ಮತ್ತು ಸ್ನಾತಕೋತ್ತರ ಪದವಿ ಮಟ್ಟವನ್ನು ನಿರೀಕ್ಷಿಸುತ್ತಾರೆ. ವಿದ್ಯಾರ್ಥಿ ದೆಸೆಯಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುವುದು ಸೂಕ್ತ. ಇದರಿಂದ ಉತ್ತಮ ಫಲಿತಾಂಶ ಬರುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಈ ಕೂಡಲೇ ತಯಾರಿ ನಡೆಸಲು ಪ್ರಾರಂಭಿಸಬೇಕು ಎಂದರು.

ಮೈಸೂರು ವಿಶ್ವವಿದ್ಯಾನಿಲಯ, ವೃತ್ತಿ ಕೇಂದ್ರದ ಸಲಹೆಗಾರ ಡಿ ರವಿಕುಮಾರ್ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆಯು ಕೇವಲ ಚಿನ್ನದ ಪದಕ, ರ್‍ಯಾಂಕ್ ಪಡೆದವರು ಹಾಗೂ ಬುದ್ಧಿವಂತರಿಗೆ ಮಾತ್ರವಲ್ಲದೆ ಸಾಮಾನ್ಯ ಅಭ್ಯರ್ಥಿಗಳೂ ಸೂಕ್ತ ರೀತಿಯಲ್ಲಿ ಪ್ಲಾನ್ ಮಾಡಿ ಅದನ್ನು ಕಾರ್ಯ ರೂಪಕ್ಕೆ ತಂದರೆ ಯಶಸ್ಸು ಸಾಧಿಸಬಹುದು ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ, ವೃತ್ತಿ ಕೇಂದ್ರದ ಸಲಹೆಗಾರರಾದ ಜಯಶ್ರೀ ಮಾತನಾಡಿ, ಇಂಗ್ಲೀಷ್ ಭಾಷೆಯು ಅಂತರಾಷ್ಟ್ರೀಯ ಮಟ್ಟದ ಭಾಷೆಯಾಗಿರುತ್ತದೆ. ಇಂಗ್ಲೀಷ್ ಬಹುತೇಕರು ತಿಳಿದಿರುವ ಹಾಗೆ ಕಬ್ಬಿಣದ ಕಡಲೆ ಅಲ್ಲ. ಸರಿಯಾಗಿ ಅಭ್ಯಾಸ ಮಾಡಿದರೆ ಇಂಗ್ಲೀಷ್ ಭಾಷೆಯಲ್ಲಿ ಪರಿಣಿತಿ ಹೊಂದಬಹುದು ಎಂದರು.

ವಿದ್ಯುತ್ ದರ ಹೆಚ್ಚಳ: ಬೆಂಗಳೂರು ಹೋಟೆಲ್ ಮಾಲೀಕರಿಂದ ಇಂಧನ ಸಚಿವರಿಗೆ ಪತ್ರ

ಬೆಂಗಳೂರು, ಜೂ.18– ವಿದ್ಯುತ್ ದರದಲ್ಲಿ ಭಾರಿ ಏರಿಕೆಯಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರಿನ ಹೋಟೆಲ್ ಮಾಲೀಕರು ಇಂಧನ ಸಚಿವ ಕೆ.ಜೆ.ಜಾರ್ಜ್ ಅವರಿಗೆ ಪತ್ರ ಬರೆದಿದ್ದು, ವಿದ್ಯುತ್ ದರದಲ್ಲಿ ಮಾಡಿರುವ ಏರಿಕೆಯನ್ನು ಕನಿಷ್ಠ 1 ವರ್ಷಕ್ಕೆ ಮುಂದೂಡುವಂತೆ ಒತ್ತಾಯಿಸಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ಆಯೋಗವು ಏಪ್ರಿಲ್ 1ರಿಂದಲೇ ಪೂರ್ವಾನ್ವಯವಾಗುವಂತೆ ಪ್ರತಿ ಯೂನಿಟ್‌ಗೆ 70 ಪೈಸೆಯಷ್ಟು ದರ ಏರಿಸಲು ಒಪ್ಪಿಗೆ ಸೂಚಿಸಿದೆ. ಕೈಗಾರಿಕಾ ಬಳಕೆ ವಿದ್ಯುತ್ ಶುಲ್ಕವನ್ನು 125 ರೂ.ನಿಂದ 250 ರೂ.ಗೆ ಏರಿಕೆ ಮಾಡಲಾಗಿದೆ. ಇಂಧನ ಹೊಂದಾಣಿಕೆ ಶುಲ್ಕಗಳ ಹೆಚ್ಚಳ ಮತ್ತು ಸುಂಕದ ಏರಿಕೆಯೊಂದಿಗೆ ಸ್ಥಿರ ಬೇಡಿಕೆ ಶುಲ್ಕಗಳು ನಮ್ಮ ಆರ್ಥಿಕ ಹೊರೆಗಳನ್ನು ಹೆಚ್ಚಿಸಿವೆ ಎಂದು ಬೃಹತ್ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಪಿ.ಸಿ.ರಾವ್ ಹೇಳಿದ್ದಾರೆ.

ದರ ಏರಿಕೆ ಬದಲಿಗೆ ಸರ್ಕಾರವು ವಿದ್ಯುತ್ ಸರಬರಾಜು ಮತ್ತು ವಿತರಣೆ ಸಮಯದಲ್ಲಿ ಆಗುವ ನಷ್ಟವನ್ನು ಕಡಿಮೆ ಮಾಡುವತ್ತ ಗಮನ ಹರಿಸಬೇಕು ಮತ್ತು ಆಡಳಿತ ವೆಚ್ಚವನ್ನು ಸರಳೀಕರಿಸುವತ್ತ ಗಮನ ಹರಿಸಬೇಕು ಎಂದು ಹೋಟೆಲ್ ಮಾಲೀಕರು ಸಲಹೆ ನೀಡಿದರು. ಇದಲ್ಲದೆ, ತೆರಿಗೆಯನ್ನು ಶೇ.9ರಿಂದ ಶೇ.3ಕ್ಕೆ ಇಳಿಸುವಂತೆ ಕೋರಿದ್ದಾರೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇಲಾಖೆಗಳು ಪಾವತಿಸಬೇಕಾದ ಬಾಕಿ ಮೊತ್ತವನ್ನು ಬಡ್ಡಿ ಸಹಿತ ವಸೂಲಿ ಮಾಡಬೇಕು. ಪ್ರಿಪೈಡ್ ಮೀಟರ್ ಅಳವಡಿಕೆ ಮಾಡಿ ಗ್ರಾಹಕರ ಠೇವಣಿ ಹಣವನ್ನು ಹಿಂತಿರುಗಿಸಬೇಕು ಎಂದು ಮನವಿ ಮಾಡಿದೆ. ನಮ್ಮ ಉದ್ಯಮವು ವಿದ್ಯುತ್ ದರದ ಏರಿಕೆಯ ಭಾರವನ್ನು ಹೊರುತ್ತಿದೆ ಮತ್ತು ಉದ್ಯಮದ ಮೇಲಿನ ಹೊರೆಯನ್ನು ಕಡಿಮೆ ಮಾಡಲು ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾವು ವಿನಂತಿಸುತ್ತೇವೆ ಎಂದು ಪಿ.ಸಿ.ರಾವ್ ಹೇಳಿದರು.

ಜೂ.24ರಿಂದ ಉಚಿತ ಮದ್ಯವರ್ಜನ ಶಿಬಿರ

ಮೈಸೂರು,ಜೂ.18–ನಗರದ ಶ್ರೀರಾಂಪುರದಲ್ಲಿರುವ ಚೈತನ್ಯ ಫೌಂಡೇಷನ್ ವತಿಯಿಂದ ಜೂ.24ರಿಂದ ಜು.14ರವರೆಗೆ 21 ದಿನಗಳ ಕಾಲ ಉಚಿತ ಕುಡಿತ ಮತ್ತು ಮಾದಕ ವಸ್ತುಗಳ ಚಟ ಬಿಡಿಸುವ ಶಿಬಿರ ನಡೆಯಲಿದೆ. ಆಸಕ್ತರು ಮಾಹಿತಿಗೆ ಮೊ.ಸಂ.91644 69570 ಸಂಪರ್ಕಿಸಬಹುದು ಎಂದು ಫೌಂಡೇಷನ್ ಅಧ್ಯಕ್ಷ ಬಸವರಾಜು ತಿಳಿಸಿದ್ದಾರೆ.

ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಪ್ರಾಮುಖ್ಯತೆ ಕುರಿತು ಉಪನ್ಯಾಸ



ಮೈಸೂರು, ಜೂ. 18– ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಯ ಪ್ರಾಮುಖ್ಯತೆಯ ಅರಿವು ಯುವ ಪೀಳಿಗೆಯಲ್ಲಿ ಮೂಡಲಿ ಎಂದು ಮೈಸೂರಿನ ರೀಜನಲ್ ಕನ್ಸರ್ವೇಟಿವ್ ಲ್ಯಾಬೋರೇಟರಿ ನಿವೃತ್ತ ಹಿರಿಯ ಸಂರಕ್ಷಣಾಧಿಕಾರಿ ಜಿ.ಐ.ಎ ಪ್ರಭಹರನ್ ಹೇಳಿದರು.

ನಗರದ ಸಂತ ಜೋಸೆಫ್ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗದ ವತಿಯಿಂದ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಯ ಪ್ರಾಮುಖ್ಯತೆ ವಿಷಯ ಕುರಿತಾದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಂಸ್ಕೃತಿಕ ಪರಂಪರೆಯ ಮಹತ್ವ, ಅದರ ಉಪಯೋಗಗಳು, ಸಂರಕ್ಷಿಸುವ ಅಗತ್ಯತೆ ಹಾಗೂ ಮುಂದಿನ ಪೀಳಿಗೆಗಾಗಿ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವುದು ಇಂದಿನ ಯುವಜನರ ಕರ್ತವ್ಯವಾಗಿದೆ ಎಂದರು.

ವಿದ್ಯಾರ್ಥಿಗಳು ಕಾಲೇಜು ಜೀವನದಲ್ಲೇ ತಾವು ವ್ಯಾಸಂಗ ಮಾಡುವ ವಿಷಯಗಳೊಂದಿಗೆ ಇತಿಹಾಸ ಮತ್ತು ಪರಂಪರೆ ಬಗ್ಗೆಯೂ ಒಲವು ಬೆಳೆಸಿಕೊಳ್ಳಬೇಕು. ಐತಿಹಾಸಿಕ ಹಿನ್ನೆಲೆ ಇರುವ ಸ್ಮಾರಕಗಳು ಪ್ರಾಚೀನವಸ್ತುಗಳು ವೈಭವಯುತ ಸ್ಥಳ ಪುರಾಣಗಳನ್ನು ತಿಳಿದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದರು.

ಕಾರ್ಯಕ್ರಮದ ಭಾಗವಾಗಿ ಪೋಸ್ಟರ್ ಮೇಕಿಂಗ್ ಕಾಂಪಿಟೇಶನ್ ಅನ್ನು ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿತ್ತು ಮತ್ತು ವಿಜೇತರಿಗೆ ಪ್ರಶಸ್ತಿಗಳನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಹೆಚ್.ಎನ್.ಚಂದ್ರಶೇಖರ, ಶೈಕ್ಷಣಿಕ ಅಧಿಕಾರಿ ಶ್ರೀಮತಿ ಶಿಲ್ಪ, ಶ್ರೀಮತಿ ನಿಶಾ, ಪ್ರಾಧ್ಯಾಪಕಿ ಕುಮಾರಿ ಸೋನಿಯಾ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಜೂ.27, ರಾಜ್ಯಮಟ್ಟದ ಚರ್ಚಾಸ್ಪರ್ಧೆ

ಮೈಸೂರು,ಜೂ.18–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಜಿ–20 ಅಂಗವಾಗಿ ಆಯೋಜಿಸಿರುವ ಜನಭಾಗಿದಾರಿ ಕಾರ್ಯಕ್ರಮಗಳಲ್ಲಿ ಒಂದಾಗಿರುವಂತೆ ವಿದ್ಯಾರ್ಥಿಗಳಿಗಾಗಿ 'ರಾಜ್ಯಮಟ್ಟದ ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆ ಮತ್ತು ವಚನಗಳ ಓದು–ವ್ಯಾಖ್ಯಾನ ಸ್ಪರ್ಧೆ'ಯನ್ನು ಜೂ.27ರಂದು (ಮಂಗಳವಾರ) ಬೆಳಗ್ಗೆ 10ಕ್ಕೆ ಏರ್ಪಡಿಸಲಾಗಿದೆ.

ಪ್ರತಿಯೊಂದು ಸ್ಪರ್ಧೆಗೆ ಒಂದು ಕಾಲೇಜಿನಿಂದ ಎಷ್ಟು ವಿದ್ಯಾರ್ಥಿಗಳಾದರೂ ಸ್ಪರ್ಧಿಸಬಹುದು. ಸ್ಪರ್ಧಿಗಳು ಜೂ.24 ರೊಳಗೆ ಪ್ರಾಂಶುಪಾಲರ ಅನುಮತಿ ಪತ್ರದೊಂದಿಗೆ ನೋಂದಾಯಿಸಿಕೊಳ್ಳಬಹುದು.

ಭಾಗವಹಿಸಿದ ಪ್ರತಿಸ್ಪರ್ಧಿಗಳಿಗೆ ಪ್ರಮಾಣ ಪತ್ರವನ್ನು ನೀಡಲಾಗುವುದು. ಸ್ಪರ್ಧೆಗೆ ಯಾವುದೇ ನೋಂದಣಿ ಶುಲ್ಕವಿರುವುದಿಲ್ಲ. ಸ್ಪರ್ಧೆಯಲ್ಲಿ ಭಾಗವಹಿಸುವವರು ಪ್ರಾಂಶುಪಾಲರಿಂದ ಅನುಮತಿ ಪತ್ರ ಮತ್ತು ಗುರುತಿನ ಪತ್ರವನ್ನು ಕಡ್ಡಾಯವಾಗಿ ತರಬೇಕು. ಎಲ್ಲಾ ಸ್ಪರ್ಧೆಗಳಲ್ಲೂ ಪ್ರಥಮ ಬಹುಮಾನ–2000 ರೂ., ದ್ವಿತೀಯ ಬಹುಮಾನ–1500ರೂ.ಗಳು ಮತ್ತು ತೃತೀಯ ಬಹುಮಾನ–1000 ರೂ.ಗಳನ್ನು ನೀಡಲಾಗುತ್ತದೆ. ಚರ್ಚಾಸ್ಪರ್ಧೆಯ ವಿಷಯ 'ಆಧುನಿಕ ತಂತ್ರಜ್ಞಾನ ಯುವಜನತೆಗೆ ಪೂರಕವೆ ಅಥವಾ ಮಾರಕವೆ', ಪ್ರಬಂಧದ ವಿಷಯ–'ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ಮಾಧ್ಯಮಗಳ ಪಾತ್ರ'. ನೋಂದಣಿ, ಮಾಹಿತಿಗೆ ಮೊ. 92428 29947 ಡಾ.ಸುದೀಪ್‌ರನ್ನು ಸಂಪರ್ಕಿಸಿ.

ಮಲುಗನಹಳ್ಳಿಯಲ್ಲಿ ಚಿರತೆ ಹಾವಳಿ

ನಾಯಿಗಳ ಮೇಲೆ ದಾಳಿ, ಆತಂಕದಲ್ಲಿ ಗ್ರಾಮಸ್ಥರು

ಸಾಲಿಗ್ರಾಮ, ಜೂ.18–ತಾಲೂಕಿನ ಮಲುಗನಹಳ್ಳಿ ಗ್ರಾಮದಲ್ಲಿ ಚಿರತೆ ಹಾವಳಿ ಜಾಸ್ತಿಯಾಗಿದ್ದು, ಗ್ರಾಮಸ್ಥರು ಭಯದಲ್ಲಿ ವಾಸಿಸಬೇಕಾದ ಪರಿಸ್ಥಿತಿ ಇದೆ.



ಗ್ರಾಮದಲ್ಲಿ ಆಗಾಗ ಕಾಣಿಸಿಕೊಳ್ಳುತ್ತಿರುವ ಚಿರತೆ ಇದುವರೆವಿಗೂ ಸುಮಾರು 6 ನಾಯಿಗಳನ್ನು ತಿಂದು ಹಾಕಿದ್ದು, ಮುಂದಿನ ದಿನಗಳಲ್ಲಿ ಜಾನುವಾರುಗಳು ಮತ್ತು ಜನರ ಮೇಲೆ ದಾಳಿ ನಡೆಸುವ ಆತಂಕ ಎದುರಾಗಿದೆ. ಗ್ರಾಮದಲ್ಲಿ ರೈತರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ತಮ್ಮ ಹೊಲ–ಗದ್ದೆಗಳಿಗೆ ಮತ್ತು ತೋಟಗಳಿಗೆ ಹೋಗಲು ಯೋಚಿಸುವಂತಾಗಿದೆ.

ಶಾಸಕ ಡಿ.ರವಿಶಂಕರ್ ಮತ್ತು ಸಂಬಂಧಪಟ್ಟ ಅರಣ್ಯಾಧಿಕಾರಿಗಳು ತಕ್ಷಣ ಗ್ರಾಮಕ್ಕೆ ಭೇಟಿ ನೀಡಿ ಬೋನು ಇಡುವ ಮೂಲಕ ಚಿರತೆಯನ್ನು ಸೆರೆ ಹಿಡಿಯಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಕಂಪ್ಯೂಟರ್ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು, ಜೂ. 18– ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಮೈಸೂರು ವಿಭಾಗದ ವತಿಯಿಂದ ವಿವಿಧ ಕಂಪ್ಯೂಟರ್ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸ ಮುಗಿಸಿರುವ ಕೂಲಿಕಾರ್ಮಿಕರ, ಕಟ್ಟಡ ಕಾರ್ಮಿಕರ, ಪೌರಕಾರ್ಮಿಕರ, ಬೀದಿಬದಿ ವ್ಯಾಪಾರಿಗಳ ಮಕ್ಕಳು ಈ ತರಬೇತಿಯ ಫಲಾನುಭವಿಗಳಾಗಿರುತ್ತಾರೆ. ತರಬೇತಿಯಲ್ಲಿ ನುರಿತ ಉಪನ್ಯಾಸಕರಿಂದ ಕಂಪ್ಯೂಟರ್ ಬೇಸಿಕ್, ಟೈಪಿಂಗ್ ಸ್ಕಿಲ್, ಟ್ಯಾಲಿ, ಕನ್ನಡನುಡಿ ಮುಂತಾದ ವಿಷಯಗಳ ಕುರಿತು ಪ್ರಾಯೋಗಿಕ ತರಗತಿಗಳನ್ನು ನಡೆಸಲಾಗುತ್ತದೆ. ಆಸಕ್ತ ಕಲಿಕಾರ್ಥಿಗಳು ಅರ್ಜಿಯೊಂದಿಗೆ ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್‌ನ ಜೆರಾಕ್ಸ್ ಪ್ರತಿ ಮತ್ತು ಭಾವಚಿತ್ರವನ್ನು ಲಗತ್ತಿಸಬೇಕು. ಜೂ.22ರೊಳಗೆ ಅರ್ಜಿಗಳನ್ನು ಎಸ್‌ಎಸ್‌ಐಟಿ ಸಲ್ಯೂಷನ್ಸ್, ಜಯಲಕ್ಷ್ಮಿ ದೇವಿ ಕಾಲೇಜು ಆವರಣ, ರಾಮಕೃಷ್ಣನಗರ, ಮೈಸೂರು ಇಲ್ಲಿ ಪಡೆಯಬಹುದಾಗಿದೆ. ಮಾಹಿತಿಗಾಗಿ ಸಂಪರ್ಕಿಸಿ ಮೊ. 8310306882, 9964790442.

ಮಕ್ಕಳ ಬೆಳವಣಿಗೆಯಲ್ಲಿ ತಂದೆ–ತಾಯಿ ತ್ಯಾಗ ದೊಡ್ಡದು

ಮೈಸೂರು: ಮಕ್ಕಳ ಬೆಳವಣಿಗೆಯಲ್ಲಿ ತಂದೆ–ತಾಯಿಯ ತ್ಯಾಗ ದೊಡ್ಡದು ಎಂದು ಮಹಿಳಾ ವಿಶೇಷ ಕನ್ನಡ ಮಾಸಿಕದ ಗೌರವ ಸಂಪಾದಕಿ ಗೀತಾ ರಾವ್ ಹೇಳಿದರು.

ಮಹಿಳಾ ವಿಶೇಷ ಕನ್ನಡ ಮಾಸಿಕ, ನಾಡಪ್ರಭು ಕೆಂಪೇಗೌಡ ಯುವ ಬ್ರಿಗೇಡ್, ಶ್ರೀ ನಿಮಿಷಾಂಬ ಮಹಿಳಾ ಮಂಡಳಿ ಹಾಗೂ ಯೂನಿಟಿ ಟ್ರಸ್ಟ್ ಸಂಯುಕ್ತವಾಗಿ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ಅಪ್ಪಂದಿರು–ಅಮ್ಮಂದಿರ ದಿನಾಚರಣೆಯ ಅಧ್ಯಕ್ಷತೆ ವಹಿಸಿದ ಮಾತನಾಡಿದ ಅವರು, ಮಕ್ಕಳು ಚೆನ್ನಾಗಿರಲಿ ಎಂದು ತಮ್ಮ ಕಷ್ಟ ಕಾರ್ಪಣ್ಯಗಳನ್ನು ಲೆಕ್ಕಿಸದೇ ತಂದೆ–ತಾಯಿ ಉತ್ತಮ ವಿದ್ಯಾಭ್ಯಾಸ ಕೊಡಿಸುತ್ತಾರೆ. ಆದರೆ ಮಕ್ಕಳು ಅದಕ್ಕೆ ಬೆಲೆ ನೀಡದೇ ದೂರವಾಗುತ್ತಾರೆ ಎಂದು ವಿಷಾದಿಸಿದರು.


ಅಪ್ಪಂದಿರು, ಅಮ್ಮಂದಿರ ದಿನಾಚರಣೆ ಅಂಗವಾಗಿ ಹಿರಿಯರಾದ ಮಂಡ್ಯದ ರಾಮಚಂದ್ರ–ಪ್ರಭಾ, ನಂಜನಗೂಡಿನ ಜಯಪ್ರಕಾಶ್‌ನಾರಾಯಣ–ಭಾಗ್ಯ ದಂಪತಿಯನ್ನು ಸನ್ಮಾನಿಸಲಾಯಿತು. ಭುವನೇಶ್ವರಿ, ಎಸ್.ಡಿ.ಕುಮುದಾ, ಗೀತಾರಾವ್, ಅಂಶಿ ಪ್ರಸನ್ನಕುಮಾರ್, ಸುಬ್ಬರಾವ್ ಇನ್ನಿತರರಿದ್ದಾರೆ.

ಪ್ರತಿಯೊಬ್ಬರೂ ವಯಸ್ಸಾದ ಕಾಲದಲ್ಲಿ ತಂದೆ–ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು. ತಂದೆ–ತಾಯಿಗಿಂತ ಮಿಗಿಲಾದ ದೇವರಿಲ್ಲ. ಆದ್ದರಿಂದ ತಂದೆ–ತಾಯಿಯನ್ನು ಗೌರವಿಸುವ ವಿಷಯದಲ್ಲಿ ನಮಗೆ ಶ್ರೀರಾಮಚಂದ್ರ, ಗಣೇಶ–ಸುಬ್ರಹ್ಮಣ್ಯ, ಶ್ರವಣಕುಮಾರ, ಮಾರ್ಕಂಡೇಯ ಆದರ್ಶವಾಗಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಭಾರತದಲ್ಲಿ ಕೌಟುಂಬಿಕ ವ್ಯವಸ್ಥೆ ಚೆನ್ನಾಗಿದ್ದರೂ ಇತ್ತೀಚಿನ ದಿನಮಾನಗಳಲ್ಲಿ ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುವ ಪ್ರವೃತ್ತಿ ಕಂಡುಬರುತ್ತಿದೆ. ಮನೆಯಲ್ಲಿ ಹಿರಿಯರು ಇದ್ದರೇ ಚೆಂದ. ಆದ್ದರಿಂದ ಪ್ರತಿಯೊಬ್ಬರೂ ತಂದೆ–ತಾಯಿ, ಗುರು–ಹಿರಿಯರಿಗೆ ಗೌರವ ಕೊಡಬೇಕು ಎಂದರು.

ಕೊಡಗು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಎಸ್.ಡಿ.ಕುಮುದಾ ಮಾತನಾಡಿ, ಹೆಣ್ಣು ಮಕ್ಕಳು ಮನಸ್ಸು ಮಾಡಿದರೆ ಏನೆಲ್ಲಾ ಸಾಧಿಸಬಹುದು. ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಮಹಿಳೆಯರ ಪಾತ್ರ ಮುಖ್ಯ ಎಂದು ತಿಳಿಸಿದರು.

ಶ್ರೀ ನಿಮಿಷಾಂಬ ಮಹಿಳಾ ಮಂಡಳಿ ಅಧ್ಯಕ್ಷೆ ಭುವನೇಶ್ವರಿ ಅತಿಥಿಯಾಗಿದ್ದರು. ಎಚ್.ವಿ. ಸುಬ್ಬರಾವ್ ನಿರೂಪಿಸಿದರು. ಪುಷ್ಪಲತಾ ಪ್ರಾರ್ಥಿಸಿದರು.

ಕಾರ್ಯಕ್ರಮದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ನಡೆಸಲಾಯಿತು. ತಾಯಂದಿರನ್ನು ಕುರಿತು ಮಾತನಾಡಿದ ಅನಿತಾ, ಶಿವರಾಜಮ್ಮ, ರೇಖಾ, ತಂದೆಯರನ್ನು ಕುರಿತು ಮಾತನಾಡಿದ ಲಲಿತಾ, ಪ್ರಭಾಮಣಿ, ಶುಭಶ್ರೀ ಕ್ರಮವಾಗಿ ಮೊದಲ ಮೂರು ಬಹುಮಾನಗಳನ್ನು ಪಡೆದರು. ಹಿರಿಯ ದಂಪತಿಗಳಾದ ಮಂಡ್ಯದ ರಾಮಚಂದ್ರ–ಪ್ರಭಾ, ನಂಜನಗೂಡಿನ ಜಯಪ್ರಕಾಶ್ ನಾರಾಯಣ–ಭಾಗ್ಯ, ಹಿರಿಯರಾದ ವರದರಾಜನ್, ವೆಂಕಟೇಶ್, ನಾಗರಾಜ್ ಅವರನ್ನು ಗೌರವಿಸಲಾಯಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.6.2023 ಸೋಮವಾರ, ಮಳೆ ನಕ್ಷತ್ರ: ಮೃಗಶಿರ, 08.06.2023ರಿಂದ 21.06.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಆದ್ರಾ, ರಾಹುಕಾಲ: 7.30ರಿಂದ 9ರವರೆಗೆ

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9 ಗಂಟೆಯಿಂದ ಸ್ವಸ್ತಿವಾಚನ, ಯಾಗಶಾಲಾ ಪ್ರವೇಶ, ಗಣಪತಿ ಪೂಜೆ, ಪುಣ್ಯಾಹ, ನಾಂದಿ, ಕಲಶ ಸ್ಥಾಪನೆ, ಧ್ವಜಾರೋಹಣ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ, ಶ್ರೀ ಅಯ್ಯಪ್ಪ ಸ್ವಾಮಿ ಹಾಗೂ ಶ್ರೀ ಗುರುವಾಯೂರಪ್ಪನ್ ದೇವಾಲಯ:** ಶ್ರೀ ಅಯ್ಯಪ್ಪ ಸ್ವಾಮಿಯ 40ನೇ ಪ್ರತಿಷ್ಠಾಪನಾ ವಾರ್ಷಿಕ ಮಹೋತ್ಸವ, ಬೆಳಗ್ಗೆ 5.30ರಿಂದ ಗಣಪತಿ ಹೋಮ, ಶ್ರೀ ಅಯ್ಯಪ್ಪ ಸ್ವಾಮಿಗೆ ಉದಯಾಸ್ತಮಾನ ಪೂಜೆ, ನವಹಂ, ಪಂಚಗವ್ಯಂ, ಉಚ್ಚ ಪೂಜೆ, ಮಧ್ಯಾಹ್ನ 12ಕ್ಕೆ ಅನ್ನದಾನ, ಸ್ಥಳ: ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟದ ಪಾದ.

■ **ಶಾರದಾವಿಲಾಸ್ ಎಜುಕೇಷನ್ ಇನ್‌ಸ್ಟಿಟ್ಯೂಷನ್, ಶಾರದಾ ವಿಲಾಸ ಕಾಲೇಜ್ ಆಫ್ ಫಾರ್ಮಸಿ:** ಅಂತಾರಾಷ್ಟ್ರೀಯ ಯೋಗ ದಿನಾಚರಣೆ–2023, ಮುಖ್ಯ ಅತಿಥಿ: ಶಾಸಕ ಟಿ.ಎಸ್.ಶ್ರೀವತ್ಸ, ಸ್ಥಳ: ಪ್ರೊ.ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.


■ **ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಹೆಚ್.ವಿ.ರಾಜೀವ್ ಸ್ನೇಹ ಬಳಗ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ:** ಹಸಿರು ಮೈಸೂರಿಗಾಗಿ ಲಕ್ಷ ಲಕ್ಷ–ವೃಕ್ಷ ಆಂದೋಲನ, ಬೆಳಗ್ಗೆ 10.30ಕ್ಕೆ 15000 ಗಿಡಗಳ ವಿತರಿಸುವ ಕಾರ್ಯಕ್ರಮ, ಸ್ಥಳ: ನಂಜನಗೂಡು–ಮೈಸೂರು ರಸ್ತೆ, ಪೆಟ್ರೋಲ್ ಬಂಕ್ ಎದುರು ಇರುವ ನರ್ಸರಿ.

■ **ಒಕ್ಕಲಿಗರ ಸಂಘ, ಮೈಸೂರು ಜಿಲ್ಲೆ** ನಾಡಪ್ರಭು ಕೆಂಪೇಗೌಡ ಜಯಂತಿ, ದಿವ್ಯಸಾನ್ನಿಧ್ಯ: ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಸ್ಥಳ: ಜಿಲ್ಲಾ ಒಕ್ಕಲಿಗರ ಸಮುದಾಯ ಭವನ, ವಿದ್ಯಾರಣ್ಯಪುರಂ, ಸಂಜೆ 4 ಗಂಟೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಶಾಲೆಗಳಲ್ಲಿ ಶಿಕ್ಷಣ ಕೇಂದ್ರ** ಮೈಸೂರು ಜಿಲ್ಲೆಯ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ಕಲಿಕಾ ಸ್ಪಂದನ ಶಿಬಿರ–2023, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸ್ಥಳ: ಐನ್‌ಸ್ಟೈನ್ ಸಭಾಂಗಣ, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ ಬೆಳಗ್ಗೆ 10.30ಕ್ಕೆ

■ **ಆರ್ಟ್ ಆಫ್ ಲೀವಿಂಗ್:** ಶ್ರೀ ಶ್ರೀ ಯೋಗ ಶಿಬಿರ, ಸ್ಥಳ: ನಂ. 2870, ವಜ್ರನಖ, 1ನೇ ಮೇನ್, 4ನೇ ಕ್ರಾಸ್, ಚಾಮುಂಡಿಪುರಂ ಮತ್ತು ಆರ್ಟ್ ಆಫ್ ಲೀವಿಂಗ್ ಆಶ್ರಮ, ಲಲಿತಾದ್ರಿ ರಸ್ತೆ, ಜೆಎಸ್‌ಎಸ್ ಕಾಲೇಜು ಹತ್ತಿರ, ಬೆಳಗ್ಗೆ 6ರಿಂದ 7ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಡಾ.ಬಸವರಾಜ್ ಉತ್ತಂಗಿ, 6.15 ಗೀತಾರಾಧನ, 6.30 ಮೈಸೂರಿನ ಯೋಗ ವಿದ್ಯಾಪರಂಪರೆ: ಬಾನುಲಿ ಸರಣಿ, ಪ್ರಸ್ತುತಿ–ಡಾ.ಎ.ಎಸ್.ಚಂದ್ರಶೇಖರ್, 6.35 ಹಾಗೂ ಸಂಜೆ 5ಕ್ಕೆ "ಮಹಾ ಮೋಜಣಿ" ಭರತ ಭೂಮಿಯನ್ನು ಅಳೆದ ಸಾಹಸಗಾಥೆ, ಲೇಖನ ಹಾಗೂ ಪ್ರಸ್ತುತಿ–ಡಾ.ಗಜಾನನ ಶರ್ಮ, 6.40 ಪದಸಂಸ್ಕೃತಿ: ಪ್ರಸ್ತುತಿ–ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ 7.15 ಭಾವಗೀತೆಗಳು: ಅಪೂರ್ವಾ ಶ್ರೀಧರ್, 9.05 ವಸುಧೈವ ಕುಟುಂಬಕಂ–ಭಾರತ G20 ಶೃಂಘಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನೆನಪಿನಂಗಳ: ಧ್ವನಿ ಭಂಡಾರದಿಂದ ಆಯ್ದ ಕಾರ್ಯಕ್ರಮ ಸಾಹಿತಿ ಸಿದ್ದಲಿಂಗಯ್ಯ ಅವರೊಂದಿಗೆ ಡಾ.ಮೈಸೂರು ಉಮೇಶ್ ನಡೆಸಿದ ಸವಾದದ ಮೊದಲ ಭಾಗ, ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, 10.00 ಲಯ ಸಂಭ್ರಮ–,ವಿಶ್ವ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ 'ಯೋಗಲಯ' ಲಯ ಸಂಭ್ರಮ, ಭಾಗವಹಿಸುವವರು ಡಾ.ಶೀಲಾ ಶ್ರೀಧರ್, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ.

ಮಧ್ಯಾಹ್ನ: 12.30 ದೇವರ ನಾಮ: ಬಿ.ಆರ್.ಆಲಾಪ್, 12.45 ನಮ್ಮ ಆರೋಗ್ಯ: ಸರ್ಪ ಹುಣ್ಣು ಅಥವಾ ಹರ್ಪಿಸ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ.ಮಾಧುರಿ ಕುಲಕರ್ಣಿ ಅವರೊಂದಿಗೆ ಮಾತುಕತೆ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 1.20 ಭಾವಗೀತೆ–ಮಧುಲಿಕಾ ಶ್ರೀನಿವಾಸ್, 3.00 ಡಿ.ಪಶುಪತಿ–ಹಾಡುಗಾರಿಕೆ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ಕೀಲು ನೋವಿಗೆ ಆಯುರ್ವೇದದಲ್ಲಿ ಚಿಕಿತ್ಸೆ, ಭಾಗವಹಿಸುವ ವೈದ್ಯರು–ಡಾ.ಚೈತ್ರಾ, ಪ್ರಸ್ತುತಿ–ಕೆ.ಬಿ.ಮೀನಾ, 4.45 ಹಿಂದಿ ಪಾಠ: ಪ್ರಸ್ತುತಿ– ಎಸ್.ಶಾಂತಾ ಡಿ.ಕಿಣಿ, 6.55 ಕೃಷಿರಂಗ: ಕಿಸಾನ್‌ವಾಣಿ–ಲಾಭದಾಯಕ ಕುರಿಸಾಕಾಣಿಕಾ ಉದ್ಯಮಕ್ಕೆ ಅನುಸರಿಸಬೇಕಾದ ಕ್ರಮಗಳನ್ನು ಕುರಿತ ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುವವರು ಡಾ.ಬಿ.ಎನ್. ಷಡಕ್ಷರಮೂರ್ತಿ, ಪ್ರಸ್ತುತಿ–ಎನ್.ಕೇಶವಮೂರ್ತಿ. **ರಾತ್ರಿ:** 9.30 ವಿದ್ಯಮಾನ, 10.00 ನಾಟಕ, 10.30 ಸವಿನೆನಪು.

ಬೆಟ್ಟದತುಂಗದಲ್ಲಿ ಇಂದು

■ **ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ, ಬೆಟ್ಟದತುಂಗ, ಪಿರಿಯಾಪಟ್ಟಣ ತಾಲೂಕು, ಎಂಆರ್‌ಸಿ ಕಣ್ಣಿನ ಆಸ್ಪತ್ರೆ:** ಉಚಿತ ಕಣ್ಣಿನ ತಪಾಸಣೆ ಮತ್ತು ಉಚಿತ ಶಸ್ತ್ರ ಚಿಕಿತ್ಸೆ ಶಿಬಿರ, ಸ್ಥಳ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣ, ಬೆಟ್ಟದತುಂಗ, ಪಿರಿಯಾಪಟ್ಟಣ ತಾಲೂಕು, ಬೆಳಗ್ಗೆ 10 ಗಂಟೆಯಿಂದ.

ಕೆ.ಆರ್.ಆಸ್ಪತ್ರೆಯಲ್ಲಿ ಉಪ ಲೋಕಾಯುಕ್ತರಿಗೆ

ಅವ್ಯವಸ್ಥೆಯ ಅನಾವರಣ



ಮೈಸೂರು, ಜೂ.18(ಎಂಟಿವೈ)– ಮೈಸೂರಿನ ಕೆಆರ್.ಆಸ್ಪತ್ರೆಗೆ ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ ಭೇಟಿ ನೀಡಿ ರೋಗಿ ಹಾಗೂ ಪೋಷಕರಿಂದ ದೂರು ಆಲಿಸಿದರಲ್ಲದೆ, ಆಸ್ಪತ್ರೆಯಲ್ಲಿನ ಅವ್ಯವಸ್ಥೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಲ್ಲಿ ಸಾರ್ವಜನಿಕರಿಗೆ ಅಹವಾಲು ಸ್ವೀಕಾರ ಕಾರ್ಯಕ್ರಮ ನಡೆಸುತ್ತಿರುವ ಉಪಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು ಭಾನುವಾರ ಮಧ್ಯಾಹ್ನ ಕೆ.ಆರ್.ಆಸ್ಪತ್ರೆಗೆ ಅನಿರೀಕ್ಷಿತ ಭೇಟಿ ನೀಡಿ, ಆಸ್ಪತ್ರೆಯ ವಾತಾವರಣ ಪರಿಶೀಲಿಸಿ ದರು. ಕೆ.ಆರ್.ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕ, ಕಲ್ಲು ಕಟ್ಟಡ, ಚೆಲುವಾಂಬ ಆಸ್ಪತ್ರೆ, ಮಕ್ಕಳ ವಿಭಾಗದ ವಾರ್ಡ್‌ಗಳಿಗೆ ಭೇಟಿ ನೀಡಿ ಪರಿಶೀಲಿ ಸಿದರು. ಈ ವೇಳೆ ಆಸ್ಪತ್ರೆಯುದ್ದಕ್ಕೂ ಹಲವು ಸಮಸ್ಯೆಯನ್ನು ಗುರುತಿಸಿ, ರೋಗಿಗಳಿಗೆ ಪೂರಕ ವಾತಾವರಣ ನಿರ್ಮಿಸುವಂತೆ ಸೂಚನೆ ನೀಡಿದರು.

ಶುಚಿತ್ವ ಕಾಪಾಡಲು ಸೂಚನೆ: ಆಸ್ಪತ್ರೆ ಭೇಟಿ ವೇಳೆ ಉಪಲೋಕಾಯುಕ್ತರು ಆಸ್ಪತ್ರೆಯಲ್ಲಿ ಅಶುಚಿತ್ವ ತಾಂಡವವಾಡುತ್ತಿರುವುದನ್ನು ಹಾಗೂ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಬಿದ್ದಿರುವುದನ್ನು ಗಮನಿಸಿದರು. ಅಲ್ಲದೇ, ಆಸ್ಪತ್ರೆಯ ವಾರ್ಡ್‌ಗಳ ಬಳಿ ಕಸಕಡ್ಡಿ, ಊಟದ ಆಹಾರ ಪದಾರ್ಥಗಳು, ಪ್ಲಾಸ್ಟಿಕ್ ಚೀಲಗಳು, ನೀರಿನ ಬಾಟಲ್ ಸೇರಿದಂತೆ ಇನ್ನಿತರ ನಿರುಪಯುಕ್ತ ವಸ್ತುಗಳು ಬಿದ್ದಿರುವುದು ಕಂಡು ಆಕ್ಷೇಪ ವ್ಯಕ್ತಪಡಿಸಿದರು. ಆಸ್ಪತ್ರೆಯಲ್ಲಿ ಅನೈರ್ಮಲ್ಯವಿದ್ದರೆ ರೋಗಿಗಳು ಹೇಗೆ ಗುಣಮುಖರಾಗುತ್ತಾರೆ ಎಂದು ಪ್ರಶ್ನಿಸಿದರು.

ದೇವಾಲಯದಂತಿರಬೇಕು: ಕೆಲವು ವಾರ್ಡ್ ಗಳಿಗೆ ಬೇಟಿ ನೀಡಿದ ಉಪಲೋಕಾಯುಕ್ತರು ಪುರುಷರು ಮತ್ತು ಮಹಿಳೆಯರ ವಾರ್ಡ್‌ಗಳಲ್ಲಿ ಕೆಲವರಿಗೆ ಹಾಸಿಗೆಗಳ ಮೇಲೆ ಬೆಡ್‌ಶೀಟ್ ಹಾಕದೆ ರೋಗಿಗಳನ್ನು ಮಲಗಿಸಿರುವುದನ್ನು ಗಮನಿಸಿದರು. ಮತ್ತೆ ಕೆಲವು ಹಾಸಿಗೆಗಳ ಮೇಲೆ ಹಾಸಿದ್ದ ಬೆಡ್‌ಶೀಟ್ ಕೊಳೆಯಾಗಿರುವುದನ್ನು ಕಂಡರು. ಇದರಿಂದ ವೈದ್ಯರು ಮತ್ತು ಸಿಬ್ಬಂದಿ ತರಾಟೆಗೆ ತೆಗೆದುಕೊಂಡರು. ವಾರ್ಡ್‌ಗಳಲ್ಲಿರುವ ಶೌಚಾಲಯ ದುರ್ನಾತ ಬೀರುತ್ತಿರುವುದು ಗಮನಿಸಿದರು. ಈ ವೇಳೆ ಸ್ವಚ್ಛತೆ ಕಾಪಾಡಬೇಕು. ಆಸ್ಪತ್ರೆಗೆ ಬಂದರೆ ದೇವಾಲಯಕ್ಕೆ ಬಂದಂತಹ ವಾತಾವರಣ ಇರುವಂತೆ ನೋಡಿಕೊಳ್ಳಬೇಕು. ರೋಗಿಗಳು ನಮ್ಮ ಬಂಧುಗಳು ಎನ್ನುವ ಮನೋ ಭಾವ ಹೊಂದಿರಬೇಕು ಎಂದು ಸೂಚಿಸಿದರು.

ಪರೀಕ್ಷೆಗಾಗಿ ಹೊರಗೆ ಕಳಿಸುತ್ತಾರೆ: ಪರಿಶೀಲನೆ ವೇಳೆ ರೋಗಿ ಹಾಗೂ ರೋಗಿಗಳ ಪೋಷಕರನ್ನು ಮಾತನಾಡಿಸಿದ ಉಪಲೋಕಾಯುಕ್ತ ಫಣೀಂದ್ರ ಅವರಿಗೆ ಕೆಲವರು ತಾವು ಅನುಭವಿಸುತ್ತಿರುವ ತೊಂದರೆಯನ್ನು ಬಿಡಿಸಿಟ್ಟರು. ಚಿಕಿತ್ಸೆ ನೀಡುವ ವೇಳೆ ಇಂಜೆಕ್ಷನ್, ಮಾತ್ರೆ ಸೇರಿದಂತೆ ಕೆಲ ಔಷಧವನ್ನು ಹೊರಗಿನಿಂದ ತರಲು ಬರೆದು ಕೊಡುತ್ತಾರೆ. ಅಲ್ಲದೆ, ಸ್ಕ್ಯಾನಿಂಗ್, ರಕ್ತ ಪರೀಕ್ಷೆ ಹಾಗೂ ವಿವಿಧ ಪರೀಕ್ಷೆಗೆಂದು ಖಾಸಗಿ ಲ್ಯಾಬ್‌ಗಳಿಗೆ ಕಳುಹಿಸುತ್ತಾರೆ. ಇದರಿಂದ ಹೆಚ್ಚು ಹಣ ನೀಡಿ ಪರೀಕ್ಷೆ ಮಾಡಿಸಲು ತೊಂದರೆಯಾಗುತ್ತಿದೆ ಎಂದು ರೋಗಿಗಳು ಅಳಲು ತೋಡಿಕೊಂಡರು.

ಹಣ ಕೇಳುತ್ತಾರಾ?: ಚೆಲುವಾಂಬ ಆಸ್ಪತ್ರೆ ಹಾಗೂ ಕೆ.ಆರ್.ಆಸ್ಪತ್ರೆಯ ಕೆಲ ವಾರ್ಡ್‌ಗಳಲ್ಲಿ ಒಳರೋಗಿಗಳನ್ನು ಮಾತನಾಡಿಸಿದ ಉಪಲೋಕಾಯುಕ್ತರು ಚಿಕಿತ್ಸೆ ನೀಡಲು ಹಣ ಕೇಳುತ್ತಾರಾ? ಎಂದು ಪ್ರಶ್ನಿಸಿದರು. ಇದಕ್ಕೆ ರೋಗಿಗಳು ಹೇಳಲು ಹಿಂದೇಟು ಹಾಕಿದರು. ಇದನ್ನು ಗಮನಿಸಿದ ಉಪಲೋಕಾಯುಕ್ತರು ಯಾರಿಗಾದರೂ ಹಣ ಕೊಟ್ಟಿದ್ದರೆ, ಮುಕ್ತವಾಗಿ ಹೇಳಿ. ನಿಮಗೆ ಆ ಹಣವನ್ನು ಹಿಂದಿರುಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಹಣಕೊಟ್ಟಿದ್ದೂ ಸುಮ್ಮನಿದ್ದರೆ, ತೊಂದರೆ ಅನುಭವಿಸಬೇಕಾಗುತ್ತದೆ ಎಂದು ತಿಳಿ ಹೇಳಿದರೂ, ಯಾರೊ ಬ್ಬರು ಹಣ ನೀಡಿರುವ ದೂರನ್ನು ಹೇಳಲೇ ಇಲ್ಲ. ಇದರಿಂದ ಉಪಲೋಕಾಯುಕ್ತರು ಸುಮ್ಮನಾದರು.

ಬಳಿಕ ಹೆರಿಗೆ ವಾರ್ಡ್‌ನಲ್ಲಿ ಕೊಳ್ಳೇಗಾಲದ ಶೋಭಾ, ಕೆಆರ್.ನಗರದ ಗೀತಾ, ಉದಯಗಿರಿಯ ಸಲ್ಮಾ ಇನ್ನಿತರ ಬಾಣಂತಿಯರನ್ನು ವಿಚಾರಿಸಿದರು. ಕೆ.ಆರ್.ನಗರ ತಾಲೂಕಿನ ಮಹದೇವ ಎಂಬಾತ, ರೋಗಿಗಳ ಸಂಬಂಧಿಕರಿಗೆ ಮಲಗಲು ವ್ಯವಸ್ಥೆ ಇಲ್ಲದೆ ತುಂಬಾ ತೊಂದರೆಯಾಗಿದೆ. ಮಗು ಜತೆ ತಾಯಿ ಇರಬೇಕು. ಆದರೆ, ಹೊರಗೆ ಇರುವವರಿಗೆ ಬೇರೆ ಏನೂ ವ್ಯವಸ್ಥೆ ಇಲ್ಲ. ರಾತ್ರಿ ವೇಳೆ ವೈದ್ಯರು ಹೇಳುವ ಔಷಧಗಳನ್ನು ತರುವಂತೆ ಹೇಳಿದಾಗ ತಾಯಿ ಹೊರಗೆ ಬರಲು ಸಾಧ್ಯವಿಲ್ಲ ಎಂದು ಸಮಸ್ಯೆ ಹೇಳಿದರು.

ಈ ವೇಳೆ ಡೀನ್ ದಾಕ್ಷಾಯಿಣಿ ಅವರು ಆಸ್ಪತ್ರೆಯಲ್ಲಿ ವೈದ್ಯರು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆಸ್ಪತ್ರೆಯ ನವೀಕರಣ ಕಾರ್ಯ ನಡೆಯುತ್ತಿರುವ ಕಾರಣ ಇರುವುದರಲ್ಲೇ ಸುಧಾರಿಸಿ ಚಿಕಿತ್ಸೆ ಕೊಡುವ ಕಾರ್ಯ ನಡೆಯುತ್ತಿದೆ ಎಂದರು. ಸಿಬ್ಬಂದಿಗಳ ಬಗ್ಗೆ ದೂರು ಬಂದರೆ ತಕ್ಷಣವೇ ಕ್ರಮಕೈಗೊಳ್ಳುತ್ತೇವೆ. ನಾನು ಕೂಡ ರೌಂಡ್ಸ್ ಮಾಡಿ ಸಮಸ್ಯೆ ಆಲಿಸುತ್ತೇನೆ. ಏನಾದರೂ ಸಮಸ್ಯೆ ಇದ್ದಲ್ಲಿ ಮುಕ್ತವಾಗಿ ಹೇಳಲು ಅವಕಾಶವಿದೆ ಎಂದರು.

ಲೋಕಾಯುಕ್ತ ಉಪ ನಿಬಂಧಕ ಚನ್ನಕೇಶವ ರೆಡ್ಡಿ ಅಪರ ನಿಬಂಧಕ ಬಿಸಿಮಹಾವಾರ್, ಲೋಕಾಯುಕ್ತ ಎಸ್‌ಪಿ ಸುರೇಶ್ ಬಾಬು, ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್, ಮೈಸೂರು ಮೆಡಿಕಲ್ ಕಾಲೇಜ್ ಡೀನ್ ದಾಕ್ಷಾಯಿಣಿ, ಸ್ಥಾನಿಕ ವೈದ್ಯಾಧಿಕಾರಿ ಡಾ.ರಾಜೇಶ್‌ಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆಹೆಚ್.ಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.

ಇಂಡೋನೇಷ್ಯಾ ಓಪನ್ ಗೆದ್ದು ಇತಿಹಾಸ ಬರೆದ ಭಾರತದ ಸಾತ್ವಿಕ್–ಚಿರಾಗ್ ಜೋಡಿ

ಜಕಾರ್ತಾ, ಜೂ.18– ಇಂಡೋನೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಚಾಂಪಿಯನ್ ಪಟ್ಟ ಅಲಂ ಕರಿಸುವ ಮೂಲಕ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ–ಚಿರಾಗ್ ಶೆಟ್ಟಿ ಇತಿಹಾಸ ನಿರ್ಮಿಸಿದೆ.



ಶನಿವಾರ ಫೈನಲ್‌ಗೆ ಲಗ್ಗೆ ಇಡುವ ಮೂಲಕ ವರ್ಲ್ಡ್ ಟೂರ್ ಸೂಪರ್ –1000ನಲ್ಲಿ ಈ ಸಾಧನೆ ಮಾಡಿದ ಮೊದಲ ಜೋಡಿ ಎಂಬ ಹಿರಿಮೆ ಪಾತ್ರರಾಗಿದ್ದರು. ಇದೀಗ ಚೊಚ್ಚಲ ಪ್ರಶಸ್ತಿ ಗೆದ್ದು ಅಭೂತಪೂರ್ವ ಸಾಧನೆ ಮಾಡಿದ್ದಾರೆ.

ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಸಾತ್ವಿಕ್–ಚಿರಾಗ್ 21–17, 21–18 ಸೆಟ್‌ಗಳ ಮೂಲಕ ಮಲೇಷ್ಯಾದ ಆರೋನ್ ಚಿಯಾ ಮತ್ತು ವೂಯಿ ಯಿಕ್ ಸೊಹ್ ಜೋಡಿಯನ್ನು ಸೋಲಿಸಿದರು. ಇದರೊಂದಿಗೆ ಸೂಪರ್–1000 ಟೂರ್ನಿ ಗೆದ್ದ ಮೊದಲ ಭಾರತೀಯ ಜೋಡಿ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಅಂತಿಮ ಪಂದ್ಯದ ವೇಳೆ, ಸಾತ್ವಿಕ್–ಚಿರಾಗ್ ಮೊದಲ ಗೇಮ್‌ನ ಆರಂಭದಲ್ಲಿ ತತ್ತರಿಸಿದ ನಂತರ ತಮ್ಮ ವೇಗವನ್ನು ಹೆಚ್ಚಿಸಿದರು. ಆಟದ ಮಧ್ಯಂತರ ವಿರಾಮದವರೆಗೆ 11–9 ಮುನ್ನಡೆ ಸಾಧಿಸಿದರು. ಇದಾದ ಬಳಿಕ ತಮ್ಮ ಪ್ರಾಬಲ್ಯವನ್ನು ಕಾಯ್ದುಕೊಂಡ ಭಾರತದ ಜೋಡಿ ಮೊದಲ ಗೇಮ್ ಅನ್ನು ನಿರಾಯಾಸವಾಗಿ ಗೆದ್ದುಕೊಂಡಿತು. ಎರಡನೇ ಗೇಮ್‌ನಲ್ಲಿ ಸಾತ್ವಿಕ್–ಚಿರಾಗ್ ಅದ್ಭುತವಾಗಿ ಆರಂಭಿಸಿದರು. ಆದಾಗ್ಯೂ, ಮಲೇಷ್ಯಾ ಜೋಡಿ ನಂತರ ಮರಳಿತು. ಆದರೆ ಅಷ್ಟು ಹೊತ್ತಿಗೆ ಕಾಲ ಮಿಂಚಿ ಹೋಗಿತ್ತು. ಈ ಫೈನಲ್ ಪಂದ್ಯ 43 ನಿಮಿಷಗಳ ಕಾಲ ನಡೆಯಿತು.

ವಿಶ್ವ ರ್‍ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿರುವ ಭಾರತದ ಜೋಡಿ ಮೊದಲ ಬಾರಿಗೆ ಸೂಪರ್–1000 ಟೂರ್ನಿಯ ಫೈನಲ್ ತಲುಪಿತ್ತು. ಸಾತ್ವಿಕ್–ಚಿರಾಗ್ ಸೂಪರ್–1000 ಪ್ರಶಸ್ತಿ ಗೆದ್ದ ಮೊದಲ ಭಾರತೀಯ ಜೋಡಿ ಎನಿಸಿಕೊಂಡಿದ್ದಾರೆ. ಸಾತ್ವಿಕ್–ಚಿರಾಗ್ ಸೆಮಿಫೈನಲ್‌ನಲ್ಲಿ ಕೊರಿಯಾದ ಮಿನ್ ಹ್ಯುಕ್ ಕಾಂಗ್ ಮತ್ತು ಸೆಯುಂಗ್ ಜೇ ಸಿಯೊ ಅವರನ್ನು 17–21 21–19 21–18 ಸೆಟ್‌ಗಳಿಂದ ಸೋಲಿಸಿ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿದರು.



ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರನ್ನು ಮಾಜಿ ಕಾರ್ಪೋರೇಟರ್ ಆರ್. ಸುನಂದಕುಮಾರ್, ಕೆಪಿಸಿಸಿ ಕಾರ್ಯದರ್ಶಿ ಜೆ. ರಾಜಶೇಖರ್, ಕಾಂಗ್ರೆಸ್ ಮುಖಂಡ ಕೆ.ಎಂ. ಕುಮಾರಸ್ವಾಮಿ ಇನ್ನಿತರರು ಅಭಿನಂದಿಸಿದರು.

ಚಿಂತಕ ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ ಕಾರ್ಯಕ್ರಮ

ಕೋಮುವಾದ ವಿರುದ್ಧದ ಹೋರಾಟ ಮುಂದುವರೆಸಬೇಕು

ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು



ಮೈಸೂರು, ಜೂ.18(ಪಿಎಂ)– ಚಳುವಳಿಗಾರರು ಕೋಮುವಾದ ವಿರುದ್ಧದ ಹೋರಾಟ ಮುಂದುವರೆಸಬೇಕು. ಜೊತೆಗೆ ಜನಸಾಮಾನ್ಯರಿಗೆ ಸಂಬಂಧಿಸಿದ ಬೆಲೆ ಏರಿಕೆ, ನಿರುದ್ಯೋಗ ಮತ್ತು ಅಲ್ಪಸಂಖ್ಯಾತ ಸಮುದಾಯ ಎದುರಿಸುವ ಅಭದ್ರತೆ ವಿರುದ್ಧವೂ ಚಳುವಳಿ ಮುಂದುವರೆಸಿ, ವಿಸ್ತರಿಸುವ ಅಗತ್ಯವಿದೆ ಎಂದು ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಹೇಳಿದರು.

ಮೈಸೂರಿನ ರಂಗಾಯಣದ ಶ್ರೀರಂಗ ವೇದಿಕೆಯಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ವಿಚಾರವಾದಿ, ಪ್ರಗತಿಪರ ಚಿಂತಕ ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಂವಾದ, ಪುಸ್ತಕ ಬಿಡುಗಡೆ ಹಾಗೂ ಲೇಖನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗಿನ ವಿಧಾನಸಭಾ ಚುನಾವಣೆ ಫಲಿತಾಂಶದ ಬಗ್ಗೆ ಎರಡು ರೀತಿಯಲ್ಲಿ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ಒಂದೆಡೆ ದೊಡ್ಡ ಯುದ್ಧ ಗೆದ್ದಿದ್ದೇವೆ ಎನ್ನುವಂತಹ ಸಂಭ್ರಮಾಚರಣೆ. ಇದು ಗೆಲುವೇ ಅಲ್ಲ. ಬಿಜೆಪಿ ನಿಜವಾಗಿ ಸೋತೇ ಇಲ್ಲ ಹೋರಾಟ ಇನ್ನೂ ಬಾಕಿ ಇದೆ ಎಂಬ ಮತ್ತೊಂದು ಅಭಿಪ್ರಾಯ. ಈ ಎರಡರ ನಡುವೆ ಏನೋ ಒಂದು ಸತ್ಯವಿದೆ. ಸಂಭ್ರಮಿಸುವ ಜೊತೆಗೆ ಎಚ್ಚರ ತಪ್ಪಬಾರದು. ಬಹುಶಃ ಪ್ರೊ.ಕೆ.ರಾಮದಾಸ್ ಈಗ ಇದ್ದಿದ್ದರೆ ಖಂಡಿತ ಸಂಭ್ರಮಿಸುತ್ತಿದ್ದರು. ಆದರೆ ಮರು ಘಳಿಗೆಯಲ್ಲೇ ಇನ್ನೊಂದು ಹೋರಾಟಕ್ಕೆ ಅಣಿಯಾಗುತ್ತಿದ್ದರು. ಈ ರೀತಿಯಲ್ಲಿ ಹೋರಾಟಗಾರರು ಮುನ್ನಡೆದರೆ ಪ್ರೊ.ರಾಮದಾಸ್‌ರಿಗೆ ಗೌರವ ಸಲ್ಲಿಸಿದಂತೆ ಎಂದು ತಿಳಿಸಿದರು.

ಸಾಮಾಜಿಕ ಚಳುವಳಿಗಳು ದಕ್ಷಿಣ ಭಾರತದಲ್ಲಿ ನಡೆದಷ್ಟು ಅದರಲ್ಲೂ ಮುಖ್ಯವಾಗಿ ಕರ್ನಾಟಕದಲ್ಲಿ ನಡೆದಷ್ಟು ಬೇರೆಡೆ ನಡೆದಿಲ್ಲ. 80ರ ದಶಕವು ಚಳುವಳಿಗಳ ಸುವರ್ಣಯುಗ. ನಾವೆಲ್ಲಾ ಆ ವೇಳೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಕಣ್ಣು ಬಿಟ್ಟವರು. ರೈತ, ದಲಿತ ಚಳುವಳಿಗಳು ಮತ್ತು ಭಾಷಾ ಚಳುವಳಿ ನಡೆದ ಸಂದರ್ಭವದು. ಮುಖ್ಯವಾಗಿ ದೇವರಾಜ ಅರಸರ ಆಡಳಿತದಲ್ಲಿ ಅವರು ತಂದ ಪ್ರಗತಿಪರ ಕಾನೂನುಗಳ ಮೂಲಕ ಈ ಚಳುವಳಿಗಳು 70ರ ದಶಕದಲ್ಲೇ ಪ್ರಾರಂಭ ಕಂಡಿದ್ದವು ಎಂದರು.

1983 ಮತ್ತು 2023ರ ವಿಧಾನಸಭಾ ಚುನಾವಣೆಗಳ ಫಲಿತಾಂಶ ಇಟ್ಟುಕೊಂಡು ನಾವು ಆಲೋಚನೆ ಮಾಡಬೇಕಿದೆ. 1983ರ ವಿಧಾನಸಭಾ ಚನಾವಣೆಯಲ್ಲಿ ನಂತರ ಪ್ರಗತಿಪರ ಚಳುವಳಿ ನಾಯಕರೆಲ್ಲರೂ ಕಾಂಗ್ರೆಸ್ ಸೋಲಿಸಿದ್ದು ಜನತ ಪಕ್ಷ ಅಧಿಕಾರಕ್ಕೆ ಬಂದಿದ್ದು ನಮ್ಮ ಚಳವಳಿಯಿಂದ ಎಂದು ಮೈ ಮರೆತರು. ಹಾಗಾಗಿ ನಂತರದ ದಿನಗಳಲ್ಲಿ ಚಳವಳಿಗಳ ಪತನ ಶುರುವಾಯಿತು. ಈವರೆಗೂ ಅದರಿಂದ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ಈ ವಿಧಾನಸಭೆ ಚುನಾವಣೆ ನಂತರವೂ ಬಹುತೇಕ ಹೋರಾಟಗಾರರು ಗೆಲುವಿನ ರೂವಾರಿಗಳೇ ನಾವು ಎನ್ನುವ ರೀತಿ ಸಂಭ್ರಮದಲ್ಲಿದ್ದಾರೆ. ಅವರ ಮಾಡಿದ ಕೆಲಸವನ್ನೂ ನಿರಾಕರಿಸಲು ಸಾಧ್ಯವಿಲ್ಲ. ಆದರೆ ಈ ಚುನಾವಣೆಯಲ್ಲಿ ಅಂತಹ ಹೋರಾಟದಿಂದಲೇ ಫಲಿತಾಂಶ ಬಂದಿದೆಯೇ ಎಂದು ಅವಲೋಕಿಸಬೇಕು. ಈ ಚುನಾವಣೆಯಲ್ಲಿ ಹೋರಾಟಗಾರರು ಹೇಳುವ ರೀತಿಯಲ್ಲೇ (ಕೋಮುವಾದದ ವಿರುದ್ಧ) ಗೆಲುವು ಸಾಧಿಸಿದ್ದರೆ ನಾವೆಲ್ಲ ನೆಮ್ಮದಿಯಿಂದ ಇರಬಹುದಿತ್ತು ಎಂದರು.

ಈ ವಿಧಾನಸಭಾ ಚುನಾವಣೆ ಫಲಿತಾಂಶವು ಜನಸಾಮಾನ್ಯರು ತಮ್ಮ ಸಂಕಷ್ಟಗಳ ವಿರುದ್ಧ ನೀಡಿದ ತೀರ್ಪು ಎಂಬುದು ನನ್ನ ಅಭಿಪ್ರಾಯ. ಅದು ಬೆಲೆ ಏರಿಕೆ ಇರಬಹುದು. ನಿರುದ್ಯೋಗ ಅಥವಾ ಅಸಹಾಯಕತೆಯೂ ಇರಬಹುದು. ಎಲ್ಲರೂ ಕೋಮುವಾದದ ವಿರುದ್ಧವೇ ಮತ ಹಾಕಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಅಂತರ್ಜಾತಿ, ಅಂತರ್‌ಧರ್ಮ ವಿವಾಹವಾಗಿರುವ 30 ಜೋಡಿಗಳ ಅಭಿಪ್ರಾಯ ಸಂಗ್ರಹ ಹೊಂದಿರುವ 'ಒಲವೇ ನಮ್ಮ ಬದುಕು' ಪುಸ್ತಕವನ್ನು ಹಿರಿಯ ಸಾಹಿತಿ ಡಾ.ಬಂಜಗೆರೆ ಜಯಪ್ರಕಾಶ್ ಬಿಡುಗಡೆ ಮಾಡಿದರು. 'ಅಂತರ ಜಾತಿ ವಿವಾಹಗಳು ಸಾಮಾಜಿಕ ಬದಲಾವಣೆಯಲ್ಲಿ ಎಷ್ಟು ಪೂರಕ ಮತ್ತು ಪ್ರೇರಕ' ವಿಷಯ ಕುರಿತು ಸಂವಾದ ನಡೆಯಿತು. ಜೊತೆಗೆ ಇದೇ ವಿಷಯದ ಲೇಖನ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಸಾಹಿತಿ ಡಾ.ಪುರುಷೋತ್ತಮ್ ಬಿಳಿಮಲೆ ಅಧ್ಯಕ್ಷತೆ ವಹಿಸಿದ್ದರು. ಪ್ರಗತಿಪರ ಚಿಂತಕ ರುದ್ರಪ್ಪ ಹನಗವಾಡಿ, ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ, ಕಾರ್ಯದರ್ಶಿ ಡಾ.ದಿನಮಣಿ ಮತ್ತಿತರರು ಹಾಜರಿದ್ದರು.

'ಗಂಜಿ ಗಿರಾಕಿ' ಎನ್ನುವುದು ದೊಡ್ಡ ದ್ರೋಹ

ಮೈಸೂರು,ಜೂ.18(ಪಿಎಂ)– ವಿಧಾನಸೌಧದೊಳಗೆ ಹೋಗಲು ಗಂಜಿ ಗಿರಾಕಿಗಳು ಸಾಲಿನಲ್ಲಿ ನಿಂತಿದ್ದಾರೆ ಎಂಬ ಟೀಕೆಗಳು ಇದೀಗ ಕೇಳಿ ಬರುತ್ತಿದ್ದು, ಇವು ಸಣ್ಣ ಮನಸ್ಸಿನ ಪ್ರತಿಕ್ರಿಯೆ. 'ಗಂಜಿ ಗಿರಾಕಿ' ಎನ್ನುವುದು ದೊಡ್ಡ ದ್ರೋಹ ಎಂದು ದಿನೇಶ್ ಅಮೀನ್‌ಮಟ್ಟು ಹೇಳಿದರು. ಒಂದು ಸರ್ಕಾರ ಬಂದಾಗ ಅದರ ಸಾಂಸ್ಕೃತಿಕ ಸಂಘಟನೆಗಳಲ್ಲಿ ಕೆಲಸ ಮಾಡಬೇಕಾದವರು ಯಾರು? ಈ ಸಂದರ್ಭದಲ್ಲಿ ಬಿಜೆಪಿ, ಆರ್‌ಎಸ್‌ಎಸ್‌ನವರು ಅಲ್ಲಿ ಕೆಲಸ ಮಾಡಲು ಸಾಧ್ಯವೇ? ಜಾತ್ಯಾತೀತ ಸಿದ್ಧಾಂತ ಮತ್ತು ಸಂವಿಧಾನ ಒಪ್ಪಿಕೊಂಡರೇ ಹೋಗಿ ಆ ಸ್ಥಾನಗಳಲ್ಲಿ ಕೆಲಸ ಮಾಡಬೇಕು. ಹಾಗಾಗಿ ಗಂಜಿ ಗಿರಾಕಿ ಎನ್ನುವುದು ದೊಡ್ಡ ದ್ರೋಹದ ಕೆಲಸ. ಆದರೆ ಆ ರೀತಿ ಹೋಗುವವರು ಆರೋಗ್ಯಕರವಾದ ಅಂತರವನ್ನು ಸರ್ಕಾರದೊಂದಿಗೆ ಇಟ್ಟುಕೊಂಡು ಕೆಲಸ ಮಾಡಬೇಕು. ಆ ಎಚ್ಚರ ನಮ್ಮಲ್ಲಿ ಇರಬೇಕು ಎಂದು ತಿಳಿಸಿದರು.

ಅಮಾವಾಸ್ಯೆ ಪೂಜೆಗೆ ಪುಣ್ಯ ಕ್ಷೇತ್ರಕ್ಕೆ ಸಾವಿರಾರು ಮಹಿಳೆಯರ ಲಗ್ಗೆ

ಚಾಮುಂಡಿಬೆಟ್ಟ, ಮಹದೇಶ್ವರಬೆಟ್ಟ, ನಂಜನಗೂಡಿಗೆ ಹೋಗಲು ಬಸ್‌ನಲ್ಲಿ ನೂಕು–ನುಗ್ಗಲು

ಮೈಸೂರು, ಜೂ.18(ಬಿಎಲ್‌ಯು)– 'ಜನ ಮರಳೊ ಜಾತ್ರೆ ಮರಳೊ' ಎಂಬ ಗಾದೆ ಮಾತಿನಂತೆ ಕಾಂಗ್ರೆಸ್ ಸರ್ಕಾರದ ಶಕ್ತಿ ಗ್ಯಾರಂಟಿ ಸ್ಕೀಂನಲ್ಲಿ ಫ್ರೀ ಬಸ್ ಹತ್ತಲು ಮಹಿಳೆಯರಲ್ಲಿ ನೂಕು ನುಗ್ಗಲು ಉಂಟಾಗಿದೆ. ಭಾನುವಾರ ಮಣ್ಣೆತ್ತಿನ ಅಮಾವಾಸ್ಯೆ ಹಿನ್ನೆಲೆ ಮೈಸೂರಿನಿಂದ ಚಾಮುಂಡಿಬೆಟ್ಟ, ನಂಜನಗೂಡು, ಮಹದೇಶ್ವರ ಬೆಟ್ಟ, ಆದಿಚುಂಚನಗಿರಿಗೆ ಹೋಗಲು ಸಾವಿರಾರು ಮಹಿಳೆಯರು ಬಸ್ ಸ್ಟ್ಯಾಂಡ್‌ನಲ್ಲಿ ನೆರೆದಿದ್ದರು.



ಮೈಸೂರಿನ ಚಾಮುಂಡಿಬೆಟ್ಟಕ್ಕೆ ಇಂದು ಜನವೊ ಜನ. ಬೆಳಗ್ಗೆಯಿಂದ ಮಧ್ಯಾಹ್ನದ ತನಕ ಮೈಸೂರಿನಿಂದ ಚಾಮುಂಡಿಬೆಟ್ಟಕ್ಕೆ ಹೋಗಲು ಸುಮಾರು 30 ಬಸ್ ಸಂಚರಿಸುತ್ತಿದ್ದವು. ಆದರೆ ಇವತ್ತು ಮಹಿಳೆಯರು ಭಾರೀ ಸಂಖ್ಯೆಯಲ್ಲಿ ಸೇರಿದ್ದ ಕಾರಣ ನೂರಕ್ಕೂ ಹೆಚ್ಚು ಟ್ರಿಪ್‌ಗಳಲ್ಲಿ ಬಸ್‌ಗಳು ಸಂಚರಿಸಿದವು. ನಗರ ಬಸ್ ನಿಲ್ದಾಣದಲ್ಲಿ ಉಳಿದೆಲ್ಲಾ ಕಡೆಗಿಂತ ಇಂದು ಚಾಮುಂಡಿಬೆಟ್ಟಕ್ಕೆ ಹೋಗುವ ಮಹಿಳೆಯರು ಹೆಚ್ಚಾಗಿದ್ದರು. ಫ್ರೀ ಬಸ್‌ನಲ್ಲಿ ತೆರಳಿ ಸಾವಿರಾರು ಜನರು ಚಾಮುಂಡಿಬೆಟ್ಟಕ್ಕೆ ಹೋಗಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದರ್ಶನ ಪಡೆದರು.

ಮಹದೇಶ್ವರಬೆಟ್ಟಕ್ಕೆ ಹೋಗುವ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿರಲಿಲ್ಲ. ಮಹದೇಶ್ವರ ಬೆಟ್ಟಕ್ಕೆ ತೆರಳಲು ನೂರಾರು ಮಹಿಳೆಯರು ಜಮಾವಣೆಗೊಂಡಿದ್ದರು.

ಒಂದು ಬಸ್ಸಿನಲ್ಲಿ 53 ಸೀಟ್ ಇರುತ್ತದೆ ಆದರೆ ಒಂದು ಬಸ್‌ನಲ್ಲಿ ಸರಾಸರಿ 70 ಜನರು ತುಂಬಿದ್ದರು. ಇಂದು ಮುಂಜಾನೆ 4.30 ಗಂಟೆಗೆ ಆರಂಭವಾದ ಬಸ್ ಸಂಚಾರ ನಿರಂತರವಾಗಿ ಸಾಗುತ್ತಲೆ ಇತ್ತು ಈ ಮೊದಲು ಒಂದು ದಿನಕ್ಕೆ 20 ಬಸ್ ಸಂಚರಿಸುತ್ತಿದ್ದವು. ಪ್ರಯಾಣಿಕರ ಸಂಖ್ಯೆ ಹೆಚ್ಚಿರುವ ಕಾರಣ ಬೆಳಿಗ್ಗೆ 11 ಗಂಟೆ ವೇಳೆಗೆ ಹೆಚ್ಚುವರಿಯಾಗಿ 130 ಬಸ್ ಸಂಚರಿಸಿದವು. ಇದರ ಜೊತೆಗೆ ಬೇರೆ ಬೇರೆ ಸ್ಥಳಗಳಿಂದ ಬಂದ 20ಕ್ಕೂ ಹೆಚ್ಚು ರೂಟ್ ಬಸ್‌ಗಳು ಮಹದೇಶ್ವರಬೆಟ್ಟಕ್ಕೆ ಸಂಚರಿಸಿದ್ದವು.

ಬಸ್ ಹತ್ತಲು ಮಹಿಳೆಯರಲ್ಲಿ ನೂಕು ನುಗ್ಗಲು ಉಂಟಾಗಿತ್ತು. ನಾ ಮುಂದು ತಾ ಮುಂದು ಎಂದು ನುಗ್ಗುತ್ತಿದ್ದ ಮಹಿಳೆಯರನ್ನು ನಿಯಂತ್ರಿಸುವಲ್ಲಿ ಕಂಡಕ್ಟರ್ ಮತ್ತು ಚಾಲಕರು ಹೈರಾಣಾದರು. ಸಾವಿರಾರು ಸಂಖ್ಯೆಯ ಮಹಿಳಾ ಪ್ರಯಾಣಿಕರು ಇದ್ದ ಕಾರಣ ಬೇರೆ ಬೇರೆ ರೂಟ್ ಬಸ್‌ಗಳನ್ನು ಇಲ್ಲಿಗೆ ನಿಯೋಜನೆ ಮಾಡಲಾಗಿತ್ತು. ಇದರಿಂದ ಆ ರೂಟ್‌ಗಳ ಪ್ರಯಾಣಿಕರು ತೊಂದರೆ ಅನುಭವಿಸಿದರು. ಮೈಸೂರಿನ ಬೆಳ್ಳೂರು ಕ್ರಾಸ್ ಬಳಿ ಇರುವ ಆದಿಚುಂಚನಗಿರಿಗೆ ಹೋಗಲು ಮಹಿಳೆ ಯರು ನೂರಾರು ಸಂಖ್ಯೆಯಲ್ಲಿ ಸೇರಿದ್ದರು.

'ತುರ್ತು ಪರಿಸ್ಥಿತಿ' ಕತ್ತಲೆ ಯುಗ

ಮನ್ ಕಿ ಬಾತ್‌ನಲ್ಲಿ ಪ್ರಧಾನಿ

ನವದೆಹಲಿ, ಜೂ.18– ಪ್ರಜಾಪ್ರಭುತ್ವವನ್ನು ಬೆಂಬಲಿಸುವವರ ಮೇಲೆ ದೌರ್ಜನ್ಯ ಎಸಗಿದ ತುರ್ತು ಪರಿಸ್ಥಿತಿ ಸಮಯ ದೇಶದ ಇತಿಹಾಸದಲ್ಲಿ ಕರಾಳಯುಗ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಭಾರತವು ಪ್ರಜಾಪ್ರಭುತ್ವದ ತಾಯಿಯಾಗಿದ್ದು ಅದು ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಸಂವಿಧಾನವನ್ನು ಎತ್ತಿ ಹಿಡಿಯುತ್ತದೆ. ಭಾರತೀಯರ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದ ಜೂನ್ 25ನೇ ತಾರೀಖನ್ನು ನಾವು ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು. 1975ರಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿ ಅವರು ತುರ್ತುಪರಿಸ್ಥಿತಿ ಹೇರಿದ್ದರು.

ತಮ್ಮ ಮನ್ ಕಿ ಬಾತ್ ರೇಡಿಯೋ ಪ್ರಸಾರದಲ್ಲಿ ಮೋದಿ ಅವರು ನೈಸರ್ಗಿಕ ವಿಕೋಪಗಳನ್ನು ಎದುರಿಸಲು ಭಾರತದ ಹೆಚ್ಚುತ್ತಿರುವ ಸಾಮರ್ಥ್ಯವನ್ನು ಶ್ಲಾಘಿಸಿದರು, ಬಿಪೊರ್ ಜೋಯ್ ಚಂಡ ಮಾರುತದಿಂದ ಉಂಟಾದ ವಿನಾಶದಿಂದ ಕಚ್‌ನ ಜನರು ಶೀಘ್ರವಾಗಿ ಚೇತರಿಸಿಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಬಕ್ರೀದ್‌ಗೆ ಬೆಲೆ ಏರಿಕೆ ತಲೆ ಬಿಸಿ

ಕುರಿ ವ್ಯಾಪಾರ ಮಂಕು



● ಚೇತನ್ ನರಸಿಂಹ ವಿ.

ಮೈಸೂರು, ಜೂ. 18 – ತ್ಯಾಗ ಬಲಿದಾನದ ಸಂಕೇತವಾದ ಬಕ್ರೀದ್(ಈದ್–ಉಲ್–ಅಧಾ) ಹಬ್ಬಕ್ಕೆ ಸಾಂಸ್ಕೃತಿಕ ನಗರಿ ಮೈಸೂರು ಸಜ್ಜಾಗುತ್ತಿದ್ದು, ಇನ್ನು ಕೆಲವೇ ದಿನಗಳು ಉಳಿದಿರುವ ಹಿನ್ನೆಲೆಯಲ್ಲಿ, ನಗರದ ಎಲ್‌ಐಸಿ ವೃತ್ತ, ಉದಯಗಿರಿ ಸಿಗ್ನಲ್, ಬನ್ನಿಮಂಟಪ, ಬನ್ನೂರು ರಿಂಗ್ ರಸ್ತೆ ಮುಂತಾದ ಕಡೆಗಳಲ್ಲಿ, ಭಾನುವಾರ ಕುರಿಗಳ ವ್ಯಾಪಾರ ನಡೆಯಿತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಅಷ್ಟಾಗಿ ವ್ಯಾಪಾರ ಆಗುತ್ತಿಲ್ಲ. ಬೆಲೆ ಏರಿಕೆಯಾಗಿದೆ. ಹಾಗಾಗಿ ಜನರು ಖರೀದಿ ಮಾಡುತ್ತಿಲ್ಲ. ಹಬ್ಬ ಸಮೀಪಿಸುತ್ತಿದ್ದಂತೆ ಖರೀದಿ ಹೆಚ್ಚಾಗಬಹುದು ಎಂದು ವ್ಯಾಪಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ವ್ಯಾಪಾರ ಸ್ಥಳಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ತಂದಿದ್ದ ಕುರಿಗಳು ಹಾಗೂ ಗುಂಡ್ಲುಪೇಟೆ, ಚಾಮರಾಜನಗರ, ಮಂಡ್ಯ, ಮಳವಳ್ಳಿ, ಹಾಸನದಿಂದ ತಂದಿದ್ದ ಕುರಿಗಳು ಕಂಡು ಬಂದವು. ಈ ಪೈಕಿ ಬನ್ನೂರು, ಕಿರುಗಾವಲು ಕುರಿಗೆ ಬೇಡಿಕೆ ಹೆಚ್ಚಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.

ಕುರಿಗಳಿಗೆ ಹೆಚ್ಚಿನ ದರ ಇರುವುದರಿಂದ, ಖರೀದಿದಾರರು ಬೆಲೆ ಕೇಳಿ ಕೊಳ್ಳದೇ ಮುಂದೆ ಸಾಗಿದ ಸನ್ನಿವೇಶಗಳು ಸಹ ಕಂಡುಬಂದವು.

ವಿವಿಧ ತಳಿಯ ಕುರಿಗಳು: ಬನ್ನೂರು, ಕಿರುಗಾವಲು, ಅಮಿನ್ ಫಡ್, ಜೋಮ್ನಾಪುರಿ, ಕಬಿಣಿ, ನಾಟಿ ಬನ್ನೂರು ಹಾಗೂ ವಿವಿಧ ಬಗೆಯ ಹೋತಗಳು ಮಾರಾಟದ ಸ್ಥಳದಲ್ಲಿ ಕಂಡುಬಂದವು.

ಕುರಿ ಸಾಕಾಣಿಕೆ ಕುಂಠಿತ: ಮೊದಲಿಗಿಂತ ಈಗ ಕುರಿ ಸಾಗಾಣಿಕೆ ಗಣನೀಯವಾಗಿ ಇಳಿಕೆಯಾಗಿದ್ದು. ರೈತರಿಗೆ ಆದಾಯಕ್ಕಿಂತ ನಷ್ಟವೇ ಹೆಚ್ಚಾಗಿದೆ. ರೈತರು ಒಂದು ಕುರಿಗೆ 30 ಸಾವಿರ ಕೇಳಿದರೆ, ಮಧ್ಯವರ್ತಿಗಳು ಅದನ್ನು 15 ಸಾವಿರಕ್ಕೆ ಕೇಳುತ್ತಾರೆ. ಬೇರೆ ದಾರಿಯಿಲ್ಲದೇ ರೈತರು ಅರ್ಧ ಬೆಲೆಗೆ ಮಾರಿ ಹೋಗುತ್ತಿದ್ದಾರೆ. ಹಾಗಾಗಿ ಕುರಿ ಸಾಕಾಣಿಕೆಗೆ ರೈತರು ಆಸಕ್ತಿ ತೋರುತ್ತಿಲ್ಲ ಎನ್ನಲಾಗುತ್ತಿದೆ.

ಕುರಿಗಳಿಗೆ ಮೇವು ಹೇಗೆ?: ಹಿಂಡಿ–ಬೂಸ, ಮಿಶ್ರಣ ಫೀಡ್ಸ್, ಗರಿಕೆ ಹುಲ್ಲು, ಸೊಪ್ಪು, ಅರಳಿಮರ ಸೊಪ್ಪು, ಕುಲತಿ ಸೊಪ್ಪು ಜೊತೆಗೆ ದ್ರವರೂಪದ ವಸ್ತುಗಳನ್ನು ನೀಡಲಾಗುತ್ತದೆ.

ಕುರಿ ತೂಕ ತಿಳಿಯುವುದು ಹೇಗೆ: ಕುರಿ ತೂಕ ಕಂಡು ಹಿಡಿಯುವುದು ತುಂಬಾ ಸುಲಭ, ಕುರಿಯ ಮೇಲ್ಮೈನ ನಡು ಬಳಿ ಕೈ ಹಾಕಿ ತೂಕ ಅಳೆಯಲಾಗುತ್ತದೆ. ನಡುವಿನ ಮೂಳೆ ಕೈಗೆ ಸಿಕ್ಕರೆ ಅದು ಕಡಿಮೆ ದರಕ್ಕೆ ಮಾರಾಟವಾಗುತ್ತದೆ. ಬೆನ್ನುಮೂಳೆ ಸಿಗದೇ ಇದ್ದಲ್ಲಿ ಕುರಿ ತೂಕ ಜಾಸ್ತಿ ಇದೆ ಎಂದು ಅಧಿಕ ಬೆಲೆಗೆ ಮಾರಾಟವಾಗುತ್ತದೆ ಎನ್ನುತ್ತಾರೆ ಮಧ್ಯವರ್ತಿ ಮಾರಾಟಗಾರರು.

ದಾಖಲೆ ಬರೆದ ಕುರಿಮರಿ

ಬರೋಬ್ಬರಿ 2,60,000ಕ್ಕೆ ಮಾರಾಟ ವಾಗುವ ಮೂಲಕ ಕಿರುಗಾವಲು ಕುರಿಮರಿ ದಾಖಲೆ ಬರೆದಿದೆ. ಇದನ್ನು ಬಾಂಬೆ ಮೂಲದ ವ್ಯಕ್ತಿಯೊಬ್ಬರು ಖರೀದಿಸಿ ಕೊಂಡೊಯ್ದಿದ್ದಾರೆ ಎಂದು ಕುರಿ ವ್ಯಾಪಾರಿಯೊಬ್ಬರು ಮಾಹಿತಿ ನೀಡಿದರು.

ಕುರಿಗಳ ದರ ಹೀಗಿದೆ

ಕುರಿಗಳು	ದರ(80 ಕೆಜಿಗೆ)
ಅಮಿನ್ ಫಡ್(ಜೊತೆ)	40,000–50,000
ಬನ್ನೂರು(ಜೊತೆ)	80,000
ಕಿರುಗಾವಲು(ಜೊತೆ)	45,000–50,000
ಗಂಡಸಿ(ಜೊತೆ)	60,000
ಹೋತ(ಒಂದಕ್ಕೆ)	60,000



ಈ ಹಿಂದೆ ರಾಜ್ಯದಲ್ಲಿ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಾರ್ವತ್ರಿಕ ಅಧಿನಿಯಮ ಜಾರಿಯಿಂದಾಗಿ, ದನ, ಎತ್ತು, ಕೋಣಗಳ ಬಲಿ ಕೊಡುವುದಕ್ಕೆ ಜನ ಹಿಂದೇಟು ಹಾಕುತ್ತಿದ್ದರು. ಹಾಗಾಗಿ ಆಡು, ಕುರಿ ಖರೀದಿಸುವವರ ಸಂಖ್ಯೆ ಹೆಚ್ಚಿತ್ತು. ಈಗ ಪರಿಸ್ಥಿತಿ ಬೇರೆಯೇ ಇದೆ. ಹಾಗಾಗಿ ಕುರಿ ಖರೀದಿಗೆ ಯಾರೂ ಮುಂದಾಗುತ್ತಿಲ್ಲ. ಅಲ್ಲದೇ ಕುರಿಗಳ ದರ ಏರಿಕೆಯಿಂದಾಗಿ ಕೊಳ್ಳುವವರ ಸಂಖ್ಯೆ ಕಡಿಮೆಯಾಗಿದೆ. ಬರುವವರೆಲ್ಲಾ ರೇಟ್ ವಿಚಾರಿಸಿ ಹಾಗೇ ಹೋಗುತ್ತಾರೆ.

-ನಸೀರ್ ಹುಸೇನ್, ಕುರಿ ವ್ಯಾಪಾರಿ

ಕುರಿ ಸಾಕಾಣಿಕೆಗೆ ರೈತರು ಮುಂದಾಗುತ್ತಿಲ್ಲ. ಅವುಗಳ ನಿರ್ವಹಣೆ ತುಂಬಾ ಕಷ್ಟವಾಗಿದೆ ಎನ್ನುತ್ತಾರೆ. ರೈತರಿಂದ ಕುರಿಗಳನ್ನು ಖರೀದಿ ಮಾಡದೇ ಇದ್ದರೆ, ನಮಗೂ ನಷ್ಟವಾಗುತ್ತದೆ. ಅಲ್ಲದೇ ಕುರಿಗಳಿಗೆ ನಿರೀಕ್ಷಿತ ಬೆಲೆ ಸಿಗುತ್ತಿಲ್ಲ. ಅಂದುಕೊಂಡಿದ್ದಕ್ಕಿಂತ ಕಡಿಮೆ ಬೆಲೆಗೆ ಜನ ಕೇಳುತ್ತಿದ್ದಾರೆ. ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಮಾರಾಟ ಮಾಡಿದರೆ ಹೆಚ್ಚಿನ ಲಾಭ ಸಿಗುವ ಸಾಧ್ಯತೆ ಇದೆ.

-ಕುಮಾರ್, ಕುರಿ ವ್ಯಾಪಾರಿ, ಬನ್ನೂರು

ನಕ್ಕರೆ ಅದೇ ಸ್ವರ್ಗ

ಗುಂಡ ಪ್ರಥಮ ಬಾರಿಗೆ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ,
ಆತನಿಗೆ ಭಯವಾಗಿತ್ತು, ವಿಮಾನ ಕೆಳಗೆ ಬಿದ್ದರೆ ಎಂದು....
ಗಗನಸಖಿಗೆ ಹೇಳಿದ,

ಗುಂಡ: ನಾನಿಲ್ಲಿ ಕೆಳಗೆ ಬಿದ್ದು ಸಾಯೋ ಮುನ್ನ ನನ್ನನ್ನು ಇಳಿಸಿಬಿಡಿ...!

ಗಗನಸಖಿ: ಹಾಗೆಲ್ಲಾ...ನಿಮ್ಮನ್ನು ಸಾಯಲು ಬಿಡೋದಿಲ್ಲಾ, ಹಾಗೊಮ್ಮೆ ಆಗುವ ಸಂದರ್ಭ ಬಂದ್ರೆ ನಿಮಗೆ 'ಪ್ಯಾರಾಚೂಟ್' ಕೊಡುತ್ತೇವೆ ಭಯಬೇಡ...

ಗುಂಡ: ಜೀವ ಹೋಗುವ ಹೊತ್ತಿನಲ್ಲೂ ನಿಮ್ಮ ತಮಾಷೆ ಬೇಡ, ತೆಂಗಿನೆಣ್ಣೆಯಿಂದ ನಾನೇನು ಬಜ್ಜಿ, ಬೋಂಡಾ ಮಾಡಬೇಕೆ, ಬೇಡ ವಿಮಾನ ನಿಲ್ಸಿ, ನಾನು ಇಳಿಬೇಕು....!

ಮೈಸೂರು ಮಿತ್ರ
ಸೋಮವಾರ, 19 ಜೂನ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ಜಗತ್ತು ಬಾಧೆಗೊಳಗಾಗುತ್ತಿರುವುದು ದುರ್ಜನರ ಹಿಂಸಾಚಾರದಿಂದಲ್ಲ, ಅದರ ವಿರುದ್ಧ ದನಿ ಎತ್ತದ ಸಜ್ಜನರ ಮೌನದಿಂದ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಶಕ್ತಿಗಿಂತ ಯುಕ್ತಿ ಮೇಲು

ನಿಮ್ಮ ಪತ್ರಗಳು

ಪಠ್ಯ ಪುಸ್ತಕ ಪುನರ್ ಪರಿಷ್ಕರಣೆ–ಒಂದು ಚಿಂತನೆ

ಮಾನ್ಯರೆ,

ಪಠ್ಯ ಪುಸ್ತಕಗಳ ಪರಿಷ್ಕರಣೆ ಬಗ್ಗೆ ನೂತನ ಕಾಂಗ್ರೆಸ್ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ಸಾಕಷ್ಟು ಟೀಕೆ ಟಿಪ್ಪಣಿಗಳು ವ್ಯಕ್ತವಾಗುತ್ತಿವೆ. ಹಿಂದಿನ ಬಿಜೆಪಿ ಸರ್ಕಾರ ಅಳವಡಿಸಿದ್ದ ಸಾವರ್ಕರ್ ಹಾಗೂ ಇನ್ನಿತರ ಕೆಲವು ವ್ಯಕ್ತಿಗಳ ಪಠ್ಯಗಳನ್ನು ನೂತನ ಸರ್ಕಾರ ಕೈಬಿಟ್ಟಿದೆ. ಬಹು ಮುಖ್ಯವಾಗಿ, ಪಠ್ಯ ಪುಸ್ತಕಗಳಲ್ಲಿ ಯಾರ ಯಾರ ಚರಿತ್ರೆ ಅಥವಾ ವಿಷಯಗಳನ್ನು ಅಳವಡಿಸಬೇಕು ಎಂಬ ಮೂಲಭೂತವಾದ ಪ್ರಶ್ನೆಗೆ ಉತ್ತರ ಕಂಡು ಕೊಳ್ಳೋಣ. ಶಾಲಾ ಮಕ್ಕಳ ಮನಸ್ಸು ತುಂಬಾ ಮೃದು ಹಾಗೂ ಸಂವೇದನಾಶೀಲವಾಗಿರುತ್ತದೆ. ಅಂತಹ ಮಕ್ಕಳ ಮನಸ್ಸುಗಳ ಮೇಲೆ ಗುಣಾತ್ಮಕ ಹಾಗೂ ಸಕಾರಾತ್ಮಕ ಪರಿಣಾಮವನ್ನು ಉಂಟು ಮಾಡುವಂತಹ ಪಠ್ಯಗಳನ್ನು ಅಳವಡಿಸಬೇಕು. ಇದರಲ್ಲಿ ರಾಜಕೀಯವನ್ನು ಎಳೆದು ತರುವುದು ಘೋರ ಅಪರಾಧವಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರರನ್ನು, ಹಿರಿಯ ಸಾಹಿತಿಗಳನ್ನು, ದೇಶದ ಹೆಮ್ಮೆಯ ವಿಜ್ಞಾನಿಗಳನ್ನು, ಸಂಗೀತ ಮತ್ತು ಇತರ ಕಲಾಕಾರರನ್ನು ದೇಶಕ್ಕಾಗಿ ಪ್ರಾಣ ತೆತ್ತ ಯೋಧರನ್ನು, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರನ್ನು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳ ಹಾಗೂ ಇತರ ಕ್ಷೇತ್ರಗಳ ಸಾಧಕರ ಜೀವನ ಚರಿತ್ರೆ ವಿದ್ಯಾರ್ಥಿಗಳ ಪಾಲಿಗೆ ಆಶಾಕಿರಣವಾಗಬಲ್ಲದು.

ತಾವೂ ಕೂಡ ಅವರ ಹಾಗೆ ಏನಾದರೂ ಸಾಧಿಸಬೇಕೆಂಬ ಛಲವನ್ನು ಹುಟ್ಟು ಹಾಕಬಲ್ಲದು. ಇದೊಂದು ರೀತಿಯ ಪ್ರೇರಕಶಕ್ತಿಯಾಗಿ ಕೆಲಸ ಮಾಡಿ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಉತ್ತಮಪಡಿಸಿಕೊಳ್ಳಲು ಸಹಕಾರಿಯಾಗಬಲ್ಲದು. ದುರದೃಷ್ಟಕರ ಸಂಗತಿ ಎಂದರೆ ಇತ್ತೀಚಿನ ವರ್ಷಗಳಲ್ಲಿ ಆಳುವ ಪಕ್ಷದ ತಾಳಕ್ಕೆ ತಕ್ಕಂತೆ ಪಠ್ಯಗಳು ಬದಲಾಗುತ್ತಾ ಬರುತ್ತಿದ್ದು, ಸಾಕಷ್ಟು ವಿವಾದಗಳಿಗೆ ಕಾರಣವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಕಾಲಕ್ಕೆ ತಕ್ಕಂತೆ ಪಠ್ಯ ಪುಸ್ತಕಗಳನ್ನು ಪರಿಷ್ಕರಣೆ ಮಾಡಲು ಶಿಕ್ಷಣ ತಜ್ಞರ ಒಂದು ಸಮಿತಿ ನೇಮಕ ಮಾಡಿ, ಇದರ ಅಧ್ಯಕ್ಷರು ಹಾಗೂ ಸದಸ್ಯರು, ಯಾವುದೇ ರಾಜಕೀಯ ಪಕ್ಷಕ್ಕೂ ನಿಷ್ಠೆ ಹೊಂದದ ಹಾಗೂ ಸ್ವತಂತ್ರ ಮನೋಭಾವದ ಶಿಕ್ಷಣ ತಜ್ಞರಾಗಿರಬೇಕು. ಪಠ್ಯ ಪುಸ್ತಕಗಳ ಪರಿಷ್ಕರಣೆ ವಿಷಯದಲ್ಲಿ ರಾಜಕೀಯ ಬೆರೆಸುವುದು ಅನ್ನದಲ್ಲಿ ವಿಷವನ್ನು ಬೆರೆಸಿದ ಹಾಗಾಗುತ್ತದೆ. ಈ ಸತ್ಯವನ್ನು ಸಂಬಂಧಪಟ್ಟವರು ಅರಿಯುವಂತಾಗಲಿ.

–ಕೆ.ವಿ.ವಾಸು, ವಕೀಲರು, ವಿವೇಕಾನಂದ ನಗರ, ಮೈಸೂರು

ಆಷಾಢ ಆರಂಭವಾದರೂ ಚಾಮುಂಡಿ ಬೆಟ್ಟದಲ್ಲಿ ಕಾಣದ ಮೂಲ ಸೌಕರ್ಯ

ಮಾನ್ಯರೆ,

ಆಷಾಢ ಮಾಸದಲ್ಲಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಸಾವಿರಾರು ಭಕ್ತರು ಮೆಟ್ಟಿಲುಗಳ ಮೂಲಕ ಪ್ರತಿದಿನ ಹರಕೆಯೊಂದಿಗೆ ಹತ್ತುತ್ತಾರೆ, ಆದರೆ ಮೂಲ ಸೌಕರ್ಯವಿಲ್ಲದೇ ಮಹಿಳೆಯರು ಹಿರಿಯ ನಾಗರಿಕರು ಪರದಾಡುವ ಪರಿಸ್ಥಿತಿ ಇಲ್ಲಿದೆ. ಚಾಮುಂಡಿ ಬೆಟ್ಟದ ಪಾದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿದೆ ಎಂದು ನಗರಪಾಲಿಕೆ ಅಧಿಕಾರಿಗಳು ಉಚಿತ ಕುಡಿಯುವ ನೀರಿನ ಘಟಕ ಹಾಗೂ ಶೌಚಾಲಯ ನಿರ್ಮಾಣಕ್ಕೆ ಮುಂದಾಗಲಿಲ್ಲವೇನೋ ಎಂಬ ಪ್ರಶ್ನೆ ಕಾಡುತ್ತಿದೆ, ಭಕ್ತಾದಿಗಳು ಬೆಟ್ಟದ ಮೆಟ್ಟಿಲು ಪಕ್ಕದಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನ ಮತ್ತು ಇನ್ನಿತರ ಧಾರ್ಮಿಕ ಕೇಂದ್ರಗಳಲ್ಲಿ ಶೌಚಾಲಯಕ್ಕೆ ಮತ್ತು ಕುಡಿಯುವ ನೀರಿಗೆ ಹೋಗಬೇಕಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯ ಇಲ್ಲಿ ಎದ್ದು ಕಾಣುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಸಭೆ ನಡೆಸಿ ಅಧಿಕಾರಿಗಳಿಗೆ ಸೂಚಿಸಿದರೂ ಅದು ಏಸಿ ರೂಂ ಮೀಟಿಂಗ್‌ಗೆ ಸೀಮಿತವಾಯ್ತೇ! ಇನ್ನೂ ಚಾಮುಂಡಿಬೆಟ್ಟದ ಮೇಲೆ ಪ್ರಾಥಮಿಕ ಆರೋಗ್ಯ ಕೇಂದ್ರ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಇತ್ತ ಆರೋಗ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸುತ್ತಿಲ್ಲ. ಚಾಮುಂಡಿಬೆಟ್ಟದ ನಿವಾಸಿಗಳಿಗೆ ವಾರಕ್ಕೆ ಎರಡು ದಿನ ಮಾತ್ರ ಕುಡಿಯುವ ನೀರು ಸಿಗುತ್ತದೆ ಎಂದರೆ ಆಷಾಢ ಮಾಸದಲ್ಲಿ ಪ್ರತಿದಿನ ಆಗಮಿಸುವ ಲಕ್ಷಾಂತರ ಭಕ್ತರ ಪಾಡೇನು, ತಿರುಪತಿ ಮತ್ತು ಗೋಪಾಲಸ್ವಾಮಿ ಬೆಟ್ಟದ ಮಾದರಿಯಲ್ಲಿ ಪ್ಲಾಸ್ಟಿಕ್ ಬಳಕೆ ತಡೆಗಟ್ಟಲು ಟಾಸ್ಕ್ ಫೋರ್ಸ್ ರಚಿಸಿ ನಗರ ಬಸ್ ನಿಲ್ದಾಣ, ಪಾರ್ಕಿಂಗ್ ಜೋನ್, ಚಾಮುಂಡಿಬೆಟ್ಟ ಪ್ರಾರಂಭದ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಮಾಡಿ ತಡೆಗಟ್ಟಿದರೆ ಚಾಮುಂಡಿಬೆಟ್ಟ ಪ್ಲಾಸ್ಟಿಕ್ ಮುಕ್ತ ವಲಯವಾಗುತ್ತದೆ.

–ಅಜಯ್ ಶಾಸ್ತ್ರಿ, ಸಾಮಾಜಿಕ ಹೋರಾಟಗಾರ

ಕೇಂದ್ರ ಸರ್ಕಾರದ ಗ್ಯಾರಂಟಿಗಳು ಏನಾದವು...

ಮಾನ್ಯರೆ,

ಕೇಂದ್ರ ಸರ್ಕಾರವು ಯಶಸ್ವಿಯಾಗಿ ಒಂಭತ್ತು ವರ್ಷಗಳನ್ನು ಪೂರೈಸಿ ಮುನ್ನಡೆಯುತ್ತಿದೆ. ಇದು ಖುಷಿಯ ವಿಚಾರವೆ. ಆದರೆ, ಹಿಂದಿನ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಾಷ್ಟ್ರದ ಜನತೆಗೆ ಹಲವು ಗ್ಯಾರಂಟಿಗಳ ಭರವಸೆಯನ್ನು ನೀಡಿದ್ದು ಅದರಲ್ಲಿ ಕಪ್ಪು ಹಣವನ್ನು ಹೊರ ತರುವುದಾಗಿಯೂ, ದೇಶದಲ್ಲಿನ ನಿರುದ್ಯೋಗ ಯುವ ಜನರಿಗೆ ಉದ್ಯೋಗವನ್ನು ಕಲ್ಪಿಸಿ ಕೊಡುವುದಾಗಿ ಹಾಗೂ ಜನರ ಬ್ಯಾಂಕ್ ಖಾತೆಗೆ ಹಣ ಹಾಕುವುದಾಗಿಯೂ ರೈತರಿಗೆ ಉನ್ನತ ಮಟ್ಟದ ಸೌಲಭ್ಯಗಳನ್ನು ನೀಡುವ ದೊಡ್ಡ ದೊಡ್ಡ ಭರವಸೆಗಳನ್ನು ಅಧಿಕಾರಕ್ಕೆ ಬಂದು ನಾಲ್ಕು ವರ್ಷ ಪೂರ್ಣಗೊಂಡರೂ ಸಹ ಒಂದು ಭರವಸೆಯನ್ನು ಈಡೇರಿಸಿಲ್ಲ. ಇದಕ್ಕೆಲ್ಲ ಉತ್ತರ ನೀಡುವವರು ಯಾರು? ಮತದಾನ ಮಾಡಿ ಗೆಲ್ಲಿಸಿದ ತಪ್ಪಿಗೆ ಪ್ರಶ್ನೆ ಮಾಡುವ ಅಧಿಕಾರವನ್ನು ಸಹ ಕಳೆದುಕೊಂಡಿದ್ದೇವೆಯೇ? ಇನ್ನು ಎಷ್ಟು ವರ್ಷ ಇದೆ ನಂಬಿಕೆಯಲ್ಲಿ ಜನರು ಕಾಯಬೇಕು? ಬಹುಶಃ ಮುಂಬರುವ ಲೋಕಸಭಾ ಚುನಾವಣೆಯಲ್ಲಿಯೂ ಸಹ ಇದೇ ಗ್ಯಾರಂಟಿಗಳನ್ನು ಮುಂದಿಟ್ಟುಕೊಂಡು ಮತ ಸೆಳೆಯುವ ಮನಸ್ಥಿತಿಯಲ್ಲಿದೆ ಎಂದೆನಿಸುತ್ತಿದೆ. ಪ್ರಸ್ತುತ ಮತದಾರರಾದ(ಪ್ರಜೆಗಳು)ನಾವು ಯಾವುದನ್ನು ಸಹ ಊಹಿಸಲು ಸಾಧ್ಯವಿಲ್ಲ. ಪಕ್ಷ ಪಕ್ಷಗಳ ನಡುವಿನ ಕಿತ್ತಾಟದಲ್ಲಿ ಎಲ್ಲ ರಾಜಕೀಯ ವ್ಯಕ್ತಿಗಳು ಹಾಗೂ ಮಂತ್ರಿಗಳು ತಮ್ಮ ವೈಯಕ್ತಿಕ ಬೆಳವಣಿಗೆಯನ್ನು ಮಾತ್ರ ನೋಡಿಕೊಳ್ಳುತ್ತಿದ್ದಾರೆ. ರಾಷ್ಟ್ರದ ಜನತೆಯ ಕಷ್ಟಗಳಿಗೆ ಸ್ಪಂದಿಸುವವರು ಯಾರೂ ಇಲ್ಲ. ಇದೆಲ್ಲದರ ನಡುವೆ ನಾವು ಮೋಸ ಹೋಗುತ್ತಿರುವುದಂತೂ ಸತ್ಯ. ಹಾಗಾಗಿ ದಯಮಾಡಿ ಭರವಸೆಗಳನ್ನು ಕೇವಲ ಭರವಸೆಗಳಾಗಿ ಉಳಿದುಕೊಳ್ಳುವಂತೆ ಮಾಡದೇ ಅದನ್ನು ಬೇಗ ಚಾಲ್ತಿಗೆ ತರುವ ಕೆಲಸ ಆಗಬೇಕಿದೆ. ಇಲ್ಲವಾದರೆ ಮುಂದಿನ ಚುನಾವಣೆಯ ಯುದ್ಧದಲ್ಲಿ ಜನರೇ ನಿಮಗೆ ತಕ್ಕ ಪಾಠ ಕಳಿಸುವುದು ಖಚಿತ.

ಐಶ್ವರ್ಯ, ಚಟ್ನಹಳ್ಳಿ
ಪತ್ರಿಕೋದ್ಯಮ ವಿದ್ಯಾರ್ಥಿನಿ,ಮಾನಸ ಗಂಗೋತ್ರಿ, ಮೈಸೂರು.



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಅನಿವಾರ್ಯದ ದಾಂಪತ್ಯವೋ... ಅನುರಾಗದ ದಾಂಪತ್ಯವೋ...?



> "ದಾಂಪತ್ಯದಲ್ಲಿ ಹೊಂದಾಣಿಕೆ ಎಂಬುದು ಬಹುಮುಖ್ಯ. ಗಂಡ-ಹೆಂಡಿರ ಅಭಿರುಚಿ, ಆಸಕ್ತಿ, ಆಲೋಚನೆ, ವಯೋಮಾನ, ವರಮಾನ, ಮನೋಭಾವ ಒಂದೇ ತೆರನಾಗಿ ಇರುವುದಿಲ್ಲ. ಭಿನ್ನ ಭಿನ್ನ ಪರಿಸರ, ಸಂಸ್ಕೃತಿ, ಸಂಪ್ರದಾಯದಲ್ಲಿ ಬೆಳೆದಿದ್ದರೂ ಮದುವೆಯಾದ ಮೇಲೆ ಒಟ್ಟಿಗೆ ಅನೇಕ ದಶಕಗಳ ಕಾಲ ಇರಬೇಕಾದುದು ಅನಿವಾರ್ಯವಾಗಿರುತ್ತದೆ. ಕೆಲವೇ ದಂಪತಿಗಳಲ್ಲಿ ಅನ್ಯೋನ್ಯತೆಯನ್ನು ಕಾಣಬಹುದಾಗಿರುತ್ತದೆ. ಅವರು ಭಿನ್ನತೆಯನ್ನು ಗೌರವಿಸುತ್ತಾ ಪರಸ್ಪರ ಹೊಂದಾಣಿಕೆಯಿಂದ ಬದುಕುವ ಕಲೆ ರೂಢಿಸಿಕೊಂಡಿರುತ್ತಾರೆ. ಆದರೆ ಬಹುಪಾಲು ದಂಪತಿಗಳಲ್ಲಿ ಭಿನ್ನತೆಯೇ ಭಿನ್ನಮತವನ್ನು ಹುಟ್ಟಿಹಾಕಿಬಿಡುತ್ತದೆ. 'ಗಂಡ ಹೆಂಡಿರ ಜಗಳ ಉಂಡು ಮಲಗುವವರೆಗೆ' ಎಂಬುದು ಜನಪ್ರಿಯ ಗಾದೆ, ಆದರೆ ಇಂದು ಅನೇಕ ಮನೆಗಳಲ್ಲಿ 'ಗಂಡ ಹೆಂಡಿರ ಜಗಳ ಉಂಡ ನಂತರ ಪ್ರಾರಂಭವಾಗುವುದು' ಅಸಹಜ ಎನಿಸಿದರೂ ಸತ್ಯವೇ ಆಗಿದೆ. ಅನೇಕ ದಾಂಪತ್ಯಗಳು ಸಮಾಜದ ಕಣ್ಣಿಗೆ ಎಲ್ಲವೂ ಸರಿಯಾಗಿದೆ ಎನಿಸಿದರೂ ಮನೆ ಹಾಗೂ ಮನಗಳ ಒಳಗೆ ಒಂದು ಸಂಘರ್ಷ, ಘರ್ಷಣೆ, ವಾದ-ವಿವಾದ ನಡೆಯುತ್ತಲೇ ಇರುತ್ತದೆ. ಸಮಾಜದ ನೈತಿಕ ಪೋಲೀಸಿಂಗ್‌ಗೆ ಹೆದರಿ ಎಲ್ಲವನ್ನು ಮುಚ್ಚಿಟ್ಟು, ಬಚ್ಚಿಟ್ಟು ಒಂದೇ ಮನೆಯಲ್ಲಿ ಒಟ್ಟಿಗೆ ಇದ್ದು ಅನಿವಾರ್ಯವಾಗಿ ಕಾಲದೂಡುತ್ತಿರುತ್ತಾರೆ.

ಇಂದು ಸಮಾಜದಲ್ಲಿ ಆದರ್ಶ ದಂಪತಿಗಳಿಗಿಂತ ಆಕರ್ಷಕ ದಂಪತಿಗಳು ಹೆಚ್ಚಾಗಿ ಕಾಣಸಿಗುತ್ತಾರೆ. ಅನುರಾಗದ ಅಡಿಪಾಯದ ಮೇಲೆ ದಾಂಪತ್ಯವು ನಡೆದರೆ ಅದು ಸುಮಧುರವೂ ಸುಂದರವೂ ಆಗಿರುತ್ತದೆ. ಆದರೆ ಇಂದು ಅನೇಕ ಕುಟುಂಬಗಳನ್ನು ಗಮನಿಸಿದಲ್ಲಿ ದಾಂಪತ್ಯ ಎಂಬುದು ಅನುರಾಗದ ಬದಲು ಅನಿವಾರ್ಯದ ಅಡಿಪಾಯದ ಮೇಲೆ ನಿಂತಿದೆಯೇನೋ ಎಂದು ಅನಿಸದೆ ಇರದು! ಸುಶಿಕ್ಷಿತರಾದ ಜನರ ದಾಂಪತ್ಯದಲ್ಲೇ ಸುಭದ್ರತೆ ಕಾಣದೇ ಇರುವುದು ದುರದೃಷ್ಟಕರ. ವಿದ್ಯಾವಂತ ಕುಟುಂಬಗಳಲ್ಲಿಯೇ ಹೊಂದಾಣಿಕೆ ಕೊರತೆ ಎದ್ದು ಕಾಣುತ್ತಿರುವುದು ಆಶ್ಚರ್ಯವೆನಿಸುತ್ತದೆ. ಹಿಂದೆ ಮದುವೆಯಾಗುವುದು ಸುಲಭವಾಗಿತ್ತು, ವಿಚ್ಛೇದನ ಪಡೆದುಕೊಳ್ಳುವುದು ಕಷ್ಟಕರವಾಗಿತ್ತು. ಇಂದಿನ ನಾಗರಿಕ ಪ್ರಪಂಚದಲ್ಲಿ ಮದುವೆಯಾಗುವುದು ಬಲು ಕಷ್ಟಕರವಾಗಿದ್ದು, ವಿಚ್ಛೇದನ ಪಡೆದುಕೊಳ್ಳುವುದು ಸುಲಭವಾಗಿರುವುದು ಅನಾರೋಗ್ಯಕರ ಬೆಳವಣಿಗೆಯಾಗಿದೆ.

ಮನುಷ್ಯನ ಬದುಕೇ ಒಂದು ವಿಶಿಷ್ಟ ಅನುಭೂತಿ. ಭೂಮಿಯ ಮೇಲೆ ವ್ಯವಸ್ಥಿತವಾಗಿ ಬದುಕಲು ಕಾಲದಿಂದ ಕಾಲಕ್ಕೆ ನಾಗರಿಕನಾಗುತ್ತಾ, ತನ್ನ ಸುಖ ಸಂತೋಷವನ್ನು ಇಮ್ಮಡಿಗೊಳಿಸಿಕೊಳ್ಳಲು, ಕಷ್ಟವನ್ನು ಹಂಚಿಕೊಂಡು ಕಡಿಮೆ ಮಾಡಿಕೊಳ್ಳಲು ಸೂತ್ರದಂತೆ ಸಂಸಾರಿಕ ಜೀವನವನ್ನು ಕಂಡುಕೊಂಡಿದ್ದಾನೆ. ಗಂಡಿಗೊಂದು ಹೆಣ್ಣು, ಹೆಣ್ಣಿಗೊಂದು ಗಂಡು ಪರಸ್ಪರ ಆಸರೆಯಾಗಿ, ಮೈಮನಗಳ ಅಗತ್ಯಗಳನ್ನು ಪೂರೈಸಿಕೊಳ್ಳಲು ದಾಂಪತ್ಯ ಬದುಕನ್ನು ರೂಢಿಸಿಕೊಂಡಿದ್ದಾನೆ. ವಂಶಾಭಿವೃದ್ಧಿಯು ಸಹ ದಾಂಪತ್ಯದ ಉದ್ದೇಶಗಳಲ್ಲೊಂದಾಗಿದೆ. ಒಂದೊಂದು ಧರ್ಮದಲ್ಲಿ ಒಂದೊಂದು ರೀತಿಯ ರಿವಾಜುಗಳಿದ್ದರೂ ಏಕ ಪತಿ/ಪತ್ನಿ ದಾಂಪತ್ಯ ಸಂಬಂಧ ಎನ್ನುವುದು ಲಿಖಿತ ಕಾನೂನಿಗಿಂತ ಅಲಿಖಿತ ನಿಯಮದಂತೆ ಅನೇಕ ವರ್ಷಗಳಿಂದ ಜಗತ್ತಿನೆಲ್ಲೆಡೆ ಜಾರಿಯಲ್ಲಿದೆ. ಯಶಸ್ವಿ ದಾಂಪತ್ಯಕ್ಕೆ ಕೆಲವು ಸಿದ್ಧ ಸೂತ್ರಗಳಿದ್ದರೂ, ಸೂತ್ರ ಮೀರಿದ ಸಂಕೀರ್ಣವಾದ ಸಂಬಂಧ ಇದಾಗಿರುವುದರಿಂದ ಒಬ್ಬೊಬ್ಬರ ದಾಂಪತ್ಯವು ಒಂದೊಂದು ಬಗೆಯದ್ದಾಗಿರುತ್ತದೆ. ಅನುರಾಗವೇ ಸುಖೀ ದಾಂಪತ್ಯಕ್ಕೆ ಇಂಧನ ಎನಿಸಿದರೂ ಇಂದಿನ ದಿನಮಾನದಲ್ಲಿ ಅನುರಾಗಕ್ಕಿಂತ ಹೆಚ್ಚಾಗಿ ಅನಿವಾರ್ಯತೆಯಿಂದ ದಾಂಪತ್ಯಗಳು ಉಳಿದುಕೊಂಡಿವೆ ಎನ್ನಬಹುದು.

ದಾಂಪತ್ಯದಲ್ಲಿ ಹೊಂದಾಣಿಕೆ ಎಂಬುದು ಬಹುಮುಖ್ಯ. ಗಂಡ–ಹೆಂಡಿರ ಅಭಿರುಚಿ, ಆಸಕ್ತಿ, ಆಲೋಚನೆ, ವಯೋಮಾನ, ವರಮಾನ, ಮನೋಭಾವ ಒಂದೇ ತೆರನಾಗಿ ಇರುವುದಿಲ್ಲ. ಭಿನ್ನ ಭಿನ್ನ ಪರಿಸರ, ಸಂಸ್ಕೃತಿ, ಸಂಪ್ರದಾಯದಲ್ಲಿ ಬೆಳೆದಿದ್ದರೂ ಮದುವೆಯಾದ ಮೇಲೆ ಒಟ್ಟಿಗೆ ಅನೇಕ ದಶಕಗಳ ಕಾಲ ಇರಬೇಕಾದುದು ಅನಿವಾರ್ಯವಾಗಿರುತ್ತದೆ. ಕೆಲವೇ ದಂಪತಿಗಳಲ್ಲಿ ಅನ್ಯೋನ್ಯತೆಯನ್ನು ಕಾಣಬಹುದಾಗಿರುತ್ತದೆ. ಅವರು ಭಿನ್ನತೆಯನ್ನು ಗೌರವಿಸುತ್ತಾ ಪರಸ್ಪರ ಹೊಂದಾಣಿಕೆಯಿಂದ ಬದುಕುವ ಕಲೆ ರೂಢಿಸಿಕೊಂಡಿರುತ್ತಾರೆ. ಆದರೆ ಬಹುಪಾಲು ಗಂಡ ಹೆಂಡತಿ ಪರಸ್ಪರ ತಮ್ಮ ಮೂಗಿನ ನೇರಕ್ಕೆ ನಡೆಯಬೇಕು ಎಂಬ ಹಠದ ಸ್ವಭಾವದಿಂದ ಸಂಬಂಧ ಹುಲುಸಾಗಿ ಬೆಳೆಯುವ ಬದಲು ಹಳಸಾಗಿ ಬಿಡುವ ಸಾಧ್ಯತೆ ಹೆಚ್ಚಾಗಿರುತ್ತದೆ.

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ತಮ್ಮ ಕವನವೊಂದರಲ್ಲಿ 'ಹತ್ತಿರವಿದ್ದು ದೂರ ನಿಲ್ಲುವೆವು ನಮ್ಮ ಅಹಮ್ಮಿನ ಕೋಟೆಯಲಿ, ಎಷ್ಟು ಕಷ್ಟವೋ ಹೊಂದಿದೆ ಎಂಬುದು ನಾಲ್ಕು ದಿನದ ಬದುಕಿನಲಿ' ಎಂದು ಹೇಳಿರುವುದು ದಾಂಪತ್ಯ ಸಂಬಂಧಕ್ಕೆ ಹೆಚ್ಚು ಅನ್ವಯಿಸುತ್ತದೆ. ಪ್ರತಿಷ್ಠೆ ಹಾಗೂ ಅಹಮಿಕೆಯು ಸಹ ದಾಂಪತ್ಯದಲ್ಲಿ ದೊಡ್ಡ ಬಿರುಕು ಮೂಡಿಸುತ್ತಿರುವುದನ್ನು ಅಲ್ಲಗಳೆಯಲಾಗದು. 'ಗಂಡ ಹೆಂಡಿರ ಜಗಳ ಉಂಡು ಮಲಗುವವರೆಗೆ' ಎಂಬುದು ಜನಪ್ರಿಯ ಗಾದೆ, ಆದರೆ ಇಂದು ಅನೇಕ ಮನೆಗಳಲ್ಲಿ ಗಂಡ ಹೆಂಡಿರ ಜಗಳ ಉಂಡ ನಂತರವೇ ಪ್ರಾರಂಭವಾಗುತ್ತಿರುವುದು ಅಸಹಜ ಎನಿಸಿದರೂ ಸತ್ಯವೇ ಆಗಿದೆ. ಅನೇಕ ದಾಂಪತ್ಯಗಳು ಸಮಾಜದ ಕಣ್ಣಿಗೆ ಎಲ್ಲವೂ ಸರಿಯಾಗಿದೆ ಎನಿಸಿದರೂ ಮನೆ ಹಾಗೂ ಮನಗಳ ಒಳಗೆ ಒಂದು ಸಂಘರ್ಷ, ಘರ್ಷಣೆ, ವಾದ–ವಿವಾದ ನಡೆಯುತ್ತಲೇ ಇರುತ್ತದೆ. ಸಮಾಜದ ನೈತಿಕ ಪೊಲೀಸಿಂಗ್‌ಗೆ ಹೆದರಿ ಎಲ್ಲವನ್ನು ಮುಚ್ಚಿಟ್ಟು, ಬಚ್ಚಿಟ್ಟು ಒಂದೇ ಮನೆಯಲ್ಲಿ ಒಟ್ಟಿಗೆ ಇದ್ದು ಅನಿವಾರ್ಯವಾಗಿ ಕಾಲದೂಡುತ್ತಿರುತ್ತಾರೆ.

ಅನೇಕ ಗಂಡ–ಹೆಂಡಿರು ತಮ್ಮ ದಾಂಪತ್ಯದ ಕುರಿತಾಗಿ ಅಸಮಾಧಾನವನ್ನು ಹೊರಹಾಕುವುದನ್ನು ಕಾಣಬಹುದು. 'ನಮ್ಮ ತಾಯಿತಂದೆ ಮಾತಿಗೆ ಬೆಲೆಕೊಟ್ಟು ನಿಮ್ಮನ್ನು ಕಟ್ಟಿಕೊಂಡು ಏಗುತ್ತಿದ್ದೇನೆ, ನನ್ನ ಅಭಿರುಚಿಯ ಆಯ್ಕೆ ನೀವಾಗಿರಲಿಲ್ಲ' ಎಂದು ತಮಾಷೆಯಾಗಿ ಹೇಳಿದರೂ ಮಾರ್ಮಿಕವಾಗಿ ಸ್ನೇಹಿತರು ಹಾಗೂ ಬಂಧುಗಳ ಸಮಕ್ಷಮದಲ್ಲಿ ಹೇಳುವುದನ್ನು ಕೇಳಿರುತ್ತೇವೆ. 'ನನಗೆ ಈಗಿನ ಬುದ್ಧಿ ಇದ್ದರೆ ನಿಮ್ಮನ್ನು ವರಿಸುತ್ತಿರಲಿಲ್ಲ' ಎಂದು ಅನೇಕ ಗೃಹಿಣಿಯರು ಘಂಟಾಘೋಷವಾಗಿ ಹೇಳುವುದು ಸಹ ಇದೆ. ಅಂದರೆ ಮದುವೆ ಎಂಬ ಸಾಂಪ್ರದಾಯಿಕ ಕಟ್ಟುಪಾಡಿನಲ್ಲಿ ಸಂಗಾತಿಯ ಆಯ್ಕೆ ಈ ಕಾಲದ ಹಾಗೆ ಹಿಂದೆ ನಡೆಯುತ್ತಿರಲಿಲ್ಲ. ತಾವಿಬ್ಬರು ಸ್ನೇಹಿತರು ಎನ್ನುವ ಕಾರಣಕ್ಕೆ ಸಂಬಂಧಿಗಳಾಗಲು ಇಚ್ಛೆಸಿ ಮಕ್ಕಳ ಇಚ್ಛೆಯನ್ನು ಅರಿಯದೆ/ಕೇಳದೆ ಮಕ್ಕಳ ಮದುವೆ ಮಾಡಿರುವ ಹಿರಿಯರ ಉದಾಹರಣೆ ಅನೇಕ.

ಹುಡುಗ ಸರ್ಕಾರಿ ಕೆಲಸದಲ್ಲಿ ಇದ್ದಾನೆ ಅಥವಾ ಶ್ರೀಮಂತ ಎನ್ನುವ ಕಾರಣಕ್ಕೆ ಅವನ ಕುರೂಪವನ್ನು ಪರಿಗಣಿಸದೆ ಮಗಳನ್ನು ಮದುವೆ ಮಾಡಿಕೊಟ್ಟ ಉದಾಹರಣೆಗಳು ಇವೆ. ಹುಡುಗಿ ಸುಂದರವಾಗಿದ್ದಾಳೆ ಅಂತಲೋ, ವರದಕ್ಷಿಣೆ ಹಣದ ಆಸೆಗೋ ಹುಡುಗಿಯನ್ನು ಮೆಚ್ಚಿ ಮದುವೆಯಾದ ಹುಡುಗ, ಆಕರ್ಷಣೆ ಕಡಿಮೆಯಾದ ಮೇಲೆ 'ಮೊಸರಲ್ಲಿ ಕಲ್ಲು ಹುಡುಕುವ ಕೆಲಸ' ಮಾಡುತ್ತಾನೆ. ಎಷ್ಟೋ ಮುಗ್ಧ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ಶೋಷಣೆಯನ್ನು ಸಹಿಸಿಕೊಂಡು ಬದುಕುತ್ತಿರುತ್ತಾರೆ, ಕೆಲವರು ಧಿಕ್ಕರಿಸಿ ಕೇಸ್ ದಾಖಲು ಮಾಡಿ ಬುದ್ಧಿ ಕಲಿಸುತ್ತಾರೆ, ಮತ್ತೆ ಕೆಲವು ದುರ್ಬಲ ಹೆಣ್ಣು ಮಕ್ಕಳು ಆತ್ಮಹತ್ಯೆ ಮಾಡಿಕೊಂಡು ಇಹಲೋಕವನ್ನೇ ತ್ಯಜಿಸಿಬಿಡುತ್ತಾರೆ.

ಮದುವೆಯಾದ ಪ್ರಾರಂಭದಲ್ಲಿ ಪ್ರಕೃತಿದತ್ತವಾಗಿ ಇರುವ ಆಕರ್ಷಣೆ ಕಾರಣಕ್ಕೆ ಗಂಡ–ಹೆಂಡಿರಲ್ಲಿ ಪರಸ್ಪರ ಪ್ರೀತಿ ಏರ್ಪಡಾಗುತ್ತದೆ. ದಂಪತಿಗಳಿಗೆ ಮಕ್ಕಳಾದ ಮೇಲೆ ಅಥವಾ ಕಾಲಾನಂತರ ಪರಸ್ಪರ ಆಕರ್ಷಣೆ ಕಡಿಮೆಯಾಗುವುದು ಸಹಜ. ಬದುಕಿನಲ್ಲಿ ಆದ್ಯತೆಗಳು ಬದಲಾಗುತ್ತಾ ಮದುವೆಯಾದ ಹೊಸದರಲ್ಲಿ ಇದ್ದ ಅನ್ಯೋನ್ಯತೆ, ಪರಸ್ಪರ ಸೋಲುವುದು, ಸಹಕಾರ ಮನೋಭಾವ ಕಡಿಮೆಯಾಗಿ ಮೂಲ ವ್ಯಕ್ತಿತ್ವ ಅನಾವರಣಗೊಳ್ಳುತ್ತಾ ಹೋಗುತ್ತದೆ. ಸಂಸಾರದಲ್ಲಿ ಸರಸ ನೈವೇದ್ಯವಾಗಿ ವಿರಸ ಊಟತಿಂಡಿಯಂತೆ ಆಗಿರುವ ಎಷ್ಟೋ ಕುಟುಂಬಗಳಿವೆ. ದಾಂಪತ್ಯದಲ್ಲಿ ಅನುರಾಗ ಆವಿಯಾಗಿ, ಅನಿವಾರ್ಯತೆಯನ್ನು ಮೀರಿದ ಸನ್ನಿವೇಶ ಸೃಷ್ಟಿಯಾಗಿ ವಿಚ್ಛೇದನದಲ್ಲಿ ಅಂತ್ಯವಾದ ಉದಾಹರಣೆಗಳಿವೆ.

ಭಾರತೀಯ ಪರಂಪರೆಯಲ್ಲಿ ಇತ್ತೀಚಿನವರೆಗೂ ಪುರುಷ ಪ್ರಧಾನ ಸಮಾಜದ್ದೇ ಪಾರುಪತ್ಯವಾಗಿತ್ತು. ಮಹಿಳೆಯರಿಗೆ ಸ್ವಾತಂತ್ರ್ಯ ಕಡಿಮೆ ಇತ್ತು, ಸಮಾನತೆ ಮಾತಂತೂ ಕೇಳಲೇ ಬೇಕಿರಲಿಲ್ಲ. ಆದರೆ ಬದಲಾದ ಕಾಲಘಟ್ಟದಲ್ಲಿ ಮಹಿಳೆಯರು ಯಾವ ಪುರುಷನಿಗೂ ಕಡಿಮೆ ಇಲ್ಲ ಎನ್ನುವುದನ್ನು ಅನೇಕ ಕ್ಷೇತ್ರಗಳಲ್ಲಿ ನಿರೂಪಿಸಿದ್ದಾರೆ. ಬಹಳ ವರ್ಷಗಳ ಹಿಂದೆ ವಧು ಪರೀಕ್ಷೆಯಲ್ಲಿ ಹುಡುಗ ಒಪ್ಪಿದರೆ ಮುಗಿಯಿತು, ಮದುವೆ ಹುಡುಗಿಯ ಇಚ್ಛೆಯನ್ನು ಕೇಳುವ ಪ್ರಮೇಯವೇ ಇರಲಿಲ್ಲ. ಹೀಗೆ ಮದುವೆಯಾದ ಹುಡುಗಿ ಪುರುಷನ ಕುಟುಂಬಕ್ಕೆ ಹೊಂದಿಕೊಳ್ಳಬೇಕಾದುದು ಅನಿವಾರ್ಯವಾಗಿತ್ತು. ಅವಳಿಗೆ ಕಷ್ಟವಾದರೂ, ಶೋಷಣೆಯಾದರು ಮತ್ತೆ ಅಪ್ಪನ ಮನೆ ಹೊಸ್ತಿಲನ್ನು ತುಳಿಯಲು ಇಚ್ಛಿಸದೇ ನೋವನ್ನು ನುಂಗಿಕೊಂಡು ಮಕ್ಕಳ ಏಳಿಗೆಗಾಗಿ, ಕುಟುಂಬದ ಸೌಖ್ಯಕ್ಕಾಗಿ ತನ್ನ ಇಚ್ಛೆ, ಸುಖ ಎಲ್ಲವನ್ನು ತ್ಯಾಗ ಮಾಡಿ ಬದುಕುತ್ತಿದ್ದಳು. ಈಗ ಕಾಲ ಬದಲಾಗಿದೆ. ಗಂಡನ ಮನೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಈಗಿನ ಹೆಣ್ಣು ಮಕ್ಕಳಿಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಸ್ವಲ್ಪ ವ್ಯತ್ಯಾಸವಾದರೂ ಬೇರೆ ಮನೆ ಮಾಡುವ ನಿರ್ಧಾರ ಮಾಡುತ್ತಾರೆ. ಗಂಡನಲ್ಲಿ ತುಸು ವ್ಯತ್ಯಾಸ ಕಂಡರೇ ವಿಚ್ಛೇದನಕ್ಕೆ ಮುಂದಾಗಿ ಬಿಡುತ್ತಾರೆ. ಒಬ್ಬರಿಗೊಬ್ಬರು ಸೋಲುವ, ಕುಟುಂಬದ ಹಿತಕ್ಕಾಗಿ ತ್ಯಾಗ ಮಾಡುವ, ಸಹಕರಿಸುವ ಮನೋಭಾವ ದಿನೇದಿನೇ ಕಡಿಮೆಯಾಗುತ್ತಿದೆ. ಕೆಲವು ಕುಟುಂಬಗಳಲ್ಲಿ ಅನುರಾಗಕ್ಕೆ ಬರವಿದ್ದರೂ ಅನಿವಾರ್ಯತೆಯ ಒರತೆಯಿಂದ ಕೆಲವು ದಾಂಪತ್ಯ ನಡೆಯುತ್ತಿರುತ್ತವೆ.

ಬದುಕಿನ ಗುಣಮಟ್ಟದ ಮಾನದಂಡಗಳನ್ನು ಅರಿಯುವಲ್ಲಿ ಆಧುನಿಕ ಯುವಜೋಡಿಗಳು ಸೋಲುತ್ತಿವೆ ಎಂದು ಹೇಳಬಹುದು. ಐಷಾರಾಮದ ಬದುಕಿಗೆ ಬಲಿಯಾಗಿ ಸಮಾಜದಲ್ಲಿ ಅನ್ಯರ ಕಣ್ಣುಕುಕ್ಕುವಂತೆ ಬದುಕುವ ಚಪಲ ಹೆಚ್ಚಾಗಿ, ಅನೇಕ ಅನಪೇಕ್ಷಿತ ಆಕಾಂಕ್ಷೆಗಳ ಬೆನ್ನೇರಿ, ಕೆಲವೇ ವರ್ಷಗಳಲ್ಲಿ ಜೀವಮಾನವಿಡಿ ಅನುಭವಿಸುವ ಸುಖ ಐಭೋಗಗಳನ್ನೆಲ್ಲಾ ತಮ್ಮದಾಗಿಸುವ ತವಕದಲ್ಲಿ ಒತ್ತಡಕ್ಕೆ ಸಿಲುಕಿ ನಲುಗುತ್ತಿದ್ದಾರೆ. ಯುವ ಜೋಡಿಗಳು ತಮ್ಮ ಸಂಪಾದನೆ ಮೀರಿ ಖರ್ಚನ್ನು ಮಾಡಲು ಬಯಸಿ, ಅನಗತ್ಯ ಸಾಲ ಮಾಡಿ ಇಲ್ಲದ ಸಿರಿವಂತಿಕೆಯನ್ನು ಪ್ರದರ್ಶಿಸಿ, ಸಾಲ ತೀರಿಸುವಾಗ ಇಲ್ಲದ ನೋವುಗಳನ್ನು ಅನುಭವಿಸಿ, ಪರಸ್ಪರ ದೂರುತ್ತಾ ದಾಂಪತ್ಯದ ಸುಖದಿಂದ ವಂಚಿತರಾಗಿ ದೂರಾಗಿ ಬಿಡುವ ಅನೇಕ ಯುವಜೋಡಿಗಳನ್ನು ಕಂಡಿರಬಹುದು.

ಇಂದು ಅರ್ಥ ಮಾಡಿಕೊಳ್ಳುವವರಿಗಿಂತ ಅಪಾರ್ಥ ಮಾಡಿಕೊಳ್ಳುವವರೇ ಹೆಚ್ಚು ಇಂದಿನ ಸೋಷಿಯಲ್ ಮೀಡಿಯಾ ಕಾಲದಲ್ಲಿ ನಂಬಿಕೆ ಎಂಬುದೇ ಮರೀಚಿಕೆಯಾಗಿದೆ. ಸಂಸ್ಕೃತಿಗಿಂತ ವಿಕೃತಿ ಹೆಚ್ಚಾಗಿ ಸರಸಕ್ಕಿಂತ ವಿರಸವೇ ಹೆಚ್ಚಾಗಿ, ಸಮರಸ ಅಪರೂಪವಾಗುತ್ತಿದೆ. ಆಚಾರ–ವಿಚಾರಗಳಲ್ಲಿ ಅಂತರ ಹೆಚ್ಚುತ್ತಿದೆ. ಆಧುನಿಕತೆ ಹೆಚ್ಚಾಗಿ, ಆಡಂಬರ ಹುಚ್ಚಾಗಿ ಎಷ್ಟೋ ಮನೆಗಳು ಹುಚ್ಚರ ಸಂತೆಯಾಗಿ ಮಾರ್ಪಾಡಾಗಿವೆ.

ಸುಖ ದಾಂಪತ್ಯಕ್ಕೆ ಆರ್ಥಿಕವಾಗಿ ಸುಭಿಕ್ಷವಾಗಿರುವುದೇ ಮುಖ್ಯವಾಗಿರುವುದಿಲ್ಲ. ಎಷ್ಟೋ ದಂಪತಿಗಳು ಬಡವರಾಗಿದ್ದರೂ ಅವರ ದಾಂಪತ್ಯ ಶ್ರೀಮಂತವಾಗಿರುತ್ತದೆ. ಆದರೆ ಎಷ್ಟೋ ಸಿರಿವಂತ ದಂಪತಿಗಳ ದಾಂಪತ್ಯ ಬಡವಾಗಿರುತ್ತದೆ. ದ.ರಾ.ಬೇಂದ್ರೆಯವರ ಈ ಕವನ ಆದರ್ಶ ದಂಪತಿಗಳಿಗೆ ಮೂಲಮಂತ್ರದಂತಿದೆ. 'ನಾನು ಬಡವಿ ಆತ ಬಡವ, ಒಲವೆ ನಮ್ಮ ಬದುಕು, ಬಳಸಿಕೊಂಡವದನೆ ನಾವು ಅದಕು ಇದಕು ಎದಕು'. ಒಲವೇ ಬದುಕಿನಲ್ಲಿ ನಿಜವಾದ ಗೆಲುವು. ಈ ಸತ್ಯವನ್ನು ಅರಿತುಕೊಂಡ ದಂಪತಿಗಳು ಸಂತೃಪ್ತ ಜೀವನವನ್ನು ಕಂಡುಕೊಂಡುವಲ್ಲಿ ಸಂಶಯವಿಲ್ಲ.

ಜಗತ್ತಿನಲ್ಲಿ ಯಾವುದೂ ಪರ್ಫೆಕ್ಟ್ ಅಂತ ಇರುವುದಿಲ್ಲ. ರೆಡಿಮೇಡ್ ವಸ್ತುಗಳಂತೆ ರೆಡಿಮೇಡ್ ವ್ಯಕ್ತಿಗಳು ಸಂಗಾತಿಗಳಾಗಿ ಸಿಗುವುದಿಲ್ಲ. ಸತಿಪತಿಗಳಾದ ಮೇಲೆ ಉದ್ದ ತುಂಡುಗಳನ್ನು ಸರಿಪಡಿಸಿಕೊಂಡು, ಸಂಬಂಧಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಪರಸ್ಪರ ನಂಬಿಕೆಯಿಟ್ಟು, ವೈಮನಸ್ಸು ಉಲ್ಬಣವಾಗಲು ಬಿಡದೆ ಡ್ಯಾಮೇಜ್ ಕಂಟ್ರೋಲ್ ಮಾಡಿಕೊಂಡು ಸಂಬಂಧಗಳನ್ನು ಗಟ್ಟಿಗೊಳಿಸಿಕೊಂಡರೆ ಆದರ್ಶ ದಂಪತಿಗಳಾಗುವುದು ಕಷ್ಟಸಾಧ್ಯವೇನಿಲ್ಲ. ಬಿಸಿರಕ್ತದ ಬಿರುಸಿನಲ್ಲಿ ಸಣ್ಣಪುಟ್ಟ ತಪ್ಪುಗಳಿಗೆ ಕಾಂಪ್ರಮೈಸ್ ಆಗದೆ ದೊಡ್ಡ ಜಗಳಗಳನ್ನು ಮಾಡಿ ಬೇರೆಯಾದರೆ, ಇಳಿವಯಸ್ಸಿನಲ್ಲಿ ಸಂಗಾತಿಯ ಅಗತ್ಯ ಎದ್ದು ಕಂಡಾಗ ಕಾಲ ಮಿಂಚಿ ಹೋಗಿರುತ್ತದೆ. ಒಂಟಿತನಕ್ಕಿಂತ ಬೇರೆ ಯಾತನೆ ಇರುವುದಿಲ್ಲ. ಏನಂತೀರಿ?

ಪದ ತಾಂಬೂಲ:

ದಾಂಪತ್ಯದಲ್ಲಿ ಅನುರಾಗವಿದ್ದರೆ ಜೇನುತುಪ್ಪ ಸವಿದಂತೆ,

ದಾಂಪತ್ಯ ಅನಿವಾರ್ಯವಾದರೆ ಜೇನುನೊಣ ಕಡಿದಂತೆ

ಮಹಾಜನ ಕಾಲೇಜಲ್ಲಿ ಮಂದಾರ ಬಿಡುಗಡೆ; ಪಂಪ ಪ್ರಶಸ್ತಿ ಪುರಸ್ಕೃತ ಪ್ರೊ.ಸಿಪಿಕೆ ಅವರಿಗೆ ಸನ್ಮಾನ



ಮೈಸೂರು, ಜೂ.18– ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ನಾಡಿನ ಹಿರಿಯ ವಿದ್ವಾಂಸರು ಹಾಗೂ ಪಂಪ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಸಿ.ಪಿ.ಕೃಷ್ಣಕುಮಾರ್ ಕಾಲೇಜಿನ ವಾರ್ಷಿಕ ಸಂಚಿಕೆ 'ಮಂದಾರ'ವನ್ನು ಲೋಕಾರ್ಪಣೆ ಮಾಡಿದರು. ಇದೇ ವೇಳೆ ಪ್ರೊ. ಸಿ.ಪಿ.ಕೆ ಅವರನ್ನು ಸನ್ಮಾನಿಸಲಾಯಿತು.

ಪ್ರೊ. ಸಿ.ಪಿ.ಕೆ ಅವರು ಮಾತನಾಡುತ್ತಾ, ಈ ಸುಂದರವಾದ 'ಮಂದಾರ' ಉತ್ತಮವಾದ ಲೇಖನಗಳನ್ನು ಒಳಗೊಂಡಿದೆ. ಈ ಸಂಚಿಕೆ ಚತುರ್ಭಾಷಾ ಸಂಚಿಕೆಯಾಗಿದೆ. ಇಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕೂಡ ತಮ್ಮ ಸೃಜನಶೀಲತೆಯನ್ನು ಮೆರೆದಿದ್ದಾರೆ. ಮಂದಾರ ಎಂದರೆ 'ಸ್ವರ್ಗದ ನಂದನವನದ ಹೂ'. ಅಲ್ಲದೆ ಸ್ವರ್ಗಕ್ಕೆ ಮಂದಾರ ಎಂಬ ಹೆಸರಿದೆ. ನಾವಿರುವ ಭೂಮಿಯನ್ನೇ ಸ್ವರ್ಗವನ್ನಾಗಿ ಮಾಡಿಕೊಳ್ಳಬೇಕು. ಇಂತಹ ವಾರ್ಷಿಕ ಸಂಚಿಕೆಗಳ ಪ್ರಯೋಜನವೆಂದರೆ, ಸಾಹಿತ್ಯದ ಅನುಸಂಧಾನ. ಇದರಿಂದ ವಿದ್ಯಾರ್ಥಿಗಳಿಗೆ ಓದು, ಬರಹದ ಬಗ್ಗೆ ಆಸಕ್ತಿ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳಿಗೆ ಪಠ್ಯ ಚಟುವಟಿಕೆಯಂತೆ ಪಠ್ಯೇತರ ಚಟುವಟಿಕೆಯು ಅಷ್ಟೇ ಮುಖ್ಯ ಎಂದರು.

ವಿದ್ಯಾರ್ಥಿಗಳು ಮಹಾಪುರುಷರ ಹಾಗೂ ಮಹಾಮಹಿಳೆಯರ ಜೀವನ ಚರಿತ್ರೆಗಳನ್ನು ಓದಬೇಕು. ಆ ಮೂಲಕ ತಮ್ಮ ಜೀವನವನ್ನು ಉದಾತ್ತಗೊಳಿಸಿ ಕೊಳ್ಳಬೇಕು. ಯುವಜನಾಂಗಕ್ಕೆ ಸ್ವಾಮಿ ವಿವೇಕಾನಂದರಿಗಿಂತ ಮತ್ತೊಂದು ಆದರ್ಶವಿಲ್ಲ. ಪಂಪನ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಮಾತನ್ನು ಉಲ್ಲೇಖಿಸುತ್ತಾ, ಕುವೆಂಪು ಅವರ ವಿಶ್ವ ಮಾನವ ಸಂದೇಶವನ್ನು ಪ್ರತಿಯೊಬ್ಬರು ಅನುಷ್ಠಾನಕ್ಕೆ ತರಬೇಕು ಎಂದರು. 'ನಭಕೇರಿದ ಅಪರಂಜಿ' ಶೀರ್ಷಿಕೆಯಲ್ಲಿ ನ.ಭದ್ರಯ್ಯನವರ ಕುರಿತ ಡಾ. ಎಚ್.ಆರ್. ತಿಮ್ಮೇಗೌಡರು ಬರೆದ ಲೇಖನ ಓದಿದ ಪ್ರೊ. ಸಿ.ಪಿ.ಕೆ ಅವರು ನ.ಭದ್ರಯ್ಯನವರು ತಮಗೆ ಮಾಡಿದ ಸಹಾಯವನ್ನು ಸ್ಮರಿಸಿದರು.

ವೇದಿಕೆಯಲ್ಲಿ ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಡಾ. ಎಸ್.ಆರ್.ರಮೇಶ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಮಂದಾರ ವಾರ್ಷಿಕ ಸಂಚಿಕೆಯ ಸಂಪಾದಕರಾದ ವೀಣಾ .ಎಂ ಅವರು ಉಪಸ್ಥಿತರಿದ್ದರು.

ಥಟ್ ಅಂತ ಉತ್ತರಿಸಿ ವಚನ ಸಾಹಿತ್ಯ ರಸಪ್ರಶ್ನೆ ವಿಜೇತರು



ಮೈಸೂರು, ಜೂ. 18– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮಂಗಳವಾರ ರಾತ್ರಿ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 55ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭದ್ರಾವತಿಯ ಗಂಗಾ ಕುಬಸದ್ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇತಿಹಾಸ ಅರಿಯದವರಿಂದ ಟಿಪ್ಪು ಸುಲ್ತಾನ್ ಹೆಸರಿಗೆ ಮಸಿ

ಸರ್ಖಾಜಿ ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಬೇಸರ



ಮೈಸೂರು, ಜೂ.18– ಇತಿಹಾಸ ಅರಿಯದವರು ಟಿಪ್ಪು ಸುಲ್ತಾನ್ ಹೆಸರಿಗೆ ಮಸಿ ಬಳಿಯುತ್ತಿದ್ದಾರೆ ಎಂದು ಮುಸ್ಲಿಂ ಧರ್ಮಗುರು ಸರ್ಖಾಜಿ ಹಜರತ್ ಮೌಲಾನಾ ಮೊಹಮ್ಮದ್ ಉಸ್ಮಾನ್ ಷರೀಫ್ ಬೇಸರ ವ್ಯಕ್ತಪಡಿಸಿದರು.

ಹಜ್ರತ್ ಟಿಪ್ಪು ಸುಲ್ತಾನ್ ಷಹೀದ್ ಸಂಸ್ಥೆ ಹಾಗೂ ಉರುಸ್ ಸಮಿತಿ ವತಿಯಿಂದ ನಗರದ ಅಶೋಕ ರಸ್ತೆಯ ಮಿಲಾದ್ ಪಾರ್ಕ್‌ನಲ್ಲಿ ಭಾನುವಾರ ಆಯೋಜಿಸಿದ್ದ ಟಿಪ್ಪು ಸುಲ್ತಾನ್ ಷಹೀದ್ 231ನೇ ವಾರ್ಷಿಕ ಗಂಧದ ಉರುಸ್ ಷರೀಫ್ ಆಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಟಿಪ್ಪು ಸುಲ್ತಾನ್ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದಾರೆ. ದೇಶ ಹಾಗೂ ಕರ್ನಾಟಕದ ಕೀರ್ತಿ ಹೆಚ್ಚಿಸಿದ್ದಾರೆ. ಬ್ರಿಟಿಷರ ಜೊತೆ ಶಾಮೀಲಾಗಿ ಅವರ ಗುಲಾಮರಂತೆ ಬದುಕಲಿಲ್ಲ. ಹೊಂದಾಣಿಕೆ ಮಾಡಿಕೊಂಡಿದ್ದರೆ ಯಾವ ಅಡ್ಡಿಯಿಲ್ಲದೆ ಸುದೀರ್ಘ ಕಾಲ ಆಡಳಿತ ನಡೆಸಬಹುದಿತ್ತು. ಆದರೆ ಗುಲಾಮನಾಗಿ ನೂರು ವರ್ಷದ ಬದುಕುವ ಬದಲು ಅರಸನಾಗಿ ಒಂದು ದಿನ ಬಾಳಿದರೆ ಸಾಕು ಎನ್ನುವ ಛಲ ಅವರಲ್ಲಿತ್ತು. ಹಾಗಾಗಿ ಅವರು ಹೊಂದಾಣಿಕೆ ಒಪ್ಪಲಿಲ್ಲ. ಇತಿಹಾಸ ತಿಳಿಯದವರು ಟಿಪ್ಪು ಬಗ್ಗೆ ಹಗುರವಾಗಿ ಮಾತನಾಡುತ್ತಾರೆ ಎಂದರು.

ಬಸವಧ್ಯಾನ ಕೇಂದ್ರದ ಶ್ರೀ ಬಸವಲಿಂಗ ಸ್ವಾಮೀಜಿ ಮಾತನಾಡಿ, ದಲಿತರು ಹಾಗೂ ಹಿಂದುಳಿದ ವರ್ಗದವರ ಶೋಷಣೆ ನಡೆದುಬಂದಿದೆ. ಕೆಲವರು ನೂರಾರು ಎಕರೆ ಭೂಮಿ ಹೊಂದಿದ್ದರೆ, ಕೆಲವರಿಗೆ ಭೂಮಿಯೇ ಇಲ್ಲ. ಆದರೆ ಟಿಪ್ಪು ಸುಲ್ತಾನ್ ನೊಂದವರಿಗೆ ಭೂಮಿ ಹಂಚಿಕೆ ಮಾಡಿ, ಅವರ ಜೀವನ ಸುಧಾರಣೆಗೆ ಶ್ರಮಿಸಿದ್ದರು. ಎಲ್ಲರ ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿ ಬಯಸಿ, ಆ ನಿಟ್ಟಿನಲ್ಲಿ ಕೆಲಸ ಮಾಡಿದ್ದರು. ಹಾಗಾಗಿ ಟಿಪ್ಪು ಅವರನ್ನು ಹೊರತುಪಡಿಸಿದರೆ ನಾಡಿನ ಇತಿಹಾಸ ಅಪೂರ್ಣವಾಗುತ್ತದೆ. ಟಿಪ್ಪು ಅನ್ಯ ಧರ್ಮ ಸಹಿಷ್ಣುವಾಗಿದ್ದರಿಂದಲೇ ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನ, ಶೃಂಗೇರಿಯ ಶಾರದಾಂಬೆ ದೇವಸ್ಥಾನಕ್ಕೆ ಭೂಮಿ ನೀಡಿ, ನೆರವಾದರು. ಸಾರ್ವಜನಿಕರ ಅನುಕೂಲಕ್ಕಾಗಿ ಅನೇಕ ಕೆರೆಕಟ್ಟೆ ನಿರ್ಮಿಸಿದರು. ಬಡವರಿಗೆ ಸೂರು ಕಲ್ಪಿಸಿದರು. ಸಕಲೇಶಪುರದಲ್ಲಿ ಕೋಟೆ ಕಟ್ಟಿಸಿದರು. ಟೀಕಿಸುವ ಮೊದಲು ಇಂತಹ ಕುರುಹುಗಳು, ಕೊಡುಗೆಗಳನ್ನು ಮನಗಾಣಬೇಕು. ಭಾರತದ ಸುಪುತ್ರ ಟಿಪ್ಪುವಿನ ಹೆಸರನ್ನು ಮಕ್ಕಳಿಗಿಡಬೇಕು. ಅವರನ್ನು ಮರೆತರೆ ತಮ್ಮನ್ನೇ ತಾವು ಮರೆತಂತೆ ಎಂದು ಅಭಿಪ್ರಾಯಿಸಿದರು.

ಶಾಸಕ ತನ್ವೀರ್ ಸೇಠ್ ಅವರು ಟಿಪ್ಪು ದಾರಿಯಲ್ಲಿ ಸಾಗುವುದರೊಂದಿಗೆ ಅನೇಕ ಅಭಿವೃದ್ಧಿಗಳನ್ನು ಮಾಡಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡದಿರುವುದು ಬೇಸರ ತರಿಸಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಶಾಸಕ ತನ್ವೀರ್ ಸೇಠ್ ಅವರಿಗೆ 'ಮೈಸೂರು ಹುಲಿ' ಬಿರುದು ನೀಡಲಾಯಿತು. ಸಂಸ್ಥೆಯ ಅಧ್ಯಕ್ಷ ಎಂ.ಎಸ್. ಮುಖರ್ರಮ್, ಕಾರ್ಯದರ್ಶಿ ಅಫ್ರೋಜ್ ಪಾಷ ಮತ್ತಿತರರು ಉಪಸ್ಥಿತರಿದ್ದರು.

ಬಳಿಕ ಶಾಸಕ ತನ್ವೀರ್ ಸೇಠ್ ಉರುಸ್ ಮೆರವಣಿಗೆಗೆ ಚಾಲನೆ ನೀಡಿದರು. ಮಿಲಾದ್ ಬಾಗ್ ಉದ್ಯಾನದಿಂದ ಹೂವುಗಳಿಂದ ಅಲಂಕೃತಗೊಂಡಿದ್ದ ಗಂಧವನ್ನು ರಸ್ತೆವರೆಗೆ ಹೊತ್ತು ತಂದ ಅವರು, ನಂತರ ತೆರೆದ ವಾಹನದಲ್ಲಿ ಬೆಂಬಲಿಗರು ಹಾಗೂ ಮುಖಂಡರೊಂದಿಗೆ ಹೊತ್ತುಕೊಂಡು ಕುಳಿತು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣಕ್ಕೆ ಮೆರವಣಿಗೆಯೊಂದಿಗೆ ತೆರಳಿದರು.



ಆರ್ಟ್ ಆಫ್ ಲಿವಿಂಗ್‌ನಿಂದ ಗುರು ಪೂರ್ಣಿಮಾ ವಿಶೇಷ ಕಾರ್ಯಾಗಾರ

ಮೈಸೂರು, ಜೂ.18– ಆರ್ಟ್ ಆಫ್ ಲಿವಿಂಗ್ ವತಿಯಿಂದ ಮೈಸೂರು–ಹುಣಸೂರು ರಸ್ತೆ ಹಿನಕಲ್‌ನಲ್ಲಿರುವ ದಿ ರೂಸ್ಟ್ ಹೋಟೆಲ್ ಸಭಾಂಗಣದಲ್ಲಿ ಜೂ.26ರಿಂದ ಜು.1ರವರೆಗೆ ಗುರು ಪೂರ್ಣಿಮಾ ವಿಶೇಷ ಕಾರ್ಯಾಗಾರ ಆಯೋಜಿಸಲಾಗಿದೆ. ನಿತ್ಯ ಬೆಳಗ್ಗೆ 6ರಿಂದ 8.30ರವರೆಗೆ ಕಾರ್ಯಾಗಾರ ನಡೆಯಲಿದ್ದು, ಭಾಗವಹಿಸಲು ಆಸಕ್ತಿಯುಳ್ಳವರು ಮೊ.ಸಂ.9342111970 ಅಥವಾ 9845685892 ಸಂಪರ್ಕಿಸಬಹುದು.

ಆರೋಗ್ಯದಿಂದ ಸಂತೋಷದವರೆಗೆ, ಮನಸ್ಸಿನ ಸ್ಪಷ್ಟತೆಯಿಂದ ವರ್ಧಿತ ಶಕ್ತಿಯ ಮಟ್ಟದವರೆಗೆ, ಅಚಲವಾದ ಆತ್ಮವಿಶ್ವಾಸದಿಂದ ಅಚ್ಚಳಿಯದ ನಗುವಿನವರೆಗೆ ನಿಮ್ಮನ್ನು ಉನ್ನತೀಕರಿಸಲು ಉಸಿರಾಟದ ಅಭ್ಯಾಸಗಳು ಮತ್ತು ಧ್ಯಾನವು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ತಿಳಿದುಕೊಳ್ಳುವುದರ ಜೊತೆಗೆ ವೈಜ್ಞಾನಿಕವಾಗಿ ಸಾಬೀತಾಗಿರುವ ವಿಶ್ವದ ಅತ್ಯಂತ ಶಕ್ತಿಶಾಲಿ ಉಸಿರಾಟದ ತಂತ್ರವನ್ನು ಅನುಭವಿಸಲು ಕಾರ್ಯಾಗಾರದಲ್ಲಿ ಭಾಗಹಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಲಾರಿ ಡಿಕ್ಕಿ: ಸ್ಕೂಟರ್ ಸವಾರ ಸಾವು

ಹಾಸನ, ಜೂ.18– ಲಾರಿ ಡಿಕ್ಕಿ ಹೊಡೆದು ಸ್ಕೂಟರ್‌ನಲ್ಲಿ ಸಾಗುತ್ತಿದ್ದ ವಿದ್ಯಾರ್ಥಿ ಸಾವನ್ನಪ್ಪಿದ್ದು, ಆತನ ಇಬ್ಬರು ಸ್ನೇಹಿತರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಹಾಸನದ ಸಂತೇಪೇಟೆ ವೃತ್ತದಲ್ಲಿ ಸಂಭವಿಸಿದೆ.

ಹಾಸನ ತಾಲೂಕಿನ ಅಭಿಲಾಷ್(21) ಅಪಘಾತದಲ್ಲಿ ಸಾವನ್ನಪ್ಪಿದ ವಿದ್ಯಾರ್ಥಿ. ಜೊತೆಯಲ್ಲಿದ್ದ ದೊಡ್ಡಪುರದ ರಘು ಎಂಬಾತನ ಕಾಲು ತುಂಡಾಗಿದ್ದು, ವರುಣ್ ತಲೆಗೆ ಗಂಭೀರ ಗಾಯವಾಗಿದೆ. ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪದವಿ ವಿದ್ಯಾರ್ಥಿಗಳಾದ ಈ ಮೂವರು, ಹೋಂಡಾ ಆಕ್ಟೀವಾ ಸ್ಕೂಟರ್‌ನಲ್ಲಿ ಸಕಲೇಶಪುರಕ್ಕೆ ಪ್ರವಾಸ ತೆರಳುತ್ತಿದ್ದಾಗ ಸಂತೇಪೇಟೆ ವೃತ್ತದಲ್ಲಿ ಈ ಅನಾಹುತ ಸಂಭವಿಸಿದೆ. ಅತೀ ವೇಗವೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ತಿಳಿಸಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಕ್ಕಿ ನೀಡದ ಕೇಂದ್ರದ ಧೋರಣೆ ಖಂಡಿಸಿ

ರಾಜ್ಯದ ಸಂಸದರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ

ಮಾಜಿ ಸಚಿವ ಬಿ.ಸೋಮಶೇಖರ್ ಒತ್ತಾಯ



ಮಂಡ್ಯ, ಜೂ.18– ಬಡ ಜನರಿಗೆ ವಿತರಿಸುವ ಅಕ್ಕಿ ನೀಡದೆ ರಾಜಕೀಯ ಮಾಡುತ್ತಿರುವ ಕೇಂದ್ರ ಸರ್ಕಾರದ ಧೋರಣೆ ಖಂಡಿಸಿ ರಾಜ್ಯದ ಎಲ್ಲಾ ಸಂಸದರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮಾಜಿ ಸಚಿವ ಬಿ. ಸೋಮಶೇಖರ್ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರ ಪ್ರತಿಯೊಬ್ಬರಿಗೂ ತಲಾ 10 ಕೆಜಿ ಉಚಿತ ಅಕ್ಕಿ ನೀಡುವುದಾಗಿ ತಿಳಿಸಿದ್ದು, ಹೆಚ್ಚುವರಿ ಅಕ್ಕಿಗಾಗಿ ಕೇಂದ್ರ ಆಹಾರ ನಿಗಮಕ್ಕೆ ಪತ್ರ ಮುಖೇನ ಕೇಳಿಕೊಳ್ಳಲಾಗಿತ್ತು. ಪ್ರಾರಂಭದಲ್ಲಿ ಹೆಚ್ಚಿನ ಸಂಗ್ರಹವಿದ್ದು, ಅಕ್ಕಿ ನೀಡುವುದಾಗಿ ಹೇಳಿದ್ದ ಅಲ್ಲಿನ ಅಧಿಕಾರಿಗಳು ನಂತರದ ದಿನಗಳಲ್ಲಿ ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ಕೊಡಲಾಗುವುದಿಲ್ಲ ಎಂದು ತಿಳಿಸುವ ಮೂಲಕ ಬಡವರಿಗೆ ನೀಡುವ ಅಕ್ಕಿಯಲ್ಲಿ ರಾಜಕೀಯ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ 10 ಕೆಜಿ ಅಕ್ಕಿ ನೀಡಿದರೆ ಕಾಂಗ್ರೆಸ್ ಸರ್ಕಾರಕ್ಕೆ ಜನಪ್ರಿಯತೆ ಬರುತ್ತದೆ ಎಂಬ ಕಾರಣಕ್ಕೆ ಅಕ್ಕಿ ನಿರಾಕರಿಸುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಜೂ.20ರಂದು ಮಂಡ್ಯ ನಗರದಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು. ಅಕ್ಕಿಯನ್ನು ಕೇಂದ್ರ ಸರ್ಕಾರ ಉಚಿತವಾಗಿ ನೀಡಬೇಕಿಲ್ಲ ಅದಕ್ಕೆ ತಗುಲುವ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುತ್ತದೆ ಎಂದು ಹೇಳಿದರೂ ಅಕ್ಕಿ ಇಲ್ಲ ಎಂಬ ನಿರ್ಲಕ್ಷ್ಯ ಧೋರಣೆ ತಾಳಿದೆ ಎಂದು ಆರೋಪಿಸಿದರು.

ಈಗಾಗಲೇ ನಮ್ಮ ಮುಖ್ಯಮಂತ್ರಿಗಳು, ಆಹಾರ ಸಚಿವರು ಬೇರೆ ರಾಜ್ಯಗಳಲ್ಲಿ ಅಕ್ಕಿ ಖರೀದಿಗೆ ಮುಂದಾಗಿದ್ದಾರೆ. ರಾಜ್ಯದ ಬಡವರಿಗೆ ಉಚಿತವಾಗಿ 10 ಕೆಜಿ ಅಕ್ಕಿ ನೀಡುತ್ತೇವೆ. 5 ಕೆಜಿ ಅಕ್ಕಿ ನೀಡಿ ಉಳಿದ 5 ಕೆಜಿ ಅಕ್ಕಿಯ ಬದಲು ಹಣ ನೀಡುವಂತೆ ವಿರೋಧಿಗಳು ಹೇಳುತ್ತಿರುವುದು ಹಾಸ್ಯಾಸ್ಪದ. ಆಹಾರ ಭದ್ರತಾ ಕಾಯಿದೆ ಪ್ರಕಾರ ಯಾರೂ ಹಸಿವಿನಿಂದ ನರಳಬಾರದು ಹಾಗೂ 5 ಕೆಜಿ ಅಕ್ಕಿ ಒಂದು ತಿಂಗಳಿಗೆ ಸಾಲುವುದಿಲ್ಲ. ಈ ಹಿನ್ನೆಲೆಯಲ್ಲಿ ಅಕ್ಕಿಯನ್ನೇ ನೀಡಬೇಕು. ಅದರ ಬದಲು ಹಣ ನೀಡುವುದು ಸರಿಯಲ್ಲ. ಮಾರುಕಟ್ಟೆಯಲ್ಲಿ 34 ರೂ.ಗಳಿಗೆ ಉತ್ತಮ ಗುಣಮಟ್ಟದ ಅಕ್ಕಿ ದೊರೆಯುವುದಿಲ್ಲ. 60 ರಿಂದ 170 ರೂ. ನೀಡಿ ಬಡವರು ಅಕ್ಕಿ ಕೊಳ್ಳಬೇಕಾಗಿದೆ. ಇದರಿಂದಾಗಿ ಸಾಧ್ಯ ಬಡವರಿಗೆ ಅಕ್ಕಿಯನ್ನೇ ನೀಡಬೇಕಾಗಿದೆ ಎಂದು ವಿರೋಧಿಗಳಿಗೆ ತಿರುಗೇಟು ನೀಡಿದರು.

ಒಕ್ಕೂಟ ವ್ಯವಸ್ಥೆಯಲ್ಲಿ 9 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಪ್ರಧಾನಿ ಮೋದಿಯವರು ವಿಪಕ್ಷಗಳ ಸರ್ಕಾರವಿರುವ ಕಡೆ ಎಲ್ಲದಕ್ಕೂ ಅಡ್ಡಗಾಲು ಹಾಕುತ್ತಿದ್ದಾರೆ. ಮೋದಿಯವರ ನಿರಂಕುಶ ಪ್ರಭುತ್ವದಿಂದ ಜನ ಹೈರಾಣಾಗಿದ್ದಾರೆ. ಈಗಾಗಲೇ ಜನ ಅವರಿಗೆ ತಕ್ಕ ಪಾಠ ಕಲಿಸಿದ್ದಾರೆ. ಮುಂದಿನ ದಿನಗಳಲ್ಲೂ ಈ ಸರ್ಕಾರವನ್ನು ಮನೆಗೆ ಕಳುಹಿಸುವುದು ನಿಶ್ಚಿತ ಎಂದರು.

ಕಳೆದ 9 ವರ್ಷಗಳಿಂದ ಪಕ್ಷದ ವೇದಿಕೆಯಲ್ಲಿ ಬಿಜೆಪಿ ಕೋಮುವಾದ, ಜನ ವಿರೋಧಿ ನೀತಿಗಳನ್ನು ಖಂಡಿಸುತ್ತಲೇ ಬಂದಿದ್ದೇನೆ. ನಮ್ಮ ಮಾತಿಗೆ ಮನ್ನಣೆ ಸಿಗದಿದ್ದರಿಂದ ಬೇಸತ್ತು ಪಕ್ಷ ಬಿಡಬೇಕಾಯಿತು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಠ್ಯ ಪುಸ್ತಕದಲ್ಲೂ ಧರ್ಮ ಮತ್ತು ಕೇಸರೀಕರಣ ಮಾಡಲು ಹೊರಟಿದ್ದರು. ಅದನ್ನು ಈಗಾಗಲೇ ನಮ್ಮ ಸರ್ಕಾರ ರದ್ದುಪಡಿಸಿ ಹೊಸ ಪಠ್ಯಪುಸ್ತಕ ವಿತರಣೆಗೆ ಕ್ರಮ ಕೈಗೊಂಡಿದೆ. ರೈತರಿಗೆ ಮಾರಕವಾಗಿದ್ದ 3 ಕೃಷಿ ಕಾಯಿದೆಗಳನ್ನು ರದ್ದುಪಡಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಬಿಜೆಪಿ ಸರ್ಕಾರ ಕೈಗೊಂಡಿದ್ದ ಎಲ್ಲ ಜನ ವಿರೋಧಿ ಧೋರಣೆಗಳನ್ನು ವಾಪಸ್ಸು ಪಡೆಯುತ್ತೇವೆ. ಜನರ ಆಡಳಿತ ನೀಡುವುದು ನಮ್ಮ ಉದ್ದೇಶ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿ, ಕೇಂದ್ರ ಸರ್ಕಾರದ ಧೋರಣೆ ಖಂಡಿಸಿ ಮಂಗಳವಾರ ನಗರದ ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಬೆಳಗ್ಗೆ 10.30ಕ್ಕೆ ಪ್ರತಿಭಟನೆ ಹಮ್ಮಿಕೊಂಡಿದ್ದು, ಪಕ್ಷದ ಎಲ್ಲಾ ಕಾರ್ಯಕರ್ತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರತಿಭಟನೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಸುಂಡಹಳ್ಳಿ ಮಂಜುನಾಥ್, ಯುವ ಅಧ್ಯಕ್ಷ ವಿಜಯ ಕುಮಾರ್, ಒಬಿಸಿ ವಿಭಾಗದ ಅಧ್ಯಕ್ಷ ಕೃಷ್ಣ, ನಗರಸಭಾ ಸದಸ್ಯ ನಯೀಂ ಗೋಷ್ಠಿಯಲ್ಲಿದ್ದರು.

ಮಂಡ್ಯ ಜಾನಪದ ಕ್ಷೇತ್ರದ ತವರು: ತಿಮ್ಮರಾಜು



ಮಂಡ್ಯ, ಜೂ.18– ಜಗತ್ತಿನ ಅತ್ಯಂತ ಶ್ರೇಷ್ಠ ಜಾನಪದ ತವರು ಭಾರತ. ಅದರಲ್ಲೂ ವಿಶೇಷವಾಗಿ ಮಂಡ್ಯ ಜಿಲ್ಲೆ ಜಾನಪದ ಕ್ಷೇತ್ರದ ತವರು ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಗಾಯಕ ಡಾ.ಅಪ್ಪಗೆರೆ ತಿಮ್ಮರಾಜು ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಜನಕಲಾರಂಗ ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಜಾನಪದ ಹಾಡುಗಾರ್ತಿ ಬೋರಮ್ಮ ನೆನಪಿನಲ್ಲಿ "ಬೆಳಗಾಗಿ ನಾನೆದ್ದು" ಜಾನಪದ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಸರ್ಕಾರ ಜಾನಪದ ಅಕಾಡೆಮಿ ಜೊತೆಗೆ ಜಾನಪದ ಕಲೆಗಳ ಅಭಿವೃದ್ಧಿ ಅಕಾಡೆಮಿ ಸ್ಥಾಪನೆ ಮೂಲಕ ಜಾನಪದವನ್ನು ಉಳಿಸಿ ಬೆಳೆಸಬೇಕು. ನೋವು, ಹಸಿವು, ಅನಕ್ಷರಸ್ಥರಿಂದ ಹುಟ್ಟಿದ ಜಾನಪದ ಕ್ಷೇತ್ರ ನಶಿಸಿ ಹೋಗುವ ಮುನ್ನ ಜಾಗೃತಿ ವಹಿಸಬೇಕು. ಪ್ರಖ್ಯಾತ ಜಾನಪದ ಕಲಾವಿದರನ್ನು ಸರ್ಕಾರ ಬಳಸಿಕೊಂಡು ಅನುಭವಿಗಳ ಸಲಹೆ ಸಹಕಾರದ ಮೇಲೆ ಕ್ಷೇತ್ರವನ್ನು ಶ್ರೀಮಂತಗೊಳಿಸುವ ದೊಡ್ಡ ಜವಾಬ್ದಾರಿ ಸರ್ಕಾರದ ಮೇಲಿದೆ ಎಂದು ತಿಳಿಸಿದರು.

ರೈತ ನಾಯಕ ಸುನಂದಾ ಜಯರಾಮ್ ಮಾತನಾಡಿ, ಒಡೆದ ಮನಸ್ಸುಗಳನ್ನು ಕಟ್ಟುವ ಹಾಗೂ ಬೆಸೆಯುವಂತಹ ಶಕ್ತಿ ಇರುವುದು ಜಾನಪದ ಕ್ಷೇತ್ರಕ್ಕೆ ಮಾತ್ರ. ಹೋರಾಟ, ಕ್ರಾಂತಿ, ಮಹಿಳಾಪರ ಹೋರಾಟ ಸೇರಿದಂತೆ ನೊಂದವರ ಧ್ವನಿಗಾಗಿ ಸಹಕರಿಸಿ ಹಾಡಿನ ಮೂಲಕ ಶಕ್ತಿ ತುಂಬುವಂತಹ ಕ್ಷೇತ್ರವಾಗಿ ಹೊರಹೊಮ್ಮಿದ್ದು, ನೊಂದವರ ಬರ ಹಾಗೂ ಅಸಹಾಯಕರ ಪರ ನಿಲ್ಲುವಂತಹ ಆರೋಗ್ಯಕರ ಚಿಂತನೆ ಹುಟ್ಟುವುದರ ಹೋರಾಟ ಕ್ಷೇತ್ರಕ್ಕೆ ಶಕ್ತಿ ನೀಡುವ ಸಾಮರ್ಥ್ಯ ಹೊಂದಿದೆ ಎಂದರು. ವೇದಿಕೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾಧ್ಯಕ್ಷ ಡಿ.ಪಿ.ಸ್ವಾಮಿ, ಜನಕಲಾರಂಗ ಅಧ್ಯಕ್ಷ ಹುರಗಲವಾಡಿ ರಾಮಯ್ಯ, ನಿವೃತ್ತ ಪ್ರಾಂಶುಪಾಲ ಪ್ರೊ.ಚಂದ್ರಶೇಖರ್, ಗ್ರಂಥಪಾಲಕ ಕೂಡಲಕುಪ್ಪೆ ಸೋಮಶೇಖರ್ ಇತರರಿದ್ದರು.

ರೈತರು ಸಕಾಲಕ್ಕೆ ಸಾಲ ಮರುಪಾವತಿಸಲು ಮನವಿ



ಕೆ.ಆರ್.ಪೇಟೆ, ಜೂ.18– ಸಹಕಾರಿ ಕ್ಷೇತ್ರದಲ್ಲಿ ರೈತರಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುತ್ತಿರುವ ಪಿಎಲ್‌ಡಿ ಬ್ಯಾಂಕ್‌ನಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸುವ ಮೂಲಕ ಬ್ಯಾಂಕ್ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ರಾಜ್ಯ ನಿರ್ದೇಶಕ ತಿಮ್ಮರಾಯಿಗೌಡ ರೈತರಲ್ಲಿ ಮನವಿ ಮಾಡಿದರು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್‌ನಲ್ಲಿ ನೂತನ ಅಧ್ಯಕ್ಷೆ ಜಯಶೀಲ ರಾಮೇಗೌಡ ಮತ್ತು ಆಡಳಿತ ಮಂಡಳಿಯ ನಿರ್ದೇಶಕರು ನೀಡಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ರೈತರಿಗೆ ಸುಲಭವಾಗಿ ಸಕಾಲಕ್ಕೆ ಸಾಲ ನೀಡುವ ವ್ಯವಸ್ಥೆ ಇರುವುದು ನಮ್ಮ ಪಿಎಲ್‌ಡಿ ಬ್ಯಾಂಕ್‌ನಲ್ಲಿ ಮಾತ್ರ, ಹಾಗಾಗಿ ರೈತರು ಬ್ಯಾಂಕ್‌ನ ಷೇರುದಾರರಾಗುವ ಮೂಲಕ ಶೇ.3ರಷ್ಟು ಬಡ್ಡಿ ದರದ ಸಾಲವನ್ನು ಪಡೆದುಕೊಳ್ಳಬೇಕು. ಸರ್ಕಾರವು ರೈತರ ಪರವಾಗಿ ಇಂತಿಷ್ಟು ಬಡ್ಡಿ ಪಾವತಿ ಮಾಡುತ್ತಿದೆ. ಇದರ ಪ್ರಯೋಜನ ನಿಮಗೆ ಸಿಗಬೇಕಾದರೆ ರೈತರು ಸಕಾಲಕ್ಕೆ ಸಾಲ ಮರುಪಾವತಿಸಿ ಮತ್ತೆ ಸಾಲ ಪಡೆದುಕೊಳ್ಳಬೇಕು. ಪಡೆದ ಸಾಲವನ್ನು ಬೇರೆ ಯೋಜನೆಗಳಿಗೆ ಬಳಕೆ ಮಾಡದೇ ಪಡೆದುಕೊಂಡ ಉದ್ದೇಶಗಳಿಗೆ ಮಾತ್ರ ಸಾಲ ಸದ್ಬಳಕೆ ಮಾಡಬೇಕು ಎಂದು ಮನವಿ ಮಾಡಿದರು.

ಬ್ಯಾಂಕ್ ನಿರ್ದೇಶಕರು ಸಕಾಲಕ್ಕೆ ಮರುಪಾವತಿಸುವ ರೈತರಿಗೆ ಸಾಲ ಕೊಡಿಸಬೇಕು. ಸಾಲ ಪಡೆದು ಬ್ಯಾಂಕ್ ಕಡೆ ತಿರುಗಿ ನೋಡದ ರೈತರಿಗೆ ಸಾಲ ಕೊಡಿಸಬಾರದು. ಸಾಲ ಕೊಡಿಸಿದ ನಿರ್ದೇಶಕರು ಜವಾಬ್ದಾರಿ ತೆಗೆದುಕೊಂಡು ಸಾಲ ಮರುಪಾವತಿಸಲು ಕಾಳಜಿ ವಹಿಸುವ ಮೂಲಕ ಬ್ಯಾಂಕ್ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಬ್ಯಾಂಕ್ ಆಡಳಿತ ಮಂಡಳಿಯ ಎಲ್ಲಾ ಸದಸ್ಯರು ಒಗ್ಗಟ್ಟಿನಿಂದ ಕೆಲಸ ಮಾಡಿ ಬ್ಯಾಂಕಿಗೆ ಬಸ್ ನಿಲ್ದಾಣದ ಬಳಿ ಇರುವ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡಿ ಬ್ಯಾಂಕ್‌ಗೆ ಆದಾಯ ಬರುವಂತೆ ನೆಲ ಅಂತಸ್ತಿನಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ, ಮೊದಲ ಮಹಡಿಯಲ್ಲಿ ಬ್ಯಾಂಕ್‌ನ ಶಾಖೆ ಆರಂಭಿಸಬೇಕು ಎಂದು ಆಡಳಿತ ಮಂಡಳಿ ಸದಸ್ಯರಿಗೆ ಕಿವಿ ಮಾತು ಹೇಳಿದರು.

ಇದೇ ವೇಳೆ ನಿರ್ದೇಶಕ ಪುಟ್ಟಸ್ವಾಮೀಗೌಡ, ಅಧ್ಯಕ್ಷೆ ಜಯಶೀಲ, ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ರಾಜ್ಯ ನಿರ್ದೇಶಕ ತಿಮ್ಮರಾಯಿಗೌಡ ಅವರನ್ನು ಬ್ಯಾಂಕ್ ಪರವಾಗಿ ಸನ್ಮಾನಿಸಲಾಯಿತು. ಸಮಾರಂಭದಲ್ಲಿ ಬ್ಯಾಂಕ್ ಉಪಾಧ್ಯಕ್ಷ ಧನಂಜಯ, ಮಾಜಿ ಅಧ್ಯಕ್ಷ ಕೆ.ಎಸ್.ಬಸವೇಗೌಡ, ನಿರ್ದೇಶಕರಾದ ಕಮಲಮ್ಮ, ಚಂದ್ರೇಗೌಡ, ರಾಮಕೃಷ್ಣೇಗೌಡ, ನಾಗರಾಜು, ರಮೇಶ್, ಸುರೇಶ್, ರಾಮೇಗೌಡ, ಶ್ರೀಧರ್, ಪಿ.ನಾಗೇಶ್, ಬ್ಯಾಂಕ್ ವ್ಯವಸ್ಥಾಪಕ ರವಿಕುಮಾರ್ ಮತ್ತಿತರರಿದ್ದರು.

ನಾಗಮಂಗಲ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಮೀಸಲು ಪ್ರಕಟ



ನಾಗಮಂಗಲ, ಜೂ.18– ಪಟ್ಟಣದ ಮಂಡ್ಯ ರಸ್ತೆಯಲ್ಲಿರುವ ಶ್ರೀವೆಂಕಟೇಶ್ವರ ಚಿತ್ರಮಂದಿರದಲ್ಲಿ ತಾಲೂಕಿನ 27 ಗ್ರಾಪಂಗಳ 2ನೇ ಅವಧಿಯ ಬಾಕಿ 30 ತಿಂಗಳ ಅಧಿಕಾರವಧಿಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಮೀಸಲು ಪ್ರಕ್ರಿಯೆ ಯಶಸ್ವಿಯಾಗಿ ನಡೆಯಿತು.

ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಪಾಂಡವಪುರ ಉಪವಿಭಾಗಾಧಿಕಾರಿ ಎಲ್.ನಂದೀಶ್ ಹಾಗೂ ನಾಗಮಂಗಲ ತಹಸೀಲ್ದಾರ್ ನಯೀಂ ಉನ್ನಿಸಾ ನೇತೃತ್ವದಲ್ಲಿ ತಾಲೂಕಿನ ಎಲ್ಲಾ ಗ್ರಾಪಂ ಸದಸ್ಯರ ಸಮ್ಮುಖದಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಗದಿಪಡಿಸಲಾಯಿತು.

ಗ್ರಾಪಂ ಮೀಸಲಾತಿ ವಿವರ: ಅಂಚೆ ಚಿಟ್ಟನಹಳ್ಳಿ ಅಧ್ಯಕ್ಷ (ಪ.ಜಾತಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಆರಣಿ ಅಧ್ಯಕ್ಷ (ಬಿಸಿಎಂ (ಎ) ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಭೀಮನಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ.ಜಾತಿ), ಬಿಂಡಿಗನವಿಲೆ ಅಧ್ಯಕ್ಷ (ಪ.ಜಾತಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಬೋಗಾದಿ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಬಿಸಿಎಂ (ಎ), ಬ್ರಹ್ಮದೇವರಹಳ್ಳಿ ಅಧ್ಯಕ್ಷ (ಪ.ಜಾತಿ) ಉಪಾಧ್ಯಕ್ಷ (ಬಿಸಿಎಂ (ಬಿ), ಚಿಣ್ಯ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಬಿಸಿಎಂ(ಎ), ಚುಂಚನಹಳ್ಳಿ ಅಧ್ಯಕ್ಷ (ಬಿಸಿಎಂ(ಬಿ) ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ದೇವಲಾಪುರ ಅಧ್ಯಕ್ಷ (ಬಿಸಿಎಂ(ಎ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ದೇವರ ಮಲ್ಲನಾಯಕನಹಳ್ಳಿ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ದೇವಿಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಬಿಸಿಎಂ (ಎ) ಮಹಿಳೆ), ದೊಡ್ಡಬಾಲ ಅಧ್ಯಕ್ಷ (ಬಿಸಿಎಂ (ಎ)ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಗೊಂಡೇನಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಬಿಸಿಎಂ (ಎ) ಮಹಿಳೆ), ಹರದನಹಳ್ಳಿ ಅಧ್ಯಕ್ಷ (ಬಿಸಿಎಂ(ಎ) ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಹೊಣಕೆರೆ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಹೊನ್ನಾವರ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಬಿಸಿಎಂ (ಎ)ಮಹಿಳೆ), ಹುಲಿಕೆರೆ ಅಧ್ಯಕ್ಷ (ಬಿಸಿಎಂ (ಬಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಕದಬಹಳ್ಳಿ ಅಧ್ಯಕ್ಷ (ಬಿಸಿಎಂ (ಎ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಕಾಳಿಂಗನಹಳ್ಳಿ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ ಬಿಸಿಎಂ (ಎ), ಕಾಂತಪುರ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಕರಡಹಳ್ಳಿ ಅಧ್ಯಕ್ಷ (ಬಿಸಿಎಂ(ಎ), ಉಪಾಧ್ಯಕ್ಷ (ಪ.ಜಾತಿ ಮಹಿಳೆ), ಲಾಳನ ಕೆರೆ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ.ಜಾತಿ ಮಹಿಳೆ), ಮಣ್ಣಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಬಿಸಿಎಂ (ಬಿ) ಮಹಿಳೆ, ಮಾಯಿಗೋನಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಬಿಸಿಎಂ (ಎ) ಮಹಿಳೆ), ನಲ್ಲಿಗೆರೆ ಅಧ್ಯಕ್ಷ (ಬಿಸಿಎಂ (ಎ) ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಪಾಲಗ್ರಹಾರ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ತುಪ್ಪದಮಡು ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ) ವರ್ಗಗಳಿಗೆ ಮೀಸಲಾತಿ ನಿಗದಿಪಡಿಸಲಾಯಿತು.

ಮೀಸಲಾತಿ ಪ್ರಕ್ರಿಯೆಯಲ್ಲಿ ಹೆಚ್ಚಿನ ಗ್ರಾಪಂ ನಿಗದಿಯಾಗದ ಹಿನ್ನೆಲೆಯಲ್ಲಿ ಅಂತಹ ಗ್ರಾಪಂಗಳ ಮೀಸಲಾತಿಯನ್ನು ಸದಸ್ಯರ ಸಮ್ಮುಖದಲ್ಲಿ ಚೀಟಿ ಬರೆದು ಖಾಲಿ ಬಾಕ್ಸ್ ಗೆ ಹಾಕಿ ಸದಸ್ಯರಿಂದ ಚೀಟಿ ತೆಗೆಸುವ ಮೂಲಕ ಆಯ್ಕೆ ಮಾಡಲಾಯಿತು.

ಜೂನ್ ತಿಂಗಳ ಪಡಿತರ ಪಡೆಯಲು ಮನವಿ

ಮಂಡ್ಯ, ಜೂ.18– ಜೂನ್ ತಿಂಗಳ ಪಡಿತರ ಆಹಾರಧಾನ್ಯವನ್ನು ಜೂ.27 ರೊಳಗೆ ಪಡೆದುಕೊಳ್ಳುವಂತೆ ಮಂಡ್ಯ ತಾಲೂಕು ತಹಸೀಲ್ದಾರ್ ಸಾರ್ವಜನಿಕರಿಗೆ ತಿಳಿಸಿದ್ದಾರೆ. ಜೂ.28ರಿಂದ ಆಹಾರ ಇಲಾಖೆ ಸರ್ವರ್ ನಿರ್ವಹಣಾ ಕಾರ್ಯ ಕೈಗೊಳ್ಳಲಿದ್ದು, ನಂತರ ನ್ಯಾಯಬೆಲೆ ಅಂಗಡಿಗೆ ಹೋಗುವ ಪಡಿತರ ಚೀಟಿದಾರರಿಗೆ ಪಡಿತರ ವಿತರಿಸಲು ಸಾಧ್ಯವಿಲ್ಲ. ಹಾಗಾಗಿ ಸೂಚಿಸಿದ ಸಮಯದಲ್ಲಿ ಪಡಿತರ ಪಡೆದುಕೊಳ್ಳುವಂತೆ ಪಡಿತರ ಕಾರ್ಡುದಾರರಲ್ಲಿ ಮನವಿ ಮಾಡಿದ್ದಾರೆ.

ಜೂಜಾಟ ನಡೆಯುತ್ತಿದ್ದ ಲಾಡ್ಜ್ ಮೇಲೆ ಸಿಸಿಬಿ ದಾಳಿ

26 ಮಂದಿ ಬಂಧನ, 1.25 ಲಕ್ಷ ರೂ. ವಶ

ಮೈಸೂರು, ಜೂ.18–ಮೈಸೂರು ಹೊರವಲಯದ ಲಾಡ್ಜ್‌ವೊಂದರ ಮೇಲೆ ಭಾನುವಾರ ದಾಳಿ ನಡೆಸಿದ ಸಿಸಿಬಿ ಪೊಲೀಸರು 26 ಜೂಜುಕೋರರನ್ನು ಬಂಧಿಸಿ ಪಣಕ್ಕಿಟ್ಟಿದ್ದ 1.25 ಲಕ್ಷ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಸಿಸಿಬಿ ಎಸಿಪಿ ಸಂದೇಶ್ ಕುಮಾರ್ ಮಾರ್ಗದರ್ಶನದಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಮಲ್ಲೇಶ್, ಸಬ್ ಇನ್ಸ್‌ಪೆಕ್ಟರ್ ರಾಜು, ಪ್ರತಿಭಾ, ಎಎಸ್‌ಐಗಳಾದ ಸತೀಶ್, ರಾಜು, ಸಿಬ್ಬಂದಿಗಳಾದ ಮಂಜುನಾಥ, ಮಹೇಶ್, ಅರುಣ್ ಕುಮಾರ್, ರಾಘವೇಂದ್ರ ಇನ್ನಿತರರು ಬೋಗಾದಿ ರಸ್ತೆಯಲ್ಲಿರುವ ಹರ್ಷ ಬಾರ್ ಜಂಕ್ಷನ್‌ನ ಮೈಸೂರು ರೆಸಿಡೆನ್ಸಿ ಲಾಡ್ಜ್ ಮೇಲೆ ದಾಳಿ ನಡೆಸಿದರು.

ಈ ಲಾಡ್ಜ್‌ನ ಮಾಲೀಕ ಬಸವರಾಜೇಗೌಡ ಎಂಬಾತ ವಾರಾಂತ್ಯ ದಿನಗಳಲ್ಲಿ ಲಾಡ್ಜ್‌ನ ಹಾಲ್‌ವೊಂದರಲ್ಲಿ ಜೂಜಾಟ ನಡೆಸುತ್ತಿದ್ದ ಎಂದು ತಿಳಿಸಿರುವ ಪೊಲೀಸರು, ಜೂಜಾಟದಲ್ಲಿ ತೊಡಗಿದ್ದ 26 ಮಂದಿಯನ್ನು ಬಂಧಿಸಿ 1.25 ಲಕ್ಷ ರೂ. ವಶಪಡಿಸಿಕೊಂಡು ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನಲ್ಲಿ ಜೂಜಾಟ ನಡೆಯುತ್ತಿದ್ದ ಕ್ಲಬ್‌ಗಳಲ್ಲಿ ಪೊಲೀಸರು ಮುಚ್ಚಿಸಿರುವುದರಿಂದ ಇಂತಹ ಲಾಡ್ಜ್‌ಗಳು ಹಾಗೂ ಇನ್ನಿತರ ಜಾಗಗಳಲ್ಲಿ ಜೂಜುಕೋರರು ಅಡ್ಡೆಗಳನ್ನಾಗಿ ಮಾಡಿಕೊಂಡಿದ್ದು, ಜೂಜಾಟದ ವಿರುದ್ಧ ತೀವ್ರ ಕಾರ್ಯಾಚರಣೆ ನಡೆಯುತ್ತಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ಜಗಳ ಬಿಡಿಸಲು ಹೋದ ಪೊಲೀಸ್ ಪೇದೆ ಮೇಲೆ ಮಾರಣಾಂತಿಕ ಹಲ್ಲೆ

ಹಾಸನ, ಜೂ.18– ಗುಂಪೊಂದರ ಹಲ್ಲೆಯಿಂದ ಯುವಕನನ್ನು ತಡೆದು ಜಗಳ ಬಿಡಿಸಲು ಹೋಗಿದ್ದ ಪೊಲೀಸ್ ಪೇದೆಯೊಬ್ಬರ ಮೇಲೆ ದುಷ್ಕರ್ಮಿಗಳ ತಂಡ ಮಾರಕಾಸ್ತ್ರಗಳಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಹಾಸನದಲ್ಲಿ ನಡೆದಿದೆ.

ಹಾಸನ ಜಿಲ್ಲೆಯ ಹೊಳೆನರಸಿಪುರದ ಮಳಲಿ ದೇವಸ್ಥಾನದಲ್ಲಿ ಈ ಘಟನೆ ನಡೆದಿದ್ದು, ಯಸಳೂರು ಪೊಲೀಸ್ ಠಾಣೆಯ ಪೇದೆ, ಕುಂದೂರು ಹೋಬಳಿ ಎಸ್. ಹೊನ್ನೇನಹಳ್ಳಿ ಗ್ರಾಮದ ನಿವಾಸಿ ಶರತ್ ತೀವ್ರ ಹಲ್ಲೆಗೊಳಗಾಗಿದ್ದಾರೆ.

ಮೂಲಗಳ ಪ್ರಕಾರ ಶರತ್ ಅವರು ಜೂ. 15 ರಂದು ಸಾಂದರ್ಭಿಕ ರಜೆ ಪಡೆದು ತಮ್ಮ ಗ್ರಾಮದ ದೀಪಕ್ ಎಂಬುವವರ ಮಗಳ ಹುಟ್ಟುಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಳಲಿ ದೇವಸ್ಥಾನಕ್ಕೆ ಆಗಮಿಸಿದ್ದರು. ದೇವಸ್ಥಾನದ ಬಳಿಯಿರುವ ಕನ್ವೆನ್ಷನ್ ಹಾಲ್ ಎದುರು ಚೇತನ್ ಎಂಬ ಯುವಕನ ಮೇಲೆ ಗ್ರಾಮದ ಯುವಕರ ಗುಂಪೊಂದು ಹಲ್ಲೆ ನಡೆಸುತ್ತಿತ್ತು. ಈ ವೇಳೆ ಜಗಳ ಬಿಡಿಸಲು ಹೋಗಿದ್ದ ಶರತ್ ಅವರ ಮೇಲೆ ಯುವಕರ ಗುಂಪು ಮುಗಿಬಿದ್ದು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದೆ. ಹಲ್ಲೆಯಿಂದ ಶರತ್ ತೀವ್ರ ಗಾಯಗೊಂಡು ಸ್ಥಳದಲ್ಲೇ ಕುಸಿದು ಬೀಳುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಕೋಣೆಯ ಒಳಗಿರುವ ಸಿಸಿಟಿವಿ ದೃಶ್ಯಾವಳಿಗಳಲ್ಲಿ ದುಷ್ಕರ್ಮಿಗಳ ತಂಡ ದೈಹಿಕವಾಗಿ ಹಲ್ಲೆ ನಡೆಸುವುದು, ಶರತ್ ಅವರತ್ತ ಕಲ್ಲುಗಳನ್ನು ಎಸೆಯುವುದು, ಮಚ್ಚಿನಿಂದ ಬೀಸುವುದು, ಪ್ಲಾಸ್ಟಿಕ್ ಕುರ್ಚಿಯಿಂದ ಹೊಡೆಯುತ್ತಿರುವುದು ಕಂಡುಬಂದಿದೆ. ಶರತ್ ನೆಲಕ್ಕೆ ಬಿದ್ದ ನಂತರ ಅವರ ದೇಹದ ಮೇಲೆ ಹತ್ತಿ ಕ್ರೂರವಾಗಿ ಕುಣಿಯಲಾರಂಭಿಸಿದ್ದಾರೆ.

ತೀವ್ರವಾಗಿ ಗಾಯಗೊಂಡಿರುವ ಪೊಲೀಸ್ ಸಿಬ್ಬಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮಿಥುನ್, ಲೋಹಿತ್, ನಟರಾಜು ಹಾಗೂ ಇತರರ ಗುಂಪು ಹಲ್ಲೆ ನಡೆಸಿದ್ದು ಹೊಳೆನರಸಿಪುರ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನುಬಂಧಿಸಿದ್ದಾರೆ. ತೀವ್ರ ಗಾಯಗೊಂಡಿರುವ ಶರತ್ ಅವರು ಹಾಸನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಚನ ಸಾಹಿತ್ಯಕ್ಕೆ ಲಕ್ಷಾಂತರ ಹೃದಯಗಳನ್ನು ಗೆಲ್ಲುವ ಶಕ್ತಿ ಇದೆ

ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ



ಮೈಸೂರು, ಜೂ. 18– ವಚನ ಸಾಹಿತ್ಯಕ್ಕೆ ಲಕ್ಷಾಂತರ ಹೃದಯಗಳನ್ನು ಗೆಲ್ಲುವ ಶಕ್ತಿ ಇದೆ ಎಂದು ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕ ವಚನ ಕುಮಾರಸ್ವಾಮಿ ಹೇಳಿದರು.

ನಾದಹಂಸಿನಿ ಭಜನಾತಂಡ ಮೈಸೂರಿನ ಜೆ.ಪಿ.ನಗರದ ಪುಟ್ಟರಾಜ ಗವಾಯಿ ಯೋಗಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಬಸವಜಯಂತಿ ಮತ್ತು ಅಕ್ಕಮಹಾದೇವಿ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣನವರ ಜೀವನ ಚರಿತ್ರೆ ವಿಷಯದ ಬಗ್ಗೆ ಉಪನ್ಯಾಸ ನೀಡಿ ಮಾತನಾಡಿದ ಅವರು ನಾವಿರುವ ಸ್ಥಳದಲ್ಲಿಯೇ ಸಂತಸದ ಕ್ಷಣಗಳನ್ನು ಅನುಭವಿಸಲು ವಚನಗಳು ಸಹಾಯಕವಾಗಿವೆ. ನಾವಾಡುವ ಮಾತು ಹೇಗಿರಬೇಕು, ಮನೆಗೆ ಬಂದವರನ್ನು ಉಪಚರಿಸುವ ಬಗೆ, ಸ್ವರ್ಗ ನರಕಗಳ ಕಲ್ಪನೆ, ಹೊಗಳಿಕೆ ತೆಗಳಿಕೆಗೆ ಸ್ಪಂದಿಸುವ ರೀತಿ ಮುಂತಾದವುಗಳ ಬಗ್ಗೆ ಬಸವಣ್ಣನವರು ನೀಡಿರುವ ವಚನ ಸಂವಿಧಾನವನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದೇ ಆದರೆ ನಾವು ವಾಸಿಸುವ ಸ್ಥಳವೇ ದೇವಲೋಕವಾಗುತ್ತದೆ. ವಚನಗಳನ್ನು ಅರಿತಾಗ ನಮ್ಮಲ್ಲಿರುವ ಸಿಟ್ಟು, ಅಹಂ, ಮೋಹ ಮತ್ತು ದ್ವೇಷಗಳು ದೂರವಾಗಿ ಸದ್ವರ್ತನೆಗಳು ಮೈಗೂಡಲು ಸಹಾಯಕವಾಗುತ್ತವೆ. ಬೆಳಗ್ಗೆ ಎದ್ದ ಕೂಡಲೇ ವಚನಗಳನ್ನು ಪಾಲಿಸುತ್ತೇನೆ ಎಂಬ ದೃಢನಿರ್ಧಾರವಿರಬೇಕು.

ಸಂಜೆ ಮಲಗುವಾಗ ವಚನಗಳನ್ನು ಪಾಲಿಸಿದ್ದೇನೆ ಎಂಬ ಆತ್ಮತೃಪ್ತಿ ಇರಬೇಕು ಎಂದರು. ನಂತರ ಶರಣು ವಿಶ್ವವಚನ ಫೌಂಡೇಷನ್ ಸಂಸ್ಥಾಪಕಿ ರೂಪಾ ಕುಮಾರಸ್ವಾಮಿ ಜಗನ್ಮಾತೆ ಅಕ್ಕಮಹಾದೇವಿಯವರ ಬಗ್ಗೆ ಉಪನ್ಯಾಸ ನೀಡಿ ಮಾತನಾಡಿ ಮಹಾದೇವಿಯಾಗಿದ್ದವರನ್ನು ಅಲ್ಲಮಪ್ರಭುಗಳು ಮತ್ತು ಅನುಭವ ಮಂಟಪದಲ್ಲಿದ್ದ ಎಲ್ಲಾ ಶರಣರು ಅಕ್ಕ ಎಂದು ಸಂಭೋದಿಸಿ ಅಕ್ಕಮಹಾದೇವಿ ಎಂದು ಕರೆದರು.

ದೃಢ ವಿಶ್ವಾಸ ಮತ್ತು ಅಚಲ ನಿರ್ಧಾರಗಳನ್ನು ಮೈಗೂಡಿಸಿಕೊಂಡಿದ್ದರ ಫಲವಾಗಿ ಅಕ್ಕ ವಿಶ್ವ ಸ್ತ್ರೀ ಕುಲದ ಜ್ಯೋತಿಯಾದರು. ಅಕ್ಕನ ವಚನಗಳನ್ನು ಅಧ್ಯಯನ ಮಾಡಿ ಅದರಂತೆ ನಡೆದದ್ದೇ ಆದರೆ ವಿಶ್ವದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರೇ ಇರುವುದಿಲ್ಲ ಎಂದರು. ನಂತರ ವಚನ ಸಾಹಿತ್ಯದ ಬಗ್ಗೆ ರಸಪ್ರಶ್ನೆ ಕಾರ್ಯಕ್ರಮ ನಡೆಸಲಾಯಿತು, ಭಾಗವಹಿಸಿದ್ದ ಎಲ್ಲರೂ ಸಾಮೂಹಿಕವಾಗಿ ಶರಣರ ವಚನ ಗಾಯನ ಮಾಡಿದರು.

ಕಾರ್ಯಕ್ರಮದಲ್ಲಿ ನಾದಹಂಸಿನಿ ಭಜನಾ ಸಂಘದ ಅಧ್ಯಕ್ಷೆ ಯು. ಎಂ. ಉಮಾ ಮಹಾದೇವಸ್ವಾಮಿ, ಉಪಾಧ್ಯಕ್ಷೆ ಮಂಜುಳ ಶಿವಕುಮಾರಸ್ವಾಮಿ, ಕಾರ್ಯದರ್ಶಿ ಮೈನಾವತಿ ಬಸವಣ್ಣ, ನಿರ್ದೇಶಕರುಗಳಾದ ಬ್ರಮರಾಂಭ ಶೀಲಾ ದೇವಿ, ವಸಂತ, ವಿಜಯಾಂಬಾ, ಸುಜಯಾಂಬಾ, ಸುಶೀಲಾ, ನಂದಿನಿ, ಶೋಭ, ಮಂಜುಳ ಶಶಿ, ಶಿಲ್ಪಾ, ಎಸ್. ಮಂಜುಳ ಮತ್ತು ಸದಸ್ಯರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಜೂ.18– 2022–23ನೇ ಸಾಲಿನ ವಲಸೆ ಅಥವಾ ಅರೆ ವಲಸೆ ಕುರಿ, ಮೇಕೆ ಸಾಕಾಣಿಕೆದಾರರಿಗೆ ಸಂಚಾರಿ ಟೆಂಟ್ ಮತ್ತು ಇತರೆ ಪರಿಕರಗಳನ್ನು ಉಚಿತವಾಗಿ ವಿತರಿಸಲು ಅರ್ಜಿ ಆಹ್ವಾನಿಸಲಾಗಿದ್ದು, ಜಿಲ್ಲೆಯ ನಿಗಮದಲ್ಲಿ ನೋಂದಾಯಿತ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವ ಹಾಗೂ ಕುರಿಗಾರರ ಪಾಸ್ ಪುಸ್ತಕ ಹೊಂದಿರುವ, ಆಧಾರ್ ಕಾರ್ಡ್, ಗುರುತಿನ ಚೀಟಿ ಹೊಂದಿರುವ ಕನಿಷ್ಠ 20 ಕುರಿ, ಮೇಕೆಗಳನ್ನು ಹೊಂದಿರುವ ವಲಸೆ ಅಥವಾ ಅರೆ ವಲಸೆಗಾರರು ಅರ್ಜಿ ಸಲ್ಲಿಸಬಹುದು.

ಆಸಕ್ತ ಕುರಿಗಾರ ಸದಸ್ಯರು ತಮ್ಮ ವ್ಯಾಪ್ತಿಗೆ ಬರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿಯವರಿಂದ ನಿಗದಿತ ಅರ್ಜಿಯನ್ನು ಪಡೆದು ಭರ್ತಿ ಮಾಡಿದ ಅರ್ಜಿ ಮತ್ತು ಅಗತ್ಯ ದಾಖಲೆಗಳೊಂದಿಗೆ ಸಂಘದ ಕಾರ್ಯದರ್ಶಿಯವರ ಮುಖಾಂತರ ಜೂ.30ರೊಳಗೆ ಅರ್ಜಿಯನ್ನು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಚಾಮುಂಡಿಪುರಂನಲ್ಲಿರುವ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರನ್ನು ಅಥವಾ ಮೊ.ಸಂ. 9845623137 ಅನ್ನು ಸಂಪರ್ಕಿಸಬಹುದು.

ವಿಶ್ವದ ಅತಿದೊಡ್ಡ ಪ್ರಕಾಶನ ಸಂಸ್ಥೆ ಪಾಲಾದ 2021ನೇ ಸಾಲಿನ ಪ್ರತಿಷ್ಠಿತ ಗಾಂಧಿ ಶಾಂತಿ ಪ್ರಶಸ್ತಿ

ನವದೆಹಲಿ, ಜೂ.18– 2021ನೇ ಸಾಲಿನ ಪ್ರತಿಷ್ಠಿತ ಗಾಂಧಿ ಶಾಂತಿ ಪ್ರಶಸ್ತಿ (Gandhi Peace Prize for the Year 2021) ಭಾನುವಾರ ಪ್ರಕಟವಾಗಿದೆ. ಉತ್ತರಪ್ರದೇಶದ ಗೋರಖ್‌ಪುರನ ಗೀತಾ ಪ್ರೆಸ್ ಸಂಸ್ಥೆಗೆ ಈ ಬಾರಿ ಪ್ರಶಸ್ತಿ ದೊರೆತಿದೆ. ಈ ಕುರಿತಾಗಿ ಕೇಂದ್ರ ಸಂಸ್ಕೃತಿ ಇಲಾಖೆ ಅಧಿಕಾರಿಗಳಿಂದ ಮಾಹಿತಿ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ತೀರ್ಪುಗಾರರ ತಂಡ 2023 ರ ಜೂನ್ 18 ರಂದು ಅಹಿಂಸಾತ್ಮಕ ಮತ್ತು ಗಾಂಧಿವಾದಿ ವಿಧಾನಗಳ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪರಿವರ್ತನೆಗೆ ನೀಡಿದ ಅತ್ಯುತ್ತಮ ಕೊಡುಗೆಯನ್ನು ಗುರುತಿಸಿ ಗೋರಖ್ಪುರದ ಗೀತಾ ಪ್ರೆಸ್ ಅನ್ನು 2021ರ ಗಾಂಧಿ ಶಾಂತಿ ಪ್ರಶಸ್ತಿಗೆ ಆಯ್ಕೆ ಮಾಡಲು ಸರ್ವಾನುಮತದಿಂದ ನಿರ್ಧರಿಸಿದೆ. ಗಾಂಧಿ ಶಾಂತಿ ಪ್ರಶಸ್ತಿಯೂ 1 ಕೋಟಿ ರೂ. ನಗದು, ಪ್ರಶಸ್ತಿ ಪತ್ರ, ಫಲಕ ಮತ್ತು ಸುಂದರ ಸಾಂಪ್ರದಾಯಿಕ ಕರಕುಶಲ ವಸ್ತುವನ್ನು ಒಳಗೊಂಡಿದೆ.

ವಿಶ್ವದ ಅತಿದೊಡ್ಡ ಪ್ರಕಾಶನ ಸಂಸ್ಥೆ: 1923 ರಲ್ಲಿ ಸ್ಥಾಪನೆಯಾದ ಗೀತಾ ಪ್ರೆಸ್ ವಿಶ್ವದ ಅತಿದೊಡ್ಡ ಪ್ರಕಾಶನ ಸಂಸ್ಥೆಗಳಲ್ಲಿ ಒಂದು. 16.21 ಕೋಟಿ ಶ್ರೀಮದ್ ಭಗವದ್ಗೀತೆ ಸೇರಿದಂತೆ 14 ಭಾಷೆಗಳಲ್ಲಿ 41.7 ಕೋಟಿ ಪುಸ್ತಕಗಳನ್ನು ಪ್ರಕಟಿಸಿದೆ. ಸಂಸ್ಥೆಯು ಆದಾಯ ಗಳಿಕೆಗಾಗಿ ಎಂದಿಗೂ ಜಾಹೀರಾತನ್ನು ಅವಲಂಬಿಸಿಲ್ಲ. ಗೀತಾ ಪ್ರೆಸ್ ಅದರ ಅಂಗಸಂಸ್ಥೆಗಳೊಂದಿಗೆ, ಸುಧಾರಿತ ಜೀವನ ಮತ್ತು ಎಲ್ಲರ ಯೋಗಕ್ಷೇಮಕ್ಕಾಗಿ ಶ್ರಮಿಸುತ್ತಿದೆ.

ಗೀತಾ ಪ್ರೆಸ್‌ನ ಕೊಡುಗೆ ಸ್ಮರಿಸಿದ ಪ್ರಧಾನಿ ಮೋದಿ: ಪ್ರಧಾನಿ ನರೇಂದ್ರ ಮೋದಿ ಅವರು, ಶಾಂತಿ ಮತ್ತು ಸಾಮಾಜಿಕ ಸಾಮರಸ್ಯದ ಗಾಂಧೀಜಿಯವರ ಆದರ್ಶಗಳನ್ನು ಉತ್ತೇಜಿಸುವಲ್ಲಿ ಗೀತಾ ಪ್ರೆಸ್‌ನ ಕೊಡುಗೆಯನ್ನು ಸ್ಮರಿಸಿದ್ದಾರೆ. ಗೀತಾ ಪ್ರೆಸ್ ಸ್ಥಾಪನೆಯಾಗಿ ನೂರು ವರ್ಷಗಳನ್ನು ಪೂರೈಸಿದ ಹಿನ್ನೆಲೆ ಗಾಂಧಿ ಶಾಂತಿ ಪ್ರಶಸ್ತಿಯನ್ನು ನೀಡುತ್ತಿರುವುದು, ಸಮುದಾಯ ಸೇವೆಯಲ್ಲಿ ಸಂಸ್ಥೆಯು ಮಾಡಿದ ಕಾರ್ಯಕ್ಕೆ ಸಂದ ಮನ್ನಣೆಯಾಗಿದೆ ಎಂದರು.

ಪ್ರಭಿಗ್ಯಾನ್, ಅಂತರ ಕಾಲೇಜು ಉತ್ಸವ ಉದ್ಘಾಟನೆ

ಮೈಸೂರು, ಜೂ. 18– ಮೈಸೂರಿನ ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಪ್ರಭಿಗ್ಯಾನ್ ಎರಡು ದಿನದ ಅಂತರ ಕಾಲೇಜು ಉತ್ಸವವನ್ನು ಜನಪ್ರಿಯ ಕಲಾವಿದ ಮತ್ತು ವಕೀಲ ವಿಕಾಸ್ ಉತ್ತಯ್ಯ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಯಾವುದೇ ವಿದ್ಯಾರ್ಥಿ ಉತ್ತಮ ಫಲಿತಾಂಶ ಪಡೆಯಲು ಪ್ರಯತ್ನಶೀಲತೆಯನ್ನು ಬೆಳೆಸಿಕೊಳ್ಳಬೇಕು. ಇದರಿಂದ ಸಾಧನೆ ಸಿದ್ಧಿಸಿ ಯಶಸ್ಸು ತಾನಾಗೇ ಬರುವುದು ಎಂದು ಕರೆ ನೀಡಿದರು. ಶಿಸ್ತು ಮತ್ತು ಗುಣ ಸ್ವಭಾವ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪೋಷಕರು ಮತ್ತು ಶಿಕ್ಷಕರು ಬಹಳ ಶ್ರಮ ವಹಿಸುವುದರಿಂದ ಅವರುಗಳ ಪರಿಶ್ರಮಕ್ಕೆ ನಿಮ್ಮ ಫಲಿತಾಂಶಗಳೇ ಸಾಕ್ಷಿಯಾಗುತ್ತದೆ. ಒಳ್ಳೆಯತನದ ವ್ಯಕ್ತಿತ್ವ ಎಂದಿಗೂ ಗೌರವಕ್ಕೆ ಪಾತ್ರವಾಗುತ್ತದೆ ಇಂದಿನ ಪೋಷಕರು ತಮ್ಮ ಮಕ್ಕಳಿಗೆ ಹಣ ಸಂಪಾದಿಸುವುದಕ್ಕಿಂತ ಉತ್ತಮ ಶಿಕ್ಷಣ ಮತ್ತು ಸಂಸ್ಕಾರ ನೀಡಿದರೆ ಅವರು ನಿಜವಾದ ಶ್ರೀಮಂತರಾಗುತ್ತಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ ಸಾಯಿನಾಥ್ ಮಲ್ಲಿಗೆಮಾಡು ಮಾತನಾಡಿ, ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೆ ತೊಡಗಿಸಿಕೊಂಡರೆ ವ್ಯಕ್ತಿತ್ವ ವಿಕಸನವಾಗುತ್ತದೆ. ಪ್ರಭಿಗ್ಯಾನ್ ಉತ್ಸವದಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ವಿಜ್ಞಾನ, ವಾಣಿಜ್ಯ ವ್ಯವಹಾರ ಕಲೆ ನೃತ್ಯ ಮೊದಲಾದ ಸಂಸ್ಕೃತಿಯ ಎಲ್ಲಾ ಪ್ರತಿಭೆಗಳನ್ನು ಅನಾವರಣಗೊಳಿಸುವಲ್ಲಿ ಈ ಉತ್ಸವವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಬಡವರ ಅಕ್ಕಿ ನೀಡಿಕೆಯಲ್ಲಿ ಕೇಂದ್ರ ತಾರತಮ್ಯ: ಶಾಸಕ ಹರೀಶ್‌ಗೌಡ



ಮೈಸೂರು, ಜೂ 18(ಜಿಎ)–ಬಡವರ ಅಕ್ಕಿಯಲ್ಲೂ ಕೇಂದ್ರ ಸರ್ಕಾರ ರಾಜಕೀಯ ಮಾಡುವುದು ನಿಜವಾಗಿಯೂ ಖಂಡನೀಯ ಎಂದು ಚಾಮರಾಜ ಕ್ಷೇತ್ರದ ಶಾಸಕ ಹರೀಶ್‌ಗೌಡ ಕಿಡಿಕಾರಿದರು.

ಮೈಸೂರಿನಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದ ಬಗ್ಗೆ ಭಯ ಶುರುವಾಗಿದೆ. ಕಾಂಗ್ರೆಸ್‌ನ ಪಂಚ ಗ್ಯಾರಂಟಿಗಳ ಮೂಲಕ ಇಡೀ ದೇಶದಲ್ಲೇ ಕರ್ನಾಟಕ ಸದ್ದು ಮಾಡುತ್ತಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕ ಮಾಡೆಲ್ ವರ್ಕೌಟ್ ಆಗುವ ಭಯ ಮೋದಿಗೆ ಶುರುವಾಗಿದೆ. ಈಗ ರಾಜ್ಯಕ್ಕೆ ಅನ್ನಭಾಗ್ಯದಡಿ ಕೊಡುವ ಅಕ್ಕಿಗೂ ತಡೆಯೊಡ್ಡಿದ್ದಾರೆ. ಬಿಜೆಪಿಯವರು ದೇಶವನ್ನ ಉದ್ಧಾರ ಮಾಡೋದಿಲ್ಲ. ಎಲ್ಲವನ್ನ ಮಾರಿಕೊಳ್ತಾರೆ ಅಷ್ಟೇ. ಈಗಾಗಲೇ ಸರ್ಕಾರಿ ಸ್ವಾಮ್ಯದಲ್ಲಿರುವ ಹಲವು ಇಲಾಖೆಗಳನ್ನ ಖಾಸಗೀಕರಣ ಮಾಡುತ್ತಿದ್ದಾರೆ. ಇನ್ನಷ್ಟು ವರ್ಷ ಬಿಜೆಪಿ ಇದ್ದರೆ ದೇಶವನ್ನೇ ಮಾರಿಬಿಡುತ್ತಾರೆ. ಸುಮ್ಮನೆ ಭಾರತ್ ಮಾತಾಕೀ ಜೈ ಅನ್ನುತ್ತಾರೆ. ಇವರಿಗೆ ನಿಜವಾದ ದೇಶಪ್ರೇಮವೇ ಇಲ್ಲ ಎಂದು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಪೇ ಅಂಡ್ ಪಾರ್ಕ್ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ನಾನು ಆರಂಭದಿಂದಲೇ ಇದನ್ನ ವಿರೋಧಿಸಿದ್ದೇನೆ. ಪೇ ಅಂಡ್ ಪಾರ್ಕ್ ಮಾಡಲು ಹೊರಟಿರುವ ಸ್ಥಳಗಳು ಪ್ರವಾಸಿಗರು ಬಂದು ಹೋಗುವ ಜಾಗವಲ್ಲ. ಪ್ರತಿನಿತ್ಯ ನಮ್ಮ ಸ್ಥಳೀಯರೇ ಬಂದು ತಮ್ಮ ವಾಹನಗಳನ್ನು ನಿಲ್ಲಿಸುತ್ತಾರೆ. ಗ್ರಾಹಕರು, ವರ್ತಕರ ವಾಹನಗಳೇ ಹೆಚ್ಚಾಗಿ ನಿಲ್ಲಿಸುವುದು. ಅದಕ್ಕಾಗಿ ಪೇ ಅಂಡ್ ಪಾರ್ಕ್ ನೀತಿ ಜಾರಿಗೆ ತರಲು ಮುಂದಾಗಿದ್ದ ಪಾಲಿಕೆಯ ನಿರ್ಧಾರಕ್ಕೆ ನನ್ನ ಆಕ್ಷೇಪ ಇದ್ದೇ ಇದೆ. ಈ ಪ್ರಕ್ರಿಯೆ ಕೈ ಬಿಟ್ಟರೆ ಒಳ್ಳೆಯದು ಈ ಸಂಬಂಧ ಮೇಯರ್ ಹಾಗೂ ಪಾಲಿಕೆ ಆಯುಕ್ತರಿಗೆ ಪತ್ರ ಬರೆಯುತ್ತೇನೆ. ಅದರ ಬದಲು ಟೌನ್‌ಹಾಲ್‌ನಲ್ಲಿ ನಿರ್ಮಾಣ ಮಾಡುತ್ತಿರುವ ಮಲ್ಟಿ ಲೆವೆಲ್ ಪಾರ್ಕಿಂಗ್ ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಕೊಡಗು ಜಿಲ್ಲೆಯಲ್ಲಿ ಹಿಂದುಳಿದಿರುವ ವೈದ್ಯಕೀಯ ಕ್ಷೇತ್ರ ಅಭಿವೃದ್ಧಿಯಾಗಬೇಕು

ಸರ್ಕಾರದ ಮೇಲೆ ಒತ್ತಡ ಹೇರಲು ತಾನೂ ಸಿದ್ಧ: ನಿವೃತ್ತ ಲೆ.ಜ. ಡಾ. ಬಿ.ಎನ್.ಬಿ.ಎಂ. ಪ್ರಸಾದ್



ಮಡಿಕೇರಿ, ಜೂ.18– ಕೊಡಗಿನಲ್ಲಿ ವೈದ್ಯಕೀಯ ಕ್ಷೇತ್ರ ತೀರಾ ಹಿಂದುಳಿದಿದ್ದು, ಇದು ಆದಷ್ಟು ಶೀಘ್ರವಾಗಿ ಅಭಿವೃದ್ಧಿಯಾಗಬೇಕಿದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಅನುಭವಿ ತಜ್ಞ ವೈದ್ಯರು ಒಟ್ಟಾಗಿ ಚರ್ಚಿಸಿ ಸರ್ಕಾರದ ಮೇಲೆ ಒತ್ತಡ ಹೇರಬೇಕು. ಇದಕ್ಕೆ ಪೂರಕವಾಗಿ ತಾನು ಯಾವುದೇ ಸಹಾಯ ಬೇಕಾದರೂ ಮಾಡಲು ಸಿದ್ಧ ಎಂದು ನಿವೃತ್ತ ಲೆ.ಜ. ಡಾ. ಬಿ.ಎನ್.ಬಿ.ಎಂ. ಪ್ರಸಾದ್ ಅವರು ಭರವಸೆ ನೀಡಿದರು.

ಮಡಿಕೇರಿಯ ಪತ್ರಿಕಾಭವನದ ಸಭಾಂಗಣದಲ್ಲಿ ನಡೆದ ಕೊಡಗು ಪತ್ರಕರ್ತರ ಸಂಘದ ವಾರ್ಷಿಕೋತ್ಸವ ಹಾಗೂ ವಾರ್ಷಿಕ ಪ್ರಶಸ್ತಿ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕೊಡಗಿನ ಜನ ಇಲ್ಲಿನ ಪರಿಸರ, ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿದ್ದಾರೆ. ದೇಶ ಸೇವೆಗಾಗಿ ಅಪಾರ ಸಂಖ್ಯೆಯಲ್ಲಿ ಸೈನಿಕರನ್ನು ನೀಡಿದ ಕೀರ್ತಿ ಕೊಡಗು ಜಿಲ್ಲೆಯದ್ದಾಗಿದೆ. ಕೊಡಗಿನ ಹಿರಿಮೆ ಇಲ್ಲಿಯವರಿಗೆ ತಿಳಿದಿಲ್ಲ. ಆದರೆ ಉತ್ತರ ಭಾರತದ ಜನತೆಗೆ ಕೊಡಗಿನ ಬಗ್ಗೆ ಅಪಾರವಾದ ಗೌರವವಿದೆ ಎಂದು ಹೇಳಿದರು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರು ಕೊಡಗನ್ನು ದಕ್ಷಿಣದ ಕಾಶ್ಮೀರ ಎಂದು ಬಣ್ಣಿಸಿದ್ದರು. ಇದಕ್ಕೆ ಇಲ್ಲಿನ ಪರಿಸರ ಮುಖ್ಯ ಕಾರಣ. ಅದನ್ನು ಸಂರಕ್ಷಿಸುವ ಕಾರ್ಯವಾಗಬೇಕು ಎಂದ ಅವರು, ತಾನು ಕೊಡಗಿನ ಪತ್ರಕರ್ತರೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದೇನೆ. ಕೊಡಗು ಪತ್ರಕರ್ತರ ಸಂಘ ಮತ್ತಷ್ಟು ಹಲವು ಕಾರ್ಯಕ್ರಮ ಮಾಡಬೇಕೆಂದು ಸಲಹೆ ನೀಡಿದರು.

ವಿದ್ಯಾವಂತರ ಅಗತ್ಯವಿದೆ

ದೇಶಕ್ಕೆ ಇಂದು ವಿದ್ಯಾವಂತ ರಾಜಕಾರಣಿಗಳ ಅವಶ್ಯಕತೆಯಿದೆ. ಮುಂದೆ ಚುನಾವಣೆಯಲ್ಲಿ ಸ್ಪರ್ಧಿಸುವವರು ತಮ್ಮ ವಿದ್ಯಾಭ್ಯಾಸ ಪೂರ್ಣಗೊಳಿಸಿ ಬಂದರೆ ಉತ್ತಮ. ದೇಶ ಕಟ್ಟುವ ಕೆಲಸ ಒಬ್ಬರಿಂದ ಮಾತ್ರ ಸಾಧ್ಯವಿಲ್ಲ. ಪತ್ರಕರ್ತರೂ ಕೂಡಾ ಮುಖ್ಯ. ನಾವೆಲ್ಲರೂ ತಂಡವಾಗಿ ಕೆಲಸ ಮಾಡಿಕೊಂಡು ಹೋಗಬೇಕು ಎಂದರು.

ಈಗಾಗಲೇ ತನಗೆ ಹಲವು ಸಂಘ ಸಂಸ್ಥೆಗಳಿಂದ ಸನ್ಮಾನ ಮಾಡಲಾಗುತ್ತಿದೆ. ಚುನಾವಣೆಯಲ್ಲಿ ಗೆದ್ದ ಮಾತ್ರಕ್ಕೆ ಸನ್ಮಾನ ಮಾಡುವುದು ಸರಿಯಲ್ಲ. ಐದು ವರ್ಷಗಳ ಬಳಿಕ ತಾನು ಮಾಡಿದ ಅಭಿವೃದ್ಧಿ ಕೆಲಸದ ಆಧಾರದಲ್ಲಿ ಸನ್ಮಾನ ಮಾಡಿದರೆ ಅದನ್ನು ಪ್ರೀತಿಯಿಂದ ಸ್ವೀಕರಿಸುತ್ತೇನೆ ಎಂದು ಮಂಥರ್ ಗೌಡ ಇದೇ ಸಂದರ್ಭ ತಿಳಿಸಿದರು.

ಮುಖ್ಯ ಅತಿಥಿಯಾಗಿದ್ದ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಮಾತನಾಡಿ, ಹಿರಿಯರ ಮಾರ್ಗದರ್ಶನ ಹಾಗೂ ಪತ್ರಕರ್ತರ ಸಹಕಾರದಿಂದ ಕ್ಷೇತ್ರದ ಅಭಿವೃದ್ಧಿ ಮಾಡಲು ಸಾಧ್ಯವಾಗಲಿದೆ. ಅಧಿಕಾರ ಇದ್ದರೂ ಇಲ್ಲದಿದ್ದರೂ ಒಂದೇ. ನನ್ನ ಕೆಲಸವನ್ನು ನಾನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ನುಡಿದರು.

ರಾಜ್ಯ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕ ತೀತಿರ ರೋಶನ್ ಅಪ್ಪಚ್ಚು ಮಾತನಾಡಿ, ಪತ್ರಕರ್ತರು ಸಮಾಜದಲ್ಲಿ ಉತ್ತಮ ಪ್ರಭಾವ ಬೀರಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಬೇಕು. ಇಂದು ಸಮೂಹ ಮಾಧ್ಯಮ ಶಕ್ತಿಶಾಲಿಯಾಗಿದೆ. ಸಮಾಜದಲ್ಲಿನ ಒಳಿತು ಕೆಡುಕುಗಳನ್ನು ತಿಳಿಸಿಕೊಡುವ ಕರ್ತವ್ಯ ಪತ್ರಕರ್ತರದ್ದು ಎಂದು ಹೇಳಿದರು

ರೆಡ್ ಕ್ರಾಸ್‌ನ ಕೊಡಗು ಜಿಲ್ಲಾ ಸಭಾಪತಿ ಬಿ.ಕೆ. ರವೀಂದ್ರ ರೈ ಮಾತನಾಡಿ, ಪುಟ್ಟ ಜಿಲ್ಲೆಯಾದರೂ ಕೊಡಗಿನಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆಯಲು ಪತ್ರಕರ್ತರ ಕೊಡುಗೆ ಅಪಾರವಾಗಿದೆ. ಜಿಲ್ಲೆಯಲ್ಲಿ ಹಲವು ಸಂಘ ಸಂಸ್ಥೆಗಳಿವೆ. ಎಲ್ಲಾ ಸಮಸ್ಯೆಗಳನ್ನು ಸರ್ಕಾರದಿಂದ ಮಾತ್ರ ನಿವಾರಣೆ ಮಾಡಲು ಸಾಧ್ಯವಿಲ್ಲ. ಎಲ್ಲರೂ ಸಮಸ್ಯೆ ಪರಿಹಾರಕ್ಕೆ ಕೈಜೋಡಿಸಬೇಕಿದೆ ಎಂದರು.

ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ. ಮುರಳೀಧರ್ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಸಂಘವೆಂದರೆ ಅದು ಕೊಡಗು ಪತ್ರಕರ್ತರ ಸಂಘ ಮಾತ್ರ. ಕಳೆದೊಂದು ವರ್ಷದಿಂದ ಸಂಘದಿಂದ ಹಲವು ಕಾರ್ಯ ಕ್ರಮ ಆಯೋಜಿಸಲಾಗುತ್ತಿದೆ. ಪತ್ರಕರ್ತರಿಗೆ ಸರ್ಕಾರದಿಂದ ಆದ್ಯತೆ ಮೇರೆ ನಿವೇಶನ ನೀಡಬೇಕಿದೆ. ಜೊತೆಗೆ ಗ್ರಾಮೀಣ ಪತ್ರಕರ್ತರಿಗೂ ಉಚಿತ ಬಸ್ ಪಾಸ್ ಒದಗಿಸಬೇಕಿದೆ ಎಂದು ಹೇಳಿದರು.

ಪ್ರಶಸ್ತಿ ವಿತರಣಾ ಕಾರ್ಯಕ್ರಮದಲ್ಲಿ ವಾರ್ಷಿಕ ಕ್ರೀಡಾ ವರದಿಗೆ ಪ್ರಶಸ್ತಿ ಭಾಜನರಾಗಿದ್ದ ಕನ್ನಡಪ್ರಭ ವರದಿಗಾರ ವಿಘ್ನೇಶ್ ಭೂತನಕಾಡು, ಗ್ರಾಮೀಣ ವರದಿ ಪ್ರಶಸ್ತಿ ಪಡೆದ ಪ್ರತಿನಿಧಿ ವರದಿಗಾರ ಸುರೇಶ್ ಬಿಳಿಗೇರಿ, ಕೃಷಿ ವರದಿಗೆ ವಿಜಯ ಕರ್ನಾಟಕ ವರದಿಗಾರ ಕವನ್ ಕಾರ್ಯಪ್ಪ, ಮಾನವೀಯ ವರದಿಗೆ ಶಕ್ತಿ ಪತ್ರಿಕೆಯ ಕೆ.ಎಸ್. ಮೂರ್ತಿ, ಟಿ.ವಿ. ವಾಹಿನಿ ವಿಭಾಗದಲ್ಲಿ ಪ್ರಶಸ್ತಿ ಪಡೆದ ಟಿವಿ ಒನ್ ಸುದ್ದಿ ವಾಹಿನಿಯ ಪ್ರಸಾದ್ ಅವರಿಗೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ವಿತರಿಸಲಾಯಿತು. ಅಲ್ಲದೆ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ಕ್ರೀಡಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಡಿಕೇರಿ ವಿಧಾನ ಸಭಾ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರಿಗೆ ಕೊಡಗು ಪತ್ರಕರ್ತರ ಸಂಘ ಹಾಗೂ ಕುಶಾಲನಗರ ತಾಲೂಕು ಪತ್ರಕರ್ತರ ಸಂಘ 'ದಿಂದ ಸನ್ಮಾನಿಸಿ, ಗೌರವಿಸಲಾಯಿತು.

ಕೊಡಗು ಪತ್ರಕರ್ತರ ಸಂಘದ ಅಧಿಕೃತ ವೆಬ್‌ಸೈಟ್ ಅನ್ನು ಗಣ್ಯರು ಲೋಕಾರ್ಪಣೆ ಮಾಡಿದರು.

ಭ್ರಷ್ಟಾಚಾರ ಮಾಹಿತಿ ನೀಡಿ

ಭ್ರಷ್ಟಾಚಾರ ದಿನನಿತ್ಯ ಎಲ್ಲಾ ಕ್ಷೇತ್ರಗಳಲ್ಲೂ ನಡೆಯುತ್ತಿದೆ. ಎಲ್ಲಾ ಬದಲಾವಣೆ ಆಗಬೇಕಾದರೆ ತಮ್ಮ ಆತ್ಮಸಾಕ್ಷಿಯಿಂದ ಕೆಲಸ ಮಾಡಬೇಕು. ಯಾವುದಾದರೂ ಸರ್ಕಾರಿ ಕಚೇರಿಗಳಲ್ಲಿ ಅಧಿಕಾರಿಗಳು ಅಥವಾ ರಾಜಕಾರಣಿಗಳು ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಬಗ್ಗೆ ತಿಳಿದರೆ ಕೂಡಲೇ ನನಗೆ ಮಾಹಿತಿ ನೀಡಿದರೆ ಅಂತಹವರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಹೇಳಿದರು.

ಕೊಡಗಿನಲ್ಲಿ ವಿದ್ಯುತ್ ಕೇಂದ್ರ ಅಭಿವೃದ್ಧಿ: ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಸಮಸ್ಯೆ ಸಾಕಷ್ಟಿದೆ. ಇದೀಗ ಜಿಲ್ಲೆಯಲ್ಲಿ ಹೊಸದಾಗಿ 13 ವಿದ್ಯುತ್ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ರಾಜ್ಯ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕ ತೀತಿರ ರೋಷನ್ ಅಪ್ಪಚ್ಚು ತಿಳಿಸಿದರು. ಕೊಡಗಿನಲ್ಲಿ ಹೊಸ ಕೇಂದ್ರಗಳು ಆರಂಭವಾದಲ್ಲಿ ವಿದ್ಯುತ್ ಸಮಸ್ಯೆಗೆ ಮುಕ್ತಿ ದೊರಕಲಿದೆ. ಈ ನಿಟ್ಟಿನಲ್ಲಿ ಈಗಾಗಲೇ ಕೆಲಸ ಆರಂಭಿಸಿದ್ದೇವೆ. ರಾಜ್ಯದಲ್ಲಿ 15 ಸಾವಿರ ಮೆಗಾವ್ಯಾಟ್ ವಿದ್ಯುತ್ ಅಗತ್ಯವಿದೆ. ತಾನು ಕೆಲಸ ನಿರ್ವಹಿಸಿದ ಬಳಿಕ ವಿದ್ಯುತ್ ಕೇಂದ್ರಗಳ ಸುಧಾರಣೆಗೆ ಕ್ರಮ ಕೈಗೊಂಡಿದ್ದು, ಹಂತ ಹಂತವಾಗಿ ಅಭಿವೃದ್ಧಿ ಆಗಲಿದೆ ಎಂದು ತಿಳಿಸಿದರು.

ನಾಪೋಕ್ಲು ಶೌರ್ಯ ಸದಸ್ಯರಿಂದ ರಸ್ತೆಗೊಂದು ಕಾಯಕಲ್ಪ



ನಾಪೋಕ್ಲು, ಜೂ.18– ಹದಗೆಟ್ಟ ರಸ್ತೆಯ ಗುಂಡಿಮುಚ್ಚಿ ವಾಹನ ಚಾಲಕರಿಗೆ ನೆರವಾಗುವ ಕೆಲಸವನ್ನು ಸ್ಥಳೀಯ ಶೌರ್ಯ ತಂಡದ ಸದಸ್ಯರು ಶನಿವಾರ ಮಾಡಿದ್ದಾರೆ.

ಪಟ್ಟಣಕ್ಕೆ ಹೊಂದಿಕೊಂಡಂತಿರುವ ಚೇರಿಯ ಪರಂಬು ಊರಿನ ಜನರೆಲ್ಲರೂ ಉಪಯೋಗಿಸುವ ರಸ್ತೆಯ ದುಸ್ಥಿತಿಯನ್ನು ಸಂಬಂಧಪಟ್ಟವರು ಗಮನಹರಿಸದ ಹಿನ್ನೆಲೆಯಲ್ಲಿ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಮಳೆಗಾಲದಲ್ಲಿ ಇನ್ನಷ್ಟು ಸಮಸ್ಯೆ ಎದುರಾಗುವುದನ್ನು ಗಮನಿಸಿದ ಶೌರ್ಯ ಸದಸ್ಯರುಗಳು ಹೊಳೆಯಿಂದ ಹೊರಳು ಕಲ್ಲುಗಳನ್ನು ಶೇಖರಿಸಿ ಪಿಕಪ್ ವಾಹನದಲ್ಲಿ ತಂದು ರಸ್ತೆಗೆ ಹಾಕಿ ಸೇವಾ ಕಾರ್ಯವನ್ನು ಮಾಡಿ ರಸ್ತೆಗೊಂದು ಕಾಯಕಲ್ಪ ನೀಡಿ ನಾಪೋಕ್ಲು ಶೌರ್ಯ ಸದಸ್ಯರು ಊರಿನವರ ಪ್ರಶಂಸೆಗೆ ಭಾಜನರಾದರು.

ಈ ಸೇವಾ ಕಾರ್ಯದಲ್ಲಿ ದಿಲೀಶ್ ಎನ್, ಬಿ, ಶಂಕರ್ ಬಿ ಹೆಚ್, ಸೀನಾ ಮಾಧವನ್, ಮಾಯಿಲಪ್ಪ ಪಿ ಎಂ, ಗಣೇಶ್ ಎಂ, ಅಪ್ಪಣ್ಣ ವೈ ಆರ್, ಪ್ರವೀಣ ಕೆ.ಹೆಚ್ ಹಾಜರಿದ್ದರು.

ಸ್ವಸಹಾಯ ಸಂಘದ ಸದಸ್ಯರ ಮಕ್ಕಳಿಗೆ ಸುಜ್ಞಾನನಿಧಿ ಶಿಷ್ಯವೇತನ ವಿತರಣೆ



ವಿರಾಜಪೇಟೆ, ಜೂ.18– ವಿದ್ಯಾರ್ಥಿಗಳು ತಮಗೆ ಸಿಗುವ ಸೌಲಭ್ಯಗಳನ್ನು ಬಳಸಿಕೊಂಡು ಉನ್ನತ ಶಿಕ್ಷಣದ ಕಡೆಗೆ ಹೆಚ್ಚಿನ ಗಮನ ಹರಿಸುವಂತಾಗಬೇಕು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕೊಡಗು ನಿರ್ದೇಶಕಿ ಲೀಲಾವತಿ ಮನವಿ ಮಾಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಕಛೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಯೋಜನೆಯ ತಾಲೂಕು ಮಟ್ಟದ ಸ್ವ ಸಹಾಯ ಸಂಘದ ಸದಸ್ಯರ ಮಕ್ಕಳಿಗೆ 2023ನೇ ಸಾಲಿನ ಸುಜ್ಞಾನನಿಧಿ ಶಿಷ್ಯವೇತನ ಮಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಧರ್ಮಸ್ಥಳದ ಡಾ.ವಿರೇಂದ್ರ ಹೆಗ್ಗಡೆ ಅವರು, ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದೆಂದು ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡುವ ಮೂಲಕ ಗ್ರಾಮಾಭಿವೃದ್ಧಿ ಯೋಜನೆಯಡಿ ಸಹಾಯ ಹಸ್ತ ನೀಡುತ್ತಿದ್ದಾರೆ ಎಂದರು.

ಪ್ರಸ್ತುತ ವರ್ಷ ಮನೆ ಇಲ್ಲದವರಿಗೆ ಮನೆ ನಿರ್ಮಾಣ ಮಾಡಿಕೊಡುವ ಕಾರ್ಯ ಕೈಗೊಳ್ಳಲಾಗಿದೆ ಎಂದ ಲೀಲಾವತಿ ಅವರು, ಮಕ್ಕಳು ಉನ್ನತ ಹುದ್ದೆಗೆ ಹೋದ ನಂತರ ಕಷ್ಟಪಟ್ಟು ವಿದ್ಯೆ ಕಲಿಸಿದ ಹಿರಿಯ ಪೋಷಕರನ್ನು ಎಂದಿಗೂ ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆಯ ಜಿಲ್ಲಾ ಅಧ್ಯಕ್ಷ ಬನಾಂಗಡ ಅರುಣ್‌ಕುಮಾರ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸರ್ಕಾರ ಮಾಡುವಂತ ಕಾರ್ಯವನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಾಡುತ್ತಿದೆ, ವಿದ್ಯಾರ್ಥಿಗಳು ದುಶ್ಚಟದಿಂದ ದೂರ ಇದ್ದು, ಶಿಕ್ಷಣದ ಕಡೆಗೆ ಗಮನಹರಿಸಬೇಕು, ಪೋಷಕರು ಮಕ್ಕಳನ್ನು ಮನೆಯಿಂದ ಶಾಲೆಗೆ ಕಳಿಸಿದರೆ ಸಾಲದು, ಮಕ್ಕಳು ಎಲ್ಲಿಗೆ ಹೋಗುತ್ತಾರೆ ಎನು ಮಾಡುತ್ತಾರೆ ಎಂಬುದರ ಬಗ್ಗೆ ಗಮನಹರಿಸುವುದು ಉತ್ತಮ ಎಂದರು.

ಪ್ರಭಾರ ಕ್ಷೇತ್ರ ಶಿಕ್ಷಣಧಿಕಾರಿ ಗಾಯತ್ರಿ ಮಾತನಾಡಿದರು. ಮಡಿಕೇರಿ–ವಿರಾಜಪೇಟೆ ಯೋಜನಾ ಅಧಿಕಾರಿ ದಿನೇಶ್ ಸ್ವಾಗತಿಸಿದರು.

ಜೂ.27 ರೊಳಗೆ ಪಡಿತರ ಪಡೆದುಕೊಳ್ಳಲು ಸೂಚನೆ

ಮಡಿಕೇರಿ, ಜೂ.18– ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸರ್ವರ್ ನಿರ್ವಹಣಾ ಕಾರ್ಯ ಕೈಗೊಳ್ಳಲಾಗುತ್ತಿದೆ. ಈ ಹಿನ್ನೆಲೆ ಸರ್ವರ್ ಅನ್ನು ಜೂನ್ 28 ರಿಂದ ಸ್ಥಗಿತಗೊಳಿಸಲಾಗುತ್ತದೆ. ಹೀಗಾಗಿ ಜೂನ್ ತಿಂಗಳ ಕೊನೆಯ ಮೂರು ದಿನ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಿತರಣೆ ಮಾಡಲು ಸಾಧ್ಯವಿಲ್ಲ.

ಆದ್ದರಿಂದ ಜೂನ್ 27 ರಂದು ಪಡಿತರ ಪಡೆಯಲು ಕೊನೆಯ ದಿನ ಆಗಿದೆ. ಜಿಲ್ಲೆಯ ಆದ್ಯತಾ (ಬಿಪಿಎಲ್ ಮತ್ತು ಎಎವೈ) ಪಡಿತರ ಚೀಟಿ ಫಲಾನುಭವಿಗಳು ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಿಗೆ ತೆರಳಿ ಜೂನ್ ತಿಂಗಳ ಪಡಿತರವನ್ನು ಜೂ.27 ರೊಳಗೆ ಪಡೆಯುವಂತೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕರಾದ ಕುಮುದಾ ಶರತ್ ತಿಳಿಸಿದ್ದಾರೆ.

ಮಣ್ಣೆತ್ತಿನ ಅಮಾವಾಸ್ಯೆ ಹಿನ್ನೆಲೆ

ಮಾದಪ್ಪನ ಸನ್ನಿಧಿಗೆ ಹರಿದು ಬಂದ ಭಕ್ತಸಾಗರ

- ಸಾವಿರಾರು ಭಕ್ತರಿಂದ ದೇವರ ದರ್ಶನ
- ಭಕ್ತರಿಂದ ವಿವಿಧ ಹರಕೆ ಸೇವೆ



ಬಸ್ಸಿಗಾಗಿ ಪರದಾಟ

ಅಮಾವಾಸ್ಯೆ ಪ್ರಯುಕ್ತ ಕೆಎಸ್‌ಆರ್‌ಟಿಸಿ ನಿಗಮ 150 ಹೆಚ್ಚುವರಿ ಬಸ್ ಕಲ್ಪಿಸಿದ್ದರೂ, ಶಕ್ತಿ ಯೋಜನೆ ಪರಿಣಾಮ ಪ್ರಯಾಣಿಕರು ಬಸ್‌ಗಾಗಿ ಪರದಾಡುವಂತಾಯಿತು. ಇದರಿಂದ ಬಸ್ ನಿಲ್ದಾಣದಲ್ಲಿ ಭಾರೀ ಸಂಖ್ಯೆಯಲ್ಲಿ ಪ್ರಯಾಣಿಕರು ಜಮಾಯಿಸಿದ್ದರಿಂದ ಬೆಟ್ಟಕ್ಕೆ ಬರುವ, ಬೆಟ್ಟದಿಂದ ಹೊರಡುವ ಬಸ್‌ಗಳಲ್ಲಿ ನೂಕು ನುಗ್ಗಲು ಉಂಟಾಗಿತ್ತು ಅಲ್ಲದೇ ಬಸ್‌ಗಾಗಿ ತಮಿಳುನಾಡು, ಮೈಸೂರು, ಚಾಮರಾಜನಗರ, ಮಂಡ್ಯದಿಂದ ಆಗಮಿಸಿದ್ದ ಭಕ್ತರು ಕಾದು ನಿಲ್ಲಬೇಕಾಯಿತು.

ಹನೂರು, ಜೂ.18– ಮಣ್ಣೆತ್ತಿನ ಅಮಾವಾಸ್ಯೆ ಹಿನ್ನೆಲೆಯಲ್ಲಿ ಪ್ರಸಿದ್ಧ ಧಾರ್ಮಿಕ ಯಾತ್ರಾ ಸ್ಥಳ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟಕ್ಕೆ ಭಾನುವಾರ ನಿರೀಕ್ಷೆಗೂ ಮೀರಿ ಭಕ್ತ ಸಾಗರ ಹರಿದು ಬಂದಿತು.

ಅಮಾವಾಸ್ಯೆ ಅಂಗವಾಗಿ ಸಂಪ್ರದಾಯದಂತೆ ಬೆಳಗಿನ ಜಾವ 4 ರಿಂದ 6 ಗಂಟೆವರೆಗೆ ಸ್ವಾಮಿಗೆ ಎಣ್ಣೆ ಮಜ್ಜನ, ಬಿಲ್ವಾರ್ಚನೆ, ವಿವಿಧ ಅಭಿಷೇಕ, ವಿಶೇಷ ಪೂಜಾ ಕೈಂಕರ್ಯಗಳೊಂದಿಗೆ ಮಹಾ ಮಂಗಳಾರತಿ ನೆರವೇರಿಸಲಾಯಿತು. ಅಮಾವಾಸ್ಯೆ ಹಿನ್ನೆಲೆಯಲ್ಲಿ ದೇವಾಲಯವನ್ನು ತಳಿರು ತೋರಣ, ವಿವಿಧ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಭಾನುವಾರ ಮುಂಜಾಯೇ ರಾಜ್ಯದ ನಾನಾ ಕಡೆಗಳಿಂದ ಬೆಟ್ಟಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ಮಾದಪ್ಪನ ದರ್ಶನ ಪಡೆದು ಶ್ರದ್ಧಾ– ಭಕ್ತಿಯಿಂದ ಪೂಜೆ ಸಲ್ಲಿಸಿದರು. ಅಲ್ಲದೇ ಈ ವೇಳೆ ದೇವರ ದರ್ಶನಕ್ಕೆ ಕಿಲೋಮೀಟರ್‌ಗಟ್ಟಲೇ ಸರದಿ ಸಾಲು ಕಂಡು ಬಂತು.

ಹರಕೆ ಹೊತ್ತ ಭಕ್ತರಿಂದ ವಿವಿಧ ಸೇವೆ: ಹರಕೆ ಹೊತ್ತ ಭಕ್ತರು ಉರುಳು ಸೇವೆ, ಮುಡಿ ಸೇವೆ, ರಜಾ ಹೊಡೆಯುವುದು, ಪಂಜಿನ ಸೇವೆ, ಈಡುಗಾಯಿ ಹೊಡೆಯುವುದು ಇನ್ನಿತರೆ ಸೇವೆಗಳ ಜೊತೆಗೆ ಹುಲಿ ವಾಹನ, ಬಸವ ವಾಹನ, ದಂಡುಗೋಲು, ಚಿನ್ನ ಹಾಗೂ ಬೆಳ್ಳಿ ತೇರಿನ ಉತ್ಸವಗಳಲ್ಲಿ ಭಾಗಿಯಾಗಿ ಪುನೀತರಾದರು.

ಲಾಡು ಪ್ರಸಾದ ಖರೀದಿ ಜೋರು: ಅಮಾವಾಸ್ಯೆ ಹಿನ್ನಲೆಯಲ್ಲಿ ಶ್ರೀಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರಿಂದ ಲಾಡು ಪ್ರಸಾದ ಖರೀದಿ ಜೋರಾಗಿತ್ತು. ಇನ್ನು ಸಾಗರೋಪಾದಿಯಲ್ಲಿ ಆಗಮಿಸಿದ್ದ ಭಕ್ತರಿಗೆ ದಾಸೋಹ ಭವನದಲ್ಲಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

ಭಕ್ತರ ದಂಡು: ಮಣ್ಣೆತ್ತಿನ ಅಮಾವಾಸ್ಯೆ ವಾರಾಂತ್ಯದ ಭಾನುವಾರ ರಜಾ ದಿನ ಬಂದಿರುವುದರಿಂದ ಹಾಗೂ ಸರ್ಕಾರ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರು ಉಚಿತವಾಗಿ ಪ್ರಯಾಣಿಸಲು ಶಕ್ತಿ ಯೋಜನೆ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಬೆಟ್ಟಕ್ಕೆ ಈ ಬಾರಿ ನಿರೀಕ್ಷೆಗಿಂತಲೂ ಹೆಚ್ಚು ಭಕ್ತರು ಆಗಮಿಸಿದ್ದರು. ಅದರಲ್ಲೂ ಮಹಿಳಾ ಭಕ್ತರ ದಂಡೇ ನೆರೆದಿತ್ತು. ಎತ್ತ ನೋಡಿದರು ಮಾದಪ್ಪನ ಭಕ್ತರ ಕಲರವ ಬೆಟ್ಟದ ತುಂಬೆಲ್ಲಾ ಮಾರ್ದನಿಸಿತು.

ಖಾಸಗಿ ವಾಹನಗಳ ಮೊರೆ ಹೋದ ಭಕ್ತರು: ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಕಲ್ಪಿಸಿರುವುದರಿಂದ ಹೆಚ್ಚಿನ ಜನಜಂಗುಳಿ ಕಂಡು ಸಾಕಷ್ಟು ಭಕ್ತರು ಖಾಸಗಿ ಬಸ್, ಟಿಟಿ, ಗೂಡ್ಸ್ ಆಟೋ ಗಳಲ್ಲಿ ಮಾದಪ್ಪನ ಸನ್ನಿಧಿಗೆ ಆಗಮಿಸುತ್ತಿದ್ದು ಕಂಡು ಬಂತು. ಇನ್ನು 77 ಮಲೆ ಮಾದಪ್ಪನ ಬೆಟ್ಟಕ್ಕೆ ತೆರಳುವ ತಿರುವುಗಳಲ್ಲಿ ಟ್ರಾಫಿಕ್ ಜಾಮ್ ಸಮಸ್ಯೆ ಕಂಡು ಬಂತು. ಅಲ್ಲದೇ ಅಮಾವಾಸ್ಯೆ ಹಿನ್ನೆಲೆಯಲ್ಲಿ ಶನಿವಾರ ರಾತ್ರಿಯಿಂದ ಭಾನುವಾರ ಬೆಳಗ್ಗೆ ವರೆಗೂ ಮಹದೇಶ್ವರ ಬೆಟ್ಟದ ವನ್ಯಜೀವಿಧಾಮ ವಾಹನಗಳ ಸಂಚಾರ ಇತ್ತು.

ನಾಗಮಲೆಗೂ ಭಕ್ತರ ಭೇಟಿ: ಅಮಾವಾಸ್ಯೆ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ್ದ ಭಕ್ತರು ಮಾದಪ್ಪನಿಗೆ ಪೂಜೆ ಸಲ್ಲಿಸಿ ನಾಗಮಲೆಗೆ ಕಾಲ್ನಡಿಗೆಯಲ್ಲಿ ಸಾಗಿದರು. ಇನ್ನು ಕೆಲವು ಭಕ್ತರು ಇಂಡಿಗನತ್ತದವರೆಗೆ ಜೀಪಿನಲ್ಲಿ ತೆರಳಿ ಅಲ್ಲಿಂದ ಮುಂದಕ್ಕೆ ಕಾಲ್ನಡಿಗೆಯಲ್ಲಿ ನಾಗಮಲೆಗೆ ಭೇಟಿ ನೀಡಿದ್ದರು. ಮುನ್ನೆಚ್ಚರಿಕೆ ಕ್ರಮವಾಗಿ ಬೆಟ್ಟದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು.

ವ್ಯಾಘ್ರರೂಢ ಮಾದಪ್ಪನ ಪ್ರತಿಮೆ ವೀಕ್ಷಣೆ: ಇತ್ತೀಚಿಗೆ ನಿರ್ಮಾಣಗೊಂಡಿರುವ ಬೃಹತ್ ವ್ಯಾಘ್ರರೂಢ ಮಾದಪ್ಪನ ಪ್ರತಿಮೆಯನ್ನು ನೋಡಲು ಜನತೆ ಮುಗಿ ಬಿದ್ದರು.

ಅಮಾವಾಸ್ಯೆ: ಮರಡೀಗುಡ್ಡದ ಮಹದೇಶ್ವರ ದೇವಾಲಯ ಬಂದ್

ದೇವಾಲಯದ ಬಾಗಿಲಿಗೆ ಪೂಜೆ ಸಲ್ಲಿಸಿದ ಸಾವಿರಾರು ಭಕ್ತರು



ಕೊಳ್ಳೇಗಾಲ, ಜೂ.18– ಅಮಾವಾಸ್ಯೆಯಂದು ದೇಗುಲಗಳಲ್ಲಿ ಭಕ್ತರು ದೇವರಿಗೆ ಪೂಜೆ ಸಲ್ಲಿಸುವುದು ವಾಡಿಕೆ. ಆದರೆ ಕೊಳ್ಳೇಗಾಲದ ಮರಡೀಗುಡ್ಡದ ಮಹದೇಶ್ವರ ದೇವಾಲಯ ಮಣ್ಣೆತ್ತಿನ ಅಮಾವಾಸ್ಯೆಯಂದು ಬಂದ್ ಆಗಿತ್ತು.

ದೇವಾಲಯ ಬಂದ್ ಆಗಿದ್ದರಿಂದ ಆಕ್ರೋಶ ವ್ಯಕ್ತಪಡಿಸಿದ ಸಾವಿರಾರು ಭಕ್ತರು ದೇವಾಲಯದ ಹೊರಗಡೆಯೇ ಕೈ ಮುಗಿದು ಪೂಜೆ ಸಲ್ಲಿಸಿದರು. ಪ್ರತಿ ಅಮಾವಾಸ್ಯೆ ಹಾಗೂ ಇನ್ನಿತರ ವಿಶೇಷ ದಿನಗಳಲ್ಲಿ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯುತ್ತದೆ. ಜೊತೆಗೆ ಗಾಳಿಪಟ ಹಬ್ಬ ಸೇರಿದಂತೆ ಎಲ್ಲಾ ಹಬ್ಬಗಳಲ್ಲೂ ಸಾವಿರಾರು ಭಕ್ತರು ದೇವಾಲಯಕ್ಕೆ ಆಗಮಿಸಿ ವಿಶೇಷ ಪೂಜೆ ಸಲ್ಲಿಸುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅರ್ಚಕರು ಹಾಗೂ ಕೆಲ ಭಕ್ತರ ವಿವಾದದಿಂದಾಗಿ ಸರಿಯಾಗಿ ದೇಗುಲದ ಬಾಗಿಲು ತೆರೆಯುತ್ತಿಲ್ಲ. ಇತಿಹಾಸ ಪ್ರಸಿದ್ಧ ದೇಗುಲದ ಸ್ಥಿತಿಯೇ ಹೀಗಾದರೆ ಮುಂದಿನ ಗತಿ ಏನು ಎಂದು ಪ್ರಶ್ನಿಸಿದರು.

ಮಹದೇಶ್ವರರು ಮಂಡಿಯೂರಿದ್ದ ಈ ದೇವಾಲಯ ಮರಡಿಗುಡ್ಡದ ಮಹದೇಶ್ವರ ಎಂತಲೆ ಪ್ರಖ್ಯಾತಿ ಹೊಂದಿದೆ. ಇಂದು ಅಮಾವಾಸ್ಯೆ ದಿನದಂದು ಭಕ್ತರಿಗೆ ದೇವರ ದರ್ಶನ ಲಭ್ಯವಾಗಿಲ್ಲ ಎಂದು ಭಕ್ತರು ಆಕ್ರೋಶ ವ್ಯಕ್ತಪಡಿಸಿದರು.

ದೇವಾಲಯ ಬಂದ್ ಆಗಿದ್ದರು. ಸಾವಿರಾರು ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಮಹದೇಶ್ವರರು ಮರಡಿಯೂರಿದ್ದ ಸ್ಥಳ ಹಾಗೂ ಬಾಗಿಲಲ್ಲಿ ಪೂಜೆ ಸಲ್ಲಿಸಿದರು. ಮಹದೇಶ್ವರ ಅನ್ನ ದಾಸೋಹ ಸಮಿತಿಯಿಂದ ಅನ್ನದಾನ ನಡೆಯಿತು.

ಸಾರಿಗೆ ಬಸ್–ಸ್ಕೂಟರ್ ನಡುವೆ ಅಪಘಾತ: ಯುವಕ ಸಾವು

ಹನೂರು, ಜೂ.18– ಕೆಎಸ್‌ಆರ್‌ಟಿಸಿ ಬಸ್ ಮತ್ತು ದ್ವಿಚಕ್ರ ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಮಲೆ ಮಾದಪ್ಪನ ದರ್ಶನಕ್ಕೆ ತೆರಳುತ್ತಿದ್ದ ಯುವಕ ಮೃತಪಟ್ಟು, ಯುವತಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಬನಶಂಕರಿ 2ನೇ ಹಂತದ ಭವಾನಿ ನಗರದ ನಿವಾಸಿ ವೆಂಕಟಪ್ಪ(32) ಮೃತ ದುರ್ದೈವಿ. ಯುವತಿ ಸಾಕ್ಷಿ ಗಂಭೀರವಾಗಿ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವೆಂಕಟಪ್ಪ, ಸಾಕ್ಷಿ ಜೊತೆ ಬೆಂಗಳೂರಿನಿಂದ ಮಲೆ ಮಹದೇಶ್ವರ ಬೆಟ್ಟಕ್ಕೆ ಸುಜುಕಿ ಆಕ್ಸಸ್ ಬೈಕಿನಲ್ಲಿ ಬರುತ್ತಿದ್ದರು. ಈ ವೇಳೆ ತಾಳಬೆಟ್ಟದಿಂದ ಮಹದೇಶ್ವರ ಬೆಟ್ಟ ಮಾರ್ಗದ 11ನೇ ತಿರುವಿನ ಬಳಿ ಬರುತ್ತಿದ್ದಂತೆ ಬೆಟ್ಟದ ಕಡೆಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಈ ವೇಳೆ ತೀವ್ರ ಗಾಯಗೊಂಡಿದ್ದ ವೆಂಕಟಪ್ಪನನ್ನು ಆಂಬುಲೆನ್ಸ್‌ನಲ್ಲಿ ಚಿಕಿತ್ಸೆಗಾಗಿ ಕರೆದೊಯ್ಯುವ ಮಾರ್ಗಮಧ್ಯೆ ಆತ ಮೃತಪಟ್ಟಿದ್ದು, ಸಾಕ್ಷಿಯನ್ನು ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

ಘಟನೆ ಬಗ್ಗೆ ಮಾಹಿತಿ ತಿಳಿದ ಮಲೆ ಮಹದೇಶ್ವರ ಬೆಟ್ಟ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಮೃತದೇಹವನ್ನು ಹನೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರವಾನಿಸಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ. ಈ ವೇಳೆ ಮೃತ ವೆಂಕಟಪ್ಪನ ತಮ್ಮ ಆನಂದ ನೀಡಿದ ದೂರಿನನ್ವಯ ಕೆಎಸ್‌ಆರ್‌ಟಿಸಿ ಬಸ್ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಡಿ.ಇಎಲ್.ಇಡಿ, ಡಿ.ಪಿ.ಇಡಿ, ಡಿಪಿಎಸ್‌ಇ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜೂ.18– 2023–24ನೇ ಸಾಲಿನ ಡಿ.ಇಎಲ್.ಇಡಿ/ಡಿ.ಪಿ.ಇಡಿ/ಡಿಪಿಎಸ್‌ಇ ಕೋರ್ಸ್‌ನ ಸರ್ಕಾರಿ ಕೋಟಾದಡಿ ದಾಖಲಾತಿ ಸಂಬಂಧ ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್ www.schooleducation.kar.nic.in ನಲ್ಲಿ ಕ್ರಮಬದ್ಧವಾಗಿ ಭರ್ತಿ ಮಾಡಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಗೆ ಜೂನ್ 26ರೊಳಗೆ ಸಲ್ಲಿಸಬೇಕು ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪ ನಿರ್ದೇಶಕರು ಹಾಗೂ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮರಾಜನಗರ ಅಭಿವೃದ್ಧಿಗೆ ಶ್ರಮಿಸುವೆ: ಸಿ.ಪುಟ್ಟರಂಗಶೆಟ್ಟಿ



ಚಾಮರಾಜನಗರ, ಜೂ.18– ಕ್ಷೇತ್ರದ ಮತದಾರರು ನನ್ನ ಮೇಲೆ ನಂಬಿಕೆ ಇಟ್ಟು 4ನೇ ಬಾರಿಗೆ ನನಗೆ ಅಭೂತಪೂರ್ವ ಗೆಲುವು ತಂದುಕೊಟ್ಟಿದ್ದಾರೆ. ಅವರ ಬಯಕೆಯಂತೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಅನ್ವರ್ ಪಾಷ ಕಲ್ಯಾಣ ಮಂಟಪದಲ್ಲಿ ಎಸ್‌ಪಿಎಸ್ ಗ್ರೂಪ್ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಕಳೆದ ಅವಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಬಿಜೆಪಿ ಸರ್ಕಾರ ಅನುದಾನ ನೀಡಲಿಲ್ಲ. ಹೀಗಾಗಿ ಕ್ಷೇತ್ರ ಅಭಿವೃದ್ಧಿಯಾಗಲಿಲ್ಲ. ಈಗ ರಾಜ್ಯದಲ್ಲಿ ನಮ್ಮದೇ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ನಮ್ಮ ನೆಚ್ಚಿನ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರಿಂದ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಿಸಿ ಕ್ಷೇತ್ರದ, ಪಟ್ಟಣದ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದರು.

ನಗರಸಭಾ ಮಾಜಿ ಅಧ್ಯಕ್ಷ ಎಸ್.ನಂಜುಂಡಸ್ವಾಮಿ ಮಾತನಾಡಿ, ಈ ಬಾರಿಯ ಚುನಾವಣೆಯಲ್ಲಿ ವಿಪಕ್ಷದವರು ಹರಿಸಿದ ಹಣದ ಹೊಳೆ ನಡುವೆಯೂ ಕ್ಷೇತ್ರದ ಮತ ದಾರರು ಶಾಸಕ ಸಿ.ಪುಟ್ಟರಂಗಶೆಟ್ಟಿರಿಗೆ ಅಭೂತಪೂರ್ವ ಗೆಲುವು ತಂದುಕೊಡುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ. ಮತದಾರರ ಬಯಕೆಯಂತೆ ಶಾಸಕರು ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸ ಮಾಡಲಿದ್ದಾರೆ ಎಂದರು.

ಮುಸ್ಲಿಂ ಧರ್ಮಗುರು ಡಾ.ಜಹೀರ್ ಅಹಮದ್ ಮಾತನಾಡಿ, ಪುಟ್ಟರಂಗಶೆಟ್ಟರು ಕ್ಷೇತ್ರದಲ್ಲಿ ನಾಲ್ಕು ಬಾರಿ ಗೆಲುವು ಸಾಧಿಸಿ ಶಾಸಕರಾಗಿದ್ದಾರೆ. ತಮ್ಮ ಅಧಿಕಾರವಧಿಯಲ್ಲಿ ಜಿಲ್ಲೆಯಲ್ಲಿ ಮೆಡಿಕಲ್, ಕಾನೂನು ಕಾಲೇಜು ಸೇರಿದಂತೆ ಇನ್ನಿತರ ಅಭಿವೃದ್ಧಿ ಕೆಲಸ ಮಾಡಿದ್ದೀರಿ. ಅದಕ್ಕಾಗಿ ಜಿಲ್ಲೆ ಜನತೆ ಹಾಗೂ ಮುಸ್ಲಿಂ ಸಮುದಾಯ ವತಿಯಿಂದ ಅಭಿನಂದನೆ ಸಲ್ಲಿಸುತ್ತೇನೆ. ಮುಂದೆಯೂ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುವಂತೆ ತಿಳಿಸಿದ ಅವರು, ಗಾಳಿಪುರ ಬಡಾವಣೆ ನಿವಾಸಿಗಳು ಒಳಚರಂಡಿ ಸೇರಿದಂತೆ ಮೂಲ ಸೌಕರ್ಯಗಳಿಲ್ಲದೇ ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಹೀಗಾಗಿ ಮೂಲ ಸೌಕರ್ಯ ಕಲ್ಪಿಸುವಂತೆ ಶಾಸಕರಿಗೆ ಮನವಿ ಮಾಡಿದರು.

ಗಣಿ ಉದ್ಯಮಿ ಫೈಸಲ್ ಷರೀಫ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಸ್ಲಿಂ ಧರ್ಮ ಗುರುಗಳಾದ ಕಾಮಿಲ್ ನಹೀಂ ಮುಲ್ಲಾ ಹಕ್, ಲತೀಫ್ ಪುರ್ ರೆಹಮಾನ್, ಮುಫ್ತಿಜಾಫರ್ ಹುಸೇನ್, ಜಿಪಂ ಮಾಜಿ ಸದಸ್ಯ ಎಸ್.ಸೋಮನಾಯಕ, ಕನಿಷ್ಠ ವೇತನಾ ಸಲಹಾ ಸಮಿತಿ ಮಾಜಿ ಅಧ್ಯಕ್ಷ ಉಮೇಶ್, ಮರಿಸ್ವಾಮಿಶೆಟ್ಟಿ, ಮಾಜಿ ಚೂಡಾಧ್ಯಕ್ಷ ಇರ್ಷಾದುಲ್ಲಾ, ಸೈಯದ್ ಅಮಾನುಲ್ಲಾ ರಜ್ಜಿಯಾ ಮಿಲ್ಸ್, ಗಣಿ ಉದ್ಯಮಿಗಳಾದ ಸೈಯದ್ ಹಸ್ಮತ್ ಉಲ್ಲಾ, ಸೈಯದ್ ಜುಬೇರ್ ಉಲ್ಲಾ, ಸೈಯದ್ ಇಮ್ರಾನ್, ಸೀಸ್ ಅಹಮದ್, ಎಸ್.ಎಂ.ಫಾಹದ್, ಸೈಯದ್ ಮುಜಾಮಿಲ್, ಗುರುಸ್ವಾಮಿ ಇತರರಿದ್ದರು.

ಗುರುಮಲ್ಲಪ್ಪ ನಿಧನ



ಚಾಮರಾಜನಗರ, ಜೂ.18– ತಾಲೂಕಿನ ಬದನಗುಪ್ಪೆ ಗ್ರಾಮದ ಗುರುಮಲ್ಲಪ್ಪ(78) ಭಾನುವಾರ ನಿಧನರಾದರು. ಮೃತರು ಪತ್ನಿ, ಪುತ್ರಿ, ಅಳಿಯ ಬಸವೇಶ್ವರ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ರಾಜ್ಯ ಲೆಕ್ಕಪತ್ರ ಇಲಾಖೆ ರಾಮಸಮುದ್ರ ಶಿವಕುಮಾರಸ್ವಾಮಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಬದನಗುಪ್ಪೆಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಒಂದನೇ ಪುಟದಿಂದ

ಹರಿದು ಬಂದ ಭಕ್ತ ಸಾಗರ

ಕಪಿಲಾ ನದಿಯಲ್ಲಿ ಮಿಂದ ಭಕ್ತರು ನಂತರ ದರ್ಶನ ಪಡೆಯಲು ಹಾತೊರೆಯುತ್ತಿದ್ದರು.

ನಿಮಿಷಾಂಬ ದೇವಿ: ಶ್ರೀರಂಗಪಟ್ಟಣದ ನಿಮಿಷಾಂಬ ದೇಗುಲದಲ್ಲೂ ಭಕ್ತರ ದಂಡು ಹೆಚ್ಚಾಗಿತ್ತು. ಶಕ್ತಿ ದೇವತೆಯಲ್ಲಿ ನಿಮಿಷಾಂಬ ದೇವಿಯೂ ಒಂದಾಗಿರುವುದರಿಂದ ನಿಮಿಷಾಂಬದೇವಿಯ ದರ್ಶನ ಪಡೆಯಲು ಮುಗಿ ಬಿದ್ದಿದ್ದರು.

ಆರತಿ ಉಕ್ಕಡ: ಪಾಂಡವಪುರ ತಾಲೂಕಿನ ಆರತಿ ಉಕ್ಕಡದಲ್ಲಿರುವ ಅಹಲ್ಯಾದೇವಿ ದೇವಾಲಯಕ್ಕೂ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪುನೀತರಾದರು. ಅಮಾವಾಸ್ಯೆ ದಿನದಂದು ಆರತಿ ಉಕ್ಕಡಕ್ಕೆ ಬಂದು ದೇವಿಗೆ ಪೂಜೆ ಸಲ್ಲಿಸಿ ತಡೆ (ಕಟ್ಟು ಒಡೆಯುವುದು) ಒಡೆಸಿದರೆ ಮಾಟ-ಮಂತ್ರದ ದುಷ್ಪರಿಣಾಮದಿಂದ ಪಾರಾಗಬಹುದು ಎಂಬ ನಂಬಿಕೆ ಇರುವುದರಿಂದ ರಾಜ್ಯದ ವಿವಿಧೆಡೆಯಿಂದ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಗೃಹಜ್ಯೋತಿ ಆರಂಭ

ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಅರ್ಜಿ ಸಲ್ಲಿಸಲು ಆಧಾರ್ ಕಾರ್ಡ್, ಆರ್‌ಆರ್ ನಂಬರ್, ಮೊಬೈಲ್ ಸಂಖ್ಯೆ ಅವಶ್ಯಕತೆ ಇದೆ. ಇನ್ನು ಬಾಡಿಗೆದಾರರಾಗಿದ್ದರೆ, ಮನೆ ಬಾಡಿಗೆ ಕರಾರು ಪತ್ರ ನೀಡಿ ಅರ್ಜಿ ಸಲ್ಲಿಸಬಹುದು. ಸಮಸ್ಯೆ ಇದ್ದರೆ ಮಾಹಿತಿಗಾಗಿ 1912 ಸಹಾಯವಾಣಿ ಸಂಖ್ಯೆಗೆ ಕಾಲ್ ಮಾಡಿ ಮಾಹಿತಿ ಪಡೆಯಬಹುದು.

ಗೊಂದಲಕ್ಕೆ ತೆರೆ: ಅಪಾರ್ಮೆಂಟ್ ನಿವಾಸಿಗಳಿಗೆ 200 ಯೂನಿಟ್ ಉಚಿತ ವಿದ್ಯುತ್ ಸೌಲಭ್ಯ ಸಿಗುತ್ತದೆಯೋ ಇಲ್ಲವೋ ಎಂಬ ಗೊಂದಲವಿತ್ತು. ಅಲ್ಲದೇ ಇನ್ನೂ ಅನೇಕ ಗೊಂದಲಗಳು ವಿದ್ಯುತ್ ಬಳಕೆ ಗ್ರಾಹಕರಲ್ಲಿ ಇದ್ದವು. ಆ ಗೊಂದಲಗಳಿಗೆ ರಾಜ್ಯ ಸರ್ಕಾರ ಸ್ಪಷ್ಟೀಕರಣ ನೀಡಿದೆ.

ಸರ್ಕಾರದ ಸ್ಪಷ್ಟೀಕರಣ: Multi Stored Apartmentಗಳಿಗೆ ಈ ಯೋಜನೆ ಅನ್ವಯಿಸುತ್ತದೆಯೆ ಎಂಬ ಅಂಶಗಳಿಗೆ ಸರ್ಕಾರವು, ಯಾವ ಮನೆಗಳಿಗೆ ಪ್ರತ್ಯೇಕ ಮೀಟರ್ ಇದೆಯೋ ಹಾಗೂ ಮೀಟರ್ ರೀಡಿಂಗ್ ಮಾಡಲಾಗುತ್ತಿದೆಯೋ ಅಂತಹ ಎಲ್ಲಾ ಮನೆಗಳಿಗೆ ಈ ಯೋಜನೆ ಅನ್ವಯಿಸುತ್ತದೆ ಎಂದಿದೆ. ಸರ್ಕಾರದ ಆದೇಶದ ನಂತರ ಹೊಸದಾಗಿ ಗೃಹಬಳಕೆಗಾಗಿ ವಿದ್ಯುತ್ ಸಂಪರ್ಕ ಪಡೆದ ಗ್ರಾಹಕರಿಗೆ, ಗೃಹ ಜ್ಯೋತಿ ಯೋಜನೆ ಅನ್ವಯಿಸಲಿದೆಯೇ ಎಂಬ ಪ್ರಶ್ನೆಗೆ, ಹೊಸ ಸಂಪರ್ಕ ಪಡೆದ ಗ್ರಾಹಕರಿಗೆ ಬಳಕೆ ಎಷ್ಟು ಮಾಡಲಾಗಿದೆ ಎಂದು ಗೊತ್ತಿಲ್ಲದಿರುವುದರಿಂದ ಗೃಹ ಬಳಕೆದಾರರ ಸರಾಸರಿ ಬಳಕೆಯು ಮಾಸಿಕ 53 ಯೂನಿಟ್‌ಗಳಾಗಿರುವುದರಿಂದ 53 ಯೂನಿಟ್‌ಗಳನ್ನೆ ನಿರ್ಧರಿಸಿ, ಈ ಯೋಜನೆಯ ಸೌಲಭ್ಯವನ್ನು ವಿಸ್ತರಿಸುವಂತೆ ಸೂಚಿಸಿದೆ. ಈ ಯೋಜನೆಯು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವ ವಿದ್ಯುತ್ ಬಳಕೆದಾರರಿಗೂ ಅನ್ವಯಿಸುವುದೇ ಎಂಬ ಪ್ರಶ್ನೆಗೂ ಉತ್ತರಿಸಿದ್ದು, ಗೃಹ ವಿದ್ಯುತ್ ಬಳಕೆದಾರರು ಬಾಡಿಗೆದಾರರಾಗಿದ್ದಲ್ಲಿ, ವಾಸದ ಮನೆಯ ವಿಳಾಸಕ್ಕೆ ಸಂಬಂಧಿಸಿದಂತೆ ಆಧಾರ್ ಸಂಖ್ಯೆಯನ್ನು ಸೇವಾ ಸಿಂಧು ಪೋರ್ಟಲ್‌ನಲ್ಲಿ ಜೋಡಣೆ ಮಾಡಿ, ನೋಂದಾಯಿಸುವ ಮೂಲಕ ಸೌಲಭ್ಯವನ್ನು ಪಡೆಯುವಂತೆ ತಿಳಿಸಿದೆ. ಗೃಹ ಬಳಕೆದಾರರು ಯಾವುದಾದರೂ ತಿಂಗಳಲ್ಲಿ ಮಾತ್ರ 200 ಯೂನಿಟ್ ಮಿತಿ ದಾಟಿದರೂ, ಸದರಿ ಯೋಜನೆಯಲ್ಲಿ ಮುಂದುವರೆಯುವರೆ ಎಂಬುದಕ್ಕೆ ಸರ್ಕಾರ ಸ್ಪಷ್ಟೀಕರಣ ನೀಡಿದ್ದು, 200 ಯೂನಿಟ್‌ಗಳ ಬಳಕೆಯ ಮಿತಿಯನ್ನು ಯಾವುದಾದರೂ ತಿಂಗಳಲ್ಲಿ ಮೀರಿದಲ್ಲಿ, ಆ ತಿಂಗಳ ಪೂರ್ಣ ವಿದ್ಯುತ್ ಬಿಲ್ಲನ್ನು ಪಾವತಿಸಬೇಕು ಎಂದಿದೆ.

ಆರಂಭಿಕ ವಿಘ್ನ

ಲ್ಯಾಪ್‌ಟಾಪ್ ಹಾಗೂ ಕಂಪ್ಯೂಟರ್‌ಗಳಲ್ಲಿ ಸೇವಾ ಸಿಂಧು ಪೋರ್ಟಲ್‌ನಲ್ಲಿ ಹೆಸರು ನೊಂದಣಿ ಮಾಡಿಕೊಳ್ಳಬಹುದು. ಹೆಸರು ನೋಂದಣಿಗೆ ಒಬ್ಬರಿಗೆ 20 ರೂಪಾಯಿ ಸರ್ವಿಸ್ ಚಾರ್ಜ್ ನಿಗದಿ ಮಾಡಲಾಗಿದೆ. ಆದರೆ ಸೇವಾ ಸಿಂಧು ಪೋರ್ಟಲ್ ಓಪನ್ ಆಗಲೇ ಇಲ್ಲ. ಮೈಸೂರು ಒನ್, ಕರ್ನಾಟಕ ಒನ್ ಸೇರಿದಂತೆ ಸರ್ಕಾರದ ಹಲವು ಸೇವಾ ಕೇಂದ್ರಗಳಲ್ಲಿ ನೊಂದಣಿಗೆ ಎಲ್ಲಾ ತಯಾರಿ ಮಾಡಿಕೊಂಡಿದ್ದರೂ ಪೋರ್ಟಲ್ ಮಾತ್ರ ಓಪನ್ ಆಗಲಿಲ್ಲ. ಸರ್ವರ್ ಡೌನ್ ಆಗಿದ್ದ ಕಾರಣ ಸೇವಾ ಸಿಂಧು ಪೋರ್ಟಲ್ ಓಪನ್ ಆಗುತ್ತಿಲ್ಲ ಎಂದು ಸಿಬ್ಬಂದಿ ಕೈ ಚೆಲ್ಲಿ ಕುಳಿತರು. ಮೊದಲ ದಿನವೇ ಹೆಸರು ನೊಂದಣಿ ಮಾಡಿಕೊಳ್ಳಲು ಜನರೇನೊ ಸರ್ಕಾರದ ಸೇವಾ ಕೇಂದ್ರಗಳಿಗೆ ಬಂದಿದ್ದರು. ಆದರೆ ಪೋರ್ಟಲ್ ಓಪನ್ ಆಗದ ಕಾರಣ ನಿರಾಸೆಯಿಂದ ವಾಪಾಸಾದರು. ಮೈಸೂರಿನ ನ್ಯೂ ಶೇಷಾದ್ರಿ ಅಯ್ಯರ್ ರೋಡ್, ನಜರ್ ಬಾದ್, ಸಿದ್ಧಾರ್ಥನಗರ, ಜಯನಗರ, ಗೋಕುಲಂ, ರಾಮಕೃಷ್ಣ ನಗರ ಸೇರಿದಂತೆ ಮೈಸೂರಿನಲ್ಲಿ 6 ಕಡೆ ಮೈಸೂರು ಒನ್ ಹಾಗೂ ಕರ್ನಾಟಕ ಒನ್ ಸೆಂಟರ್ ಇದೆ. ಇದರ ಜೊತೆಗೆ 10 ಪ್ರಾಂಚೈಸಿ ಸೆಂಟರ್‌ಗಳಿವೆ. ಇನ್ನು ಮೈಸೂರು ಜಿಲ್ಲೆಯಲ್ಲಿ 30 ಸೆಂಟರ್ ಇದೆ. ಸೇವಾ ಸಿಂಧು ಪೋರ್ಟಲ್‌ನಲ್ಲಿ ಗ್ರಾಹಕರ ಹೆಸರು ನಮೂದಿಸಲು 3 ಡೆಸ್ಕ್ ತೆರೆಯಲಾಗಿದೆ. ಆದರೆ ಇಲ್ಲಿಗೆ ಬರುವ ಜನರಿಗೆ ಇಷ್ಟು ಸಿಬ್ಬಂದಿ ಹಾಗೂ ಡೆಸ್ಕ್ ಸಾಕಾಗುವುದಿಲ್ಲ ಎಂದು ಮೈಸೂರು ಒನ್ ಸಿಬ್ಬಂದಿ ಗೋಳು ತೋಡಿಕೊಂಡಿದ್ದಾರೆ.

ಆಧಾರ್ ನಂಬರ್, ಆರ್.ಆರ್.ನಂಬರ್ ನಮೂದಿಸಿದರೆ ಮೊಬೈಲ್‌ಗೆ ಓಟಿಪಿ ಬರುತ್ತದೆ. ಓಟಿಪಿ ನಂಬರ್ ನಮೂದಿಸಿದ ಕೇವಲ 2 ನಿಮಿಷದಲ್ಲಿ ಹೆಸರು ನೋಂದಣಿ ಆಗಲಿದೆ. ಸರ್ವರ್ ಡೌನ್ ಆಗಿರುವ ಸಮಸ್ಯೆ ಇಂದು ಸರಿಯಾದರೆ ನಾಳೆಯಿಂದ ಹೆಸರು ನೋಂದಣಿ ಮಾಡಿಕೊಳ್ಳುವವರ ಸಂಖ್ಯೆ ಬಾರೀ ಪ್ರಮಾಣದಲ್ಲಿ ಹೆಚ್ಚಾಗಲಿದೆ. ಒಟ್ಟಾರೆ ಶಕ್ತಿ ಯೋಜನೆಯಲ್ಲಿ ಬಸ್ ಹತ್ತಲು ಹೇಗೆ ನೂಕು-ನುಗ್ಗಲು ಉಂಟಾಗುತ್ತಿದೆಯೋ ಹಾಗೆ ಇಲ್ಲೂ ನೂಕು-ನುಗ್ಗಲು ಉಂಟಾಗುವುದರಲ್ಲಿ ಸಂದೇಹವಿಲ್ಲ.

ಅನ್ನಭಾಗ್ಯಕ್ಕೆ ಅಕ್ಕಿ ತರಲಿ

ಎಂದು ಪ್ರಶ್ನಿಸಿದರು. ಆಂಧ್ರ, ತೆಲಂಗಾಣ ರಾಜ್ಯಗಳ ಜೊತೆಗೂ ಮಾತನಾಡುತ್ತಿದ್ದೇವೆ. ಛತ್ತೀಸ್‌ಗಡದವರು ಮಾತ್ರ 2.28 ಲಕ್ಷ ಮೆಟ್ರಿಕ್ ಟನ್ ಅಲ್ಲ, 1.5 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಅದರ ದರವೂ ಹೆಚ್ಚು ಎಂದು ಮಾಹಿತಿ ನೀಡಿದರು. ರಾಯಚೂರಿನಲ್ಲಿ ಸೋನ ಮಸೂರಿ ಅಕ್ಕಿ ಇದೆ. ಅದರ ದರ ರೂ. 55. ಆಹಾರ ನಿಗಮದಿಂದ ಅಕ್ಕಿ ಖರೀದಿಸಿದರೆ ಅಕ್ಕಿ ದರ ರೂ. 34, ಸಾಗಾಟ ವೆಚ್ಚ ರೂ. 2.60 ಸೇರಿ ರೂ. 36.60ಕ್ಕೆ ಅಕ್ಕಿ ಸಿಗುತ್ತಿತ್ತು. ಈಗ 5 ಕೆ.ಜಿ. ಅಕ್ಕಿ ನೀಡುತ್ತಿರುವುದೂ ಅದೇ ದರದಲ್ಲಿ. ರೂ. 55 ನೀಡಿ ಖರೀದಿ ಮಾಡಲು ಆಗುವುದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಿದ್ಯುತ್ ದರ: 2 ತಿಂಗಳ ಹೆಚ್ಚುವರಿ ದರ ಸೇರಿ ಒಂದೇ ಬಿಲ್ ಬಂದಿದ್ದರಿಂದ ಈ ತಿಂಗಳು ಭಾರಿ ಹೆಚ್ಚಳ ಕಂಡಿದೆ. ಮುಂದಿನ ತಿಂಗಳಿನಿಂದ ಒಂದೇ ತಿಂಗಳ ಬಿಲ್ ಬರುವುದರಿಂದ ಎಲ್ಲ ಸರಿಯಾಗಲಿದೆ. ಪ್ರತಿಭಟನೆ ನಡೆಸಲು ತೀರ್ಮಾನಿಸಿರುವ ಎಫ್‌ಕೆಸಿಸಿಯವರ ಜತೆಗೆ ಇಂಧನ ಸಚಿವರು ಮಾತನಾಡಿ ಮನವೊಲಿಸಲಿದ್ದಾರೆ ಎಂದರು.

ಅಕ್ಕಿ ಕೊಡದಿದ್ದರೆ ಪ್ರತಿಭಟನೆ

ಒಂದು ವೇಳೆ ಜುಲೈ ಒಂದನೇ ತಾರೀಖಿಗೆ ಅಕ್ಕಿ ಕೊಡದೆ ಹೋದರೆ, ನಾವು ಪ್ರತಿಭಟನೆ ಮಾಡುತ್ತೇವೆ ಎಂದರು. ಎಲ್ಲಕ್ಕಿಂತ ಮುಖ್ಯವಾಗಿ ಕಳೆದ ವಾರ ನಾನು ಸಿಎಂ ಗಮನಕ್ಕೆ ತಂದಿದ್ದೇನೆ. ರಾಜ್ಯದಲ್ಲಿ ಬರಗಾಲ ಇದೆ. 500 ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದೆ. ಸರ್ಕಾರ ಇದನ್ನು ಗಂಬೀರವಾಗಿ ಪರಿಗಣಿಸುತ್ತಿಲ್ಲ. ಕೇವಲ ವಿಡಿಯೋ ಕಾನ್ಫರೆನ್ಸ್ ಮಾಡಿ ಸುಮ್ಮನಾಗಿದೆ. ಬರಗಾಲ ಇದ್ದ ಕಡೆ ಟಾಸ್ಕ್‌ಫೋರ್ಸ್ ರಚನೆ ಮಾಡಬೇಕು ಎಂದು ತಿಳಿಸಿದರು. ಗ್ಯಾರಂಟಿ ಭ್ರಮೆ ಹುಟ್ಟಿಸಿದ್ದು ನೋಡಿದರೆ, ಸರಕಾರದ ಜನ ಪ್ರೀಯತೆ ಬಹಳ ದಿನ ಉಳಿಯಲ್ಲ. ನೀರು ಕೊಡದ ಸರಕಾರ ತಗೆದುಕೊಂಡು ಏನು ಮಾಡಬೇಕು ಎಂದರು.ಇನ್ನು, ಇದೇ ವೇಳೆ ಅಧಿವೇಶನಕ್ಕೂ ಮುಂಚೆ ವಿಪಕ್ಷ ನಾಯಕನ ಆಯ್ಕೆ ಆಗುತ್ತದೆ ಎಂದರು.

ಸಂಸದ ಡಿ.ಕೆ.ಸುರೇಶ್ ನಿವೃತ್ತಿ?

ಕೆಲಸ ಮಾಡುತ್ತೇನೆ. ಪಕ್ಷ ಸಂಘಟನೆ ಒಂದು ಭಾಗ. ಚುನಾವಣಾ ಸ್ಪರ್ಧೆ ಮಾಡಿ ಗೆಲ್ಲುವುದು ಇನ್ನೊಂದು ಭಾಗ. ನನಗೆ ಕೆಲಸ ಮಾಡಿರುವ ಬಗ್ಗೆ ತೃಪ್ತಿಯಿದೆ. ಸಾಕಷ್ಟು ಜನ ನಾಯಕರು ಇದ್ದಾರೆ, ಪಕ್ಷ ಸಂಘಟನೆ ಮಾಡಿರುವ ಹಿರಿಯರು ಇದ್ದಾರೆ. ಅವರಿಗೆ ಅವಕಾಶ ಸಿಗಬೇಕು. ನನಗೆ ಬೇಸರವಿಲ್ಲ, ಕ್ಷೇತ್ರದ ಜನರ ಜೊತೆ ಖುಷಿಯಿಂದ ಕೆಲಸ ಮಾಡುತ್ತಿದ್ದೇನೆ. ವೈರಾಗ್ಯ ಎನ್ನುವುದು ನನಗೆ ಬಂದಿಲ್ಲ ಎಂದರು.


ಪಕ್ಷ ಅಧಿಕಾರಕ್ಕೆ ಬರಲು ನಮ್ಮ ಶ್ರಮವಿಲ್ಲ. ಅಧಿಕಾರದಲ್ಲಿರುವವರ ಶ್ರಮವಿದೆ. ಎಲ್ಲಾ ಸಚಿವರು, ಶಾಸಕರ ಶ್ರಮವಿದೆ. ನೆಮ್ಮದಿಯಾಗಿ ಎಂಜಾಯ್ ಮಾಡಲಿ. ನನಗೆ ರೆಸ್ಟ್ ಬೇಕು, ರಾಜಕೀಯ ಗೊಂದಲಾಟವಿದೆ. ರಾಜಕೀಯ ಸರಿ ಎನ್ನಿಸುವುದಿಲ್ಲ, ಪಕ್ಕಾ ರಾಜಕಾರಣಿಗೆ ಸೆಟ್ ಆಗಲಿದೆ. ರಾಜಕಾರಣಿಗಳ ಬಗ್ಗೆ ಜನರಲ್ಲೂ ಮರ್ಯಾದೆ ಇಲ್ಲ. ಒಳಗಡೆಯೂ ಮರ್ಯಾದೆ ಇಲ್ಲ. ಇಲ್ಲಿ ಕೆಲಸ ಮಾಡಲು ನೆಮ್ಮದಿಯಿಲ್ಲ ಎಂದು ರಾಜಕಾರಣವೇ ಬೇಡ ಎಂಬ ಅರ್ಥದಲ್ಲಿ ಹೇಳಿದರು.

ನಿವೃತ್ತಿ ಮಾತನಾಡುತ್ತಿದ್ದಾರೆ

ಸಿದ್ದರಾಮಯ್ಯ ಪವರ್‌ಫುಲ್. ಯಾವ ಕಾರಣಕ್ಕೂ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಲ್ಲ. ಈ ಬೇಸರದಿಂದಾಗಿಯೇ ಡಿ.ಕೆ.ಸುರೇಶ್ ರಾಜಕೀಯ ನಿವೃತ್ತಿ ಮಾತನಾಡುತ್ತಿದ್ದಾರೆ ಎಂದು ಮಾಜಿ ಸಚಿವರು ಹೇಳಿದ್ದಾರೆ. ಡಿ.ಕೆ.ಶಿವಕುಮಾರ್ ಅವರದ್ದು ಸಿಎಂ ಆಗುವುದು ಕೇವಲ ಕನಸಷ್ಟೇ. ಡಿ.ಕೆ. ಶಿವಕುಮಾರ್‌ಗೆ ಅಧಿಕಾರ ತಪ್ಪಿದ್ದಕ್ಕೆ ಡಿ.ಕೆ.ಸುರೇಶ್‌ಗೆ ಬೇಸರವಾಗಿದೆ. ಅಣ್ಣ ಸಿಎಂ ಆಗಲ್ಲ ಎಂಬುದೂ ಗೊತ್ತಾಗಿದೆ. ಹಾಗಾಗಿ ಅವರು ನಿವೃತ್ತಿ ಮಾತುಗಳನ್ನಾಡುತ್ತಿದ್ದಾರೆ. ರಾಜಕೀಯದಿಂದ ದೂರ ಉಳಿಯುವುದಾಗಿ ಹೇಳುತ್ತಿದ್ದಾರೆ ಎಂದು ಆರ್.ಅಶೋಕ್ ಹೊಸ ಬಾಂಬ್ ಸಿಡಿಸಿದ್ದಾರೆ.

ಯೋಗ ದಿನಾಚರಣೆ: ಯೋಗಪಟುಗಳಿಂದ ತಾಲೀಮು

● ಅರಮನೆ ಆವರಣದಲ್ಲಿ ಜೂ.21ರಂದು ಯೋಗ ದಿನಾಚರಣೆ ● ತಾಲೀಮಿನಲ್ಲಿ ವಿವಿಧ ಯೋಗ ಶಾಲೆಗಳ ವಿದ್ಯಾರ್ಥಿಗಳು ಭಾಗಿ





ಮೈಸೂರು, ಜೂ.18(ಎಂಟಿವೈ)- ಮೈಸೂರು ಅರಮನೆಯ ಆವರಣದಲ್ಲಿ ಭಾನುವಾರ ನಡೆದ ಅಂತರರಾಷ್ಟ್ರೀಯ ಯೋಗ ದಿನದ ತಾಲೀಮಿನಲ್ಲಿ ವಿವಿಧ ಯೋಗ ಶಾಲೆಗಳ ನೂರಾರು ಮಂದಿ ಯೋಗಪಟುಗಳು ಪಾಲ್ಗೊಂಡು ಯೋಗ ಪ್ರದರ್ಶನ ಮಾಡಿದರು.

ಜೂ.21ರಂದು ಆಚರಿಸುತ್ತಿರುವ ಅಂತರರಾಷ್ಟ್ರೀಯ ಯೋಗ ದಿನಕ್ಕೆ ಮೈಸೂರಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಜಿಲ್ಲಾಡಳಿತ, ಆಯುಷ್ ಇಲಾಖೆ ಹಾಗೂ ಯೋಗ ಫೆಡರೇಷನ್ ಸಂಯುಕ್ತಾಶ್ರಯದಲ್ಲಿ ಬೃಹತ್ ಯೋಗ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ಈಗಾಗಲೇ ಮೈಸೂರಲ್ಲಿರುವ 500ಕ್ಕೂ ಹೆಚ್ಚು ಯೋಗ ಶಾಲೆಗಳ ಯೋಗಪಟುಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ವಿವಿಧ ಕಂಪನಿಗಳು ಸಿಬ್ಬಂದಿಗಳು ಸೇರಿದಂತೆ 10ರಿಂದ 15 ಸಾವಿರ ಯೋಗಪಟುಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಅಂತರರಾಷ್ಟ್ರೀಯ ಯೋಗ ದಿನವನ್ನು ಯಶಸ್ವಿಯಾಗಿ ನಡೆಸುವ ನಿಟ್ಟಿನಲ್ಲಿ ಈಗಾಗಲೇ ವಿವಿಧ ಶಾಲಾ-ಕಾಲೇಜಿನಲ್ಲಿ ಯೋಗ ಪ್ರದರ್ಶನ ನಡೆಸಲಾಗಿದೆ. ಅಲ್ಲದೆ, ಯೋಗ ದಿನದಲ್ಲಿ ನಡೆಯುವಂತೆ ವಿವಿಧ ಆಸನಗಳನ್ನು ಪ್ರದರ್ಶಿಸಿದರು. ಬೆಳಗ್ಗೆ 6.30ಕ್ಕೆ ಆರಂಭವಾದ ತಾಲೀಮು 7.20ರವರೆಗೂ ನಡೆಯಿತು. ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ ಯೋಗಪಟುಗಳಿಗೆ ತರಬೇತುದಾರರು ಯೋಗಾಸನ ಪ್ರದರ್ಶನದ ಬಗ್ಗೆ ಮಾಹಿತಿ ನೀಡುತ್ತಿದ್ದರು. ಯೋಗ ದಿನದ ತಾಲೀಮಿನಲ್ಲಿ ಮೈಸೂರಿನ ವಿವಿಧ ಯೋಗ ಶಾಲೆಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಜೂ.21ರಂದು ಬೆಳಗ್ಗೆ 6.30ರಿಂದ 7 ಗಂಟೆವರೆಗೆ ಯೋಗ ದಿನದ ಸಭಾ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ಶ್ರೀವತ್ಸ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾ ಆಯುಷ್ ಅಧಿಕಾರಿ ಪುಷ್ಪ ಸೇರಿದಂತೆ ಹಲವರು ಪಾಲ್ಗೊಳ್ಳಲಿದ್ದಾರೆ ಸಭಾ ಕಾರ್ಯಕ್ರಮ ಮುಗಿದ ನಂತರ ಬೆಳಗ್ಗೆ 7ರಿಂದ 7.45ರವರೆಗೆ ಯೋಗ ಪ್ರದರ್ಶನ ಆರಂಭವಾಗಲಿದೆ.

ತಾಲೀಮಿನ ಪ್ರದರ್ಶನವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಆರೋಗ್ಯವಂತರಾಗಲು ಯೋಗಾಭ್ಯಾಸ ಮಾಡಬೇಕು. ಯೋಗ ಮಾಡುವುದರಿಂದ ಖರ್ಚಿಲ್ಲದೆ ಆರೋಗ್ಯ ಕಾಪಾಡಿಕೊಳ್ಳಬಹುದು. ಭಾರತೀಯರು ಕಂಡು ಹಿಡಿದ ಯೋಗವನ್ನು ಇದೀಗ ವಿದೇಶಿಗರು ಅನುಸರಿಸುತ್ತಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಯೋಗ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಜೂ.21ರಂದು ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸುವ ಮೂಲಕ ಯೋಗವನ್ನು ವಿಶ್ವಮಟ್ಟದಲ್ಲಿ ಇನ್ನಷ್ಟು ಪ್ರಖ್ಯಾತಗೊಳಿಸಲಾಗುತ್ತಿದೆ. ಮೈಸೂರಲ್ಲೂ ಅಂತರರಾಷ್ಟ್ರೀಯ ಯೋಗ ದಿನದ ಯಶಸ್ಸಿಗೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪಾ, ಯೋಗ ಒಕ್ಕೂಟದ ಪದಾಧಿಕಾರಿಗಳು, ಯೋಗ ಸಂಸ್ಥೆಗಳ ಮುಖ್ಯಸ್ಥರು ಪಾಲ್ಗೊಂಡಿದ್ದರು.

'ಕೊಡವರ ಸಾಂಸ್ಕೃತಿಕ ಲೋಕ' ಕೃತಿಗಳ ಲೋಕಾರ್ಪಣೆ



ಮೈಸೂರು, ಜೂ.18(ಜಿಎ)- ಮೈಸೂರಿನ ವಿಜಯನಗರದಲ್ಲಿರುವ ಕಸಾಪ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಯುಕ್ತ ಪ್ರಕಾಶನ ವತಿಯಿಂದ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರೊ.ಕೆ.ಬಿ.ವೆಂಕಟೇಶ್ ರಚಿಸಿರುವ 'ಮಕ್ಕಳಿಬ್ಬರ ದೃಷ್ಟಿಯಲ್ಲಿ ಕುವೆಂಪು', 'ನಾನು ರಸ್ತೆ ಬದಿಯ ಮರ' ಮತ್ತು ಪ್ರೊ.ಎಸ್.ಬಿ.ತೇಜ ಅವರು ರಚಿಸಿರುವ 'ಕೊಡವರ ಸಾಂಸ್ಕೃತಿಕ ಲೋಕ' ಕೃತಿಗಳನ್ನು ಹಿರಿಯ ಸಾಹಿತಿ ಹಾಗೂ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ರಾಮೇಗೌಡ ಬಿಡುಗಡೆಗೊಳಿಸಿದರು.

ನಂತರ ಮಾತನಾಡಿದ ಅವರು, 20ನೇ ಶತಮಾನದಲ್ಲಿ ಅದ್ದೂರಿಯಾಗಿದ್ದ ಪ್ರೇಮಗೀತೆ, ಕಾವ್ಯಗಳ ರಚನೆ ಇತ್ತೀಚಿನ ದಿನಗಳಲ್ಲಿ ವಿರಳವಾಗುತ್ತಿದೆ. ಆಗ ಸಾಕಷ್ಟು ಕವಿಗಳು, ಕವಿಯತ್ರಿಯರು ಪ್ರೇಮ ಕಾವ್ಯಗಳ ರಚನೆಯಲ್ಲಿ ತೊಡಗುತ್ತಿದ್ದರು. ಆದರೆ, ಇಂದಿನ ಯುವ ಕವಿಗಳು ಈ ಬಗ್ಗೆ ಚಿಂತಿಸುತ್ತಿಲ್ಲ. ಇಂತಹ ಸಂದರ್ಭದಲ್ಲಿ ವೆಂಕಟೇಶ್ ಅವರು ನವಿರಾಗಿ ಕುತೂಹಲ ಹುಟ್ಟಿಸುವ ರೀತಿಯಲ್ಲಿ ಕವನ ಸಂಕಲನ ರಚಿಸಿದ್ದಾರೆ ಎಂದು ಪ್ರಶಂಸಿಸಿದರು.

ಇನ್ನು ಕುವೆಂಪು ಅವರ ಮಕ್ಕಳಾದ ಪೂರ್ಣಚಂದ್ರ ತೇಜಸ್ವಿ ಹಾಗೂ ಧಾರಿಣಿ ಅವರು ಕುವೆಂಪು ಅವರ ಬಗ್ಗೆ ಹೊಂದಿದ್ದ ಸೂಕ್ಷ್ಮ ವಿವೇಚನೆಗಳನ್ನು ವಿಶ್ಲೇಷಿಸಿ, ಕುವೆಂಪು ಅವರ ಕೃತಿಗಳಲ್ಲಿ ಬರುವ ಲಯಗಳನ್ನು ಕಟ್ಟಿಕೊಡಲು ವೆಂಕಟೇಶ್ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಎಸ್.ಬಿ.ತೇಜ ಅವರು ರಚಿಸಿರುವ ಕೊಡವರ ಸಾಂಸ್ಕೃತಿಕ ಲೋಕ ಕೃತಿಯಲ್ಲಿ ಕೊಡವರ ಆಚಾರ, ವಿಚಾರ, ಪರಂಪರೆ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸಿದ್ದಾರೆ. ಇದು ಒಂದು ಉತ್ತಮ ಕೃತಿ ಎಂದರು.

ಕಾರ್ಯಕ್ರಮದಲ್ಲಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಮ.ರಾಮಕೃಷ್ಣ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ವಿದ್ಯಾಶ್ರಮ ಕಾಲೇಜಿನ ಪ್ರಾಂಶುಪಾಲರಾದ ಎ.ಎಂ.ಖುಷಿ, ಪ್ರಾಧ್ಯಾಪಕ ಬಿ.ಎಸ್.ಸುಬ್ರಹ್ಮಣ್ಯ, ಕವಿ ಸತೀಶ್ ಜವರೇಗೌಡ, ಪ್ರಕಾಶಕ ಓಂಕಾರಪ್ಪ, ಲೇಖಕರಾದ ಪ್ರೊ.ಕೆ.ಬಿ.ವೆಂಕಟೇಶ್, ಪ್ರೊ.ಎಸ್.ಬಿ.ತೇಜ ಮುಂತಾದವರು ಉಪಸ್ಥಿತರಿದ್ದರು.

ಒಂಟಿಕೊಪ್ಪಲಿನ ಉದ್ಯಮಿ ಮನೆಯಲ್ಲಿ ಕಳವು

● ಒಂದೇ ರಾತ್ರಿ ಹಲವು ಮನೆಗಳಲ್ಲಿ ಕಳವಿಗೆ ಯತ್ನ ● ಪ್ರತಿಷ್ಠಿತರು, ಶ್ರೀಮಂತರ ಮನೆಗಳನ್ನು ಗುರಿಯಾಗಿಸಿಕೊಂಡಿರುವ ಖದೀಮ

ಮೈಸೂರು, ಜೂ.18-ನಗರದ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ಒಂಟಿಕೊಪ್ಪಲಿನಲ್ಲಿ ಶುಕ್ರವಾರ ರಾತ್ರಿ ಖದೀಮನೋರ್ವ ಕೆಲವು ಪ್ರತಿಷ್ಠಿತರ ಮನೆಗೆ ನುಗ್ಗಿ ಕಳವು ಮಾಡಲು ಯತ್ನಿಸಿದ್ದು, ಉದ್ಯಮಿಯೊಬ್ಬರ ಮನೆಯಲ್ಲಿ ಎರಡು ವಾಚ್ ಮತ್ತು ಎರಡು ಸ್ಪೀಕರ್‌ಗಳನ್ನು ಕದ್ದಿದ್ದಾನೆ.



ಒಂಟಿಕೊಪ್ಪಲಿನ ಚೆಲುವಾಂಬ ಪಾರ್ಕ್ ಎದುರಿಗಿರುವ ಉದ್ಯಮಿ ಅರ್ಜುನ್ ರಂಗ ಅವರ ಮನೆ ಪ್ರವೇಶಿಸಿರುವ ಖದೀಮ, ರೂಂನಲ್ಲಿದ್ದ ವಾಚ್‌ಗಳು ಮತ್ತು ಸ್ಪೀಕರ್‌ಗಳನ್ನು ಕದ್ದಿದ್ದಾನೆ. ಅಲ್ಲದೇ ಅವರ ಮನೆ ಸಮೀಪದಲ್ಲೇ ಇರುವ ಖ್ಯಾತ ಪ್ಲಾಸ್ಟಿಕ್ ಸರ್ಜನ್ ತಜ್ಞರಾದ ಡಾ. ಜಯರಾಂ ಅವರ ಮನೆಯಲ್ಲೂ ಕಳವಿಗೆ ಪ್ರಯತ್ನಿಸಿದ್ದಾನೆ.

> ಈ ಸಂಬಂಧ ಅರ್ಜುನ್ ರಂಗ ಅವರು ಮಾತ್ರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ತಾವು ಅರ್ಜುನ್ ರಂಗ ಮತ್ತು ಡಾ. ಜಯರಾಂ ಅವರ ಮನೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದು ಸಿಸಿ ಕ್ಯಾಮರಾದಲ್ಲಿ ಖದೀಮನ ಚಲನವಲನಗಳು ಸೆರೆಯಾಗಿವೆ. ಶೀಘ್ರದಲ್ಲೇ ಆತನನ್ನು ಬಂಧಿಸಲಾಗುವುದು. ಈ ಪ್ರದೇಶದಲ್ಲಿ ರಾತ್ರಿ ಗಸ್ತು ಹೆಚ್ಚಿಸಲಾಗಿದೆ
> - **ಮೋಹನ್ ಕುಮಾರ್,**
> ವಿವಿ ಪುರಂ ಪೊಲೀಸ್ ಠಾಣೆ

ಈ ಭಾಗದಲ್ಲಿ ಪ್ರತಿಷ್ಠಿತರು ಹಾಗೂ ಶ್ರೀಮಂತರೇ ಹೆಚ್ಚಾಗಿದ್ದು, ಅವರ ಮನೆಗಳನ್ನು ಗುರಿಯಾಗಿಟ್ಟುಕೊಂಡು ಕಳವಿಗೆ ಪ್ರಯತ್ನ ಮಾಡಿರುವುದು ಕಂಡು ಬಂದಿದೆ. ಅದೇ ದಿನ ಇನ್ನೂ ಕೆಲವು ಮನೆಗಳಲ್ಲಿ ಕಳವು ಮಾಡಲು ಯತ್ನಿಸಿ, ಆ ಮನೆಗಳವರು ಅಚ್ಚುಕಟ್ಟಾಗಿ ಭದ್ರತಾ ವ್ಯವಸ್ಥೆ ಮಾಡಿಕೊಂಡಿದ್ದರಿಂದ ಕಳವು ಮಾಡುವವನು ವಿಫಲನಾಗಿದ್ದಾನೆ. ಕೆಲವು ಮನೆಗಳಲ್ಲಿ ಕಾವಲುಗಾರರನ್ನು ನೇಮಿಸಿಕೊಂಡಿದ್ದರೂ ಕೂಡ ಕಳವಿಗೆ ಪ್ರಯತ್ನಿಸಿರುವುದು ಆತಂಕವನ್ನುಂಟು ಮಾಡಿದೆ. ಈ ಕುರಿತು ಅರ್ಜುನ್ ರಂಗ ಠಾಣೆಯಲ್ಲಿ ದೂರು ದಾಖಲಿಸಿದ್ದರೆ, ಡಾ. ಜಯರಾಂ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಇದನ್ನು ಹೊರತುಪಡಿಸಿ ಬೇರೆ ಯಾರೂ ಪೊಲೀಸರಿಗೆ ಕಳುವು ಪ್ರಯತ್ನದ ಬಗ್ಗೆ ಮಾಹಿತಿ ನೀಡಿಲ್ಲ ಎಂದು ಹೇಳಲಾಗಿದೆ.

ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಮೈಸೂರು, ಜೂ.18(ಪಿಎಂ)- ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕಾರ್ಡುದಾರರಿಗೆ ಪಡಿತರ ವಿತರಿಸಲು ಕೇಂದ್ರ ಬಿಜೆಪಿ ಸರ್ಕಾರವು ಭಾರತೀಯ ಆಹಾರ ನಿಗಮದಲ್ಲಿ (ಎಫ್‌ಸಿಐ) ಅಕ್ಕಿ ಖರೀದಿಗೆ ಅವಕಾಶ ನಿರಾಕರಿಸುವ ಮೂಲಕ ದ್ವೇಷದ ರಾಜಕಾರಣ ನಡೆಸುತ್ತಿದೆ ಎಂದು ಆರೋಪಿಸಿ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಎಫ್‌ಟಿಎಸ್ ವೃತ್ತದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಸರ್ಕಾರದ ಅಧೀನದಲ್ಲಿರುವ ಎಫ್‌ಸಿಐ ಅಕ್ಕಿ ಕೊಡುವುದಕ್ಕೆ ಸಮ್ಮತಿಸಿ, ಇದೀಗ ನಿರಾಕರಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರದ ಅಧೀನದ ಎಫ್‌ಸಿಐಯಲ್ಲಿ 7 ಲಕ್ಷ ಟನ್ ಆಹಾರ ದಾಸ್ತಾನು ಇದ್ದರೂ ರಾಜ್ಯ ಕಾಂಗ್ರೆಸ್ ಸರ್ಕಾರವು ಅಕ್ಕಿ ಖರೀದಿಸಲು ಅವಕಾಶ ನೀಡುತ್ತಿಲ್ಲ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಬಡವರ ವಿರೋಧಿಯಾಗಿದೆ. ಕೇಂದ್ರ ಬಿಜೆಪಿ ಸರ್ಕಾರವು ಶ್ರೀಮಂತರ ಪರವಾಗಿದೆ ಎಂಬುದಕ್ಕೆ ಇದೇ ಸಾಕ್ಷಿ ಎಂದು ಆರೋಪಿಸಿದರು.

ರಾಜ್ಯದ ಬಿಜೆಪಿ ಸಂಸದರು ಒತ್ತಡ ಹೇರಿ ರಾಜ್ಯಕ್ಕೆ ಅಗತ್ಯವಿರುವ ಅಕ್ಕಿ ಪೂರೈಕೆಗೆ ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್, ಮುಖಂಡರಾದ ಮನೋಜ್, ಕಾರ್ತಿಕ್, ರಾಘವ್, ರಾಜಣ್ಣ, ಸುರೇಶ್ ಕುಮಾರ್, ಪ್ರವೀಣ್, ಪ್ರಕಾಶ್, ಸಿದ್ದರಾಜು ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪೇ ಅಂಡ್ ಪಾರ್ಕ್ ವಿರೋಧಿಸಿ ಸಹಿ ಸಂಗ್ರಹ

ಮೈಸೂರು, ಜೂ.18(ಜಿಎ)-ಮೈಸೂರಿನಲ್ಲಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆಯನ್ನು ವಿರೋಧಿಸಿ ಎಐಡಿಎಸ್‌ಓ ಸಂಘಟನೆ, ವರ್ತಕರು ಮತ್ತು ಗ್ರಾಹಕರ ಸಹಿ ಸಂಗ್ರಹಿಸಿತು. ಮೈಸೂರಿನ ಕೇಂದ್ರ ಭಾಗಗಳಲ್ಲಿ ವಾಹನ ದಟ್ಟಣೆ ನಿಯಂತ್ರಿಸುವ ನೆಪವೊಡ್ಡಿ ಪೇ ಅಂಡ್ ಪಾರ್ಕಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸುವ ಮೂಲಕ ಜನರನ್ನು ಸುಲಿಗೆ ಮಾಡುವ ಪಾಲಿಕೆ ನಿರ್ಧಾರವನ್ನು ಎಐಡಿಎಸ್‌ಓ ಸಂಘಟನೆಯು ಖಂಡಿಸಿ, ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ವರ್ತಕರು ಮತ್ತು ಗ್ರಾಹಕರ ಸಹಿ ಸಂಗ್ರಹ ಅಭಿಯಾನವನ್ನು ಆರಂಭಿಸಿತು.



ಈ ವೇಳೆ ಮೈಸೂರು ಜಿಲ್ಲಾ ಸಮಿತಿಯ ಅಧ್ಯಕ್ಷ ಟಿ.ಆರ್.ಸುನಿಲ್ ಮಾತನಾಡಿ, ನಗರದ ಮೂರು ಪ್ರಮುಖ ರಸ್ತೆಗಳಾದ ದೇವರಾಜ್ ಅರಸ್ ರಸ್ತೆ, ಸಯ್ಯಾಜಿರಾವ್ ರಸ್ತೆ ಮತ್ತು ಅಶೋಕ ರಸ್ತೆಗಳು ಮಾರುಕಟ್ಟೆಯ ಪ್ರಮುಖ ಕೇಂದ್ರವಾಗಿರುವುದರಿಂದ ವರ್ತಕರು ಮತ್ತು ಸಾವಿರಾರು ಗ್ರಾಹಕರು ನಗರದ ವಿವಿಧ ಬಡಾವಣೆಗಳು ಮತ್ತು ಹಳ್ಳಿಗಳಿಂದಲೂ ಬರುತ್ತಾರೆ. ಮೊದಲೇ ಬೆಲೆ ಏರಿಕೆಯಿಂದ ಹೈರಾಣಾದ ಜನಸಾಮಾನ್ಯರಿಗೆ ಪೇ ಅಂಡ್ ಪಾರ್ಕ್ ಬಹಳ ದೊಡ್ಡಮಟ್ಟದ ಹೊರೆಯಾಗಲಿದೆ. ಜನತೆಯ ಪ್ರತಿರೋಧದ ನಂತರ ಪಾಲಿಕೆಯು ಈ ನಿರ್ಧಾರವನ್ನು ತಡೆಹಿಡಿದಿದೆ ಆದರೆ ಈ ವ್ಯವಸ್ಥೆಯನ್ನು ಜಾರಿಗೊಳಿಸುವ ನಗರ ಪಾಲಿಕೆಯ ನಿರ್ಣಯವನ್ನೇ ಹಿಂಪಡೆಯಬೇಕೆಂದು ಒತ್ತಾಯಿಸಿದರು. ಅಭಿಯಾನದಲ್ಲಿ ಸಂಘಟನೆಯ ಕಾರ್ಯದರ್ಶಿಗಳಾದ ಎಸ್.ಸುಮಾ, ನಿರಂಜನ್ ಹಿರೇಮಠ್, ಎಸ್.ವಿ. ನೀತುಶ್ರೀ ಭಾಗಿಯಾಗಿದ್ದರು.

ಅಭಿವೃದ್ಧಿ ಹೆಸರಿನಲ್ಲಿ ಚಾಮುಂಡಿಬೆಟ್ಟಕ್ಕೆ ಧಕ್ಕೆ ತರಬೇಡಿ

● ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಸಲಹೆ ● ಬೆಟ್ಟದ ನಂದಿ ಸಂರಕ್ಷಿಸದಿದ್ದರೆ ಪ್ರತಿಭಟನೆ
● ಬೆಟ್ಟದ ಪಾದದ ಬಳಿಯ ಮಂಟಪ ದುರಸ್ತಿ ಮಾಡದಿದ್ದರೆ ಅಪಾಯ ಗ್ಯಾರಂಟಿ

ಮೈಸೂರು, ಜೂ.18(ಜಿಎ)-ಚಾಮುಂಡಿಬೆಟ್ಟದ ಪ್ರಸಾದ ಯೋಜನೆಗೆ ನಮ್ಮ ವಿರೋಧವಿಲ್ಲ. ಆದರೆ, ಚಾಮುಂಡಿ ಬೆಟ್ಟ ಬೆಟ್ಟವಾಗಿಯೇ ಉಳಿಯಬೇಕು. ಅಭಿವೃದ್ಧಿ ಹೆಸರಿನಲ್ಲಿ ಅದಕ್ಕೆ ಧಕ್ಕೆ ತರುವುದು ಬೇಡ ಎಂದು ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಸಲಹೆ ನೀಡಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಬೆಟ್ಟಕ್ಕೆ ಕುಡಿಯುವ ನೀರು ಪೂರೈಸಲು ಕೈಗೊಂಡ ಯೋಜನೆ ಮತ್ತು ನಂದಿ ಪ್ರತಿಮೆಯ ಸಂರಕ್ಷಣೆ ಮತ್ತು ದೇವಿಕೆರೆ ಅಭಿವೃದ್ಧಿ ಕಾರ್ಯಗಳು ಅರ್ಧಕ್ಕೆ ನಿಂತಿದೆ ಮೊದಲು ಅದರ ಬಗ್ಗೆ ಜಿಲ್ಲಾಡಳಿತ ಗಮಹರಿಸಿ, ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಬೆಟ್ಟದ ಪರಿಸರ ಸಂರಕ್ಷಣೆ ಬಗ್ಗೆ ಮಾತನಾಡಿರುವುದು ಸ್ವಾಗತಾರ್ಹ. ಈ ನಡುವೆ ಮನೆಗಳನ್ನು ಎಲ್ಲಿಯಾದರೂ ನಿರ್ಮಿಸಲಿ, ಆದರೆ ಬೆಟ್ಟದ ಮೇಲೆ ಮಾತ್ರ ಬೇಡ. ಹಲವಾರು ದೇಶಗಳಲ್ಲಿ ಪರಿಸರ ಶುದ್ಧ ಇಲ್ಲದ ಕಾರಣ ಕೃತಕವಾಗಿ ನಿರ್ಮಿಸಲಾಗುತ್ತಿದೆ.



ಆದರೆ ನಮ್ಮಲ್ಲಿಯೇ ಇರುವ ಪ್ರಕೃತಿ ದತ್ತವಾದ ಬೆಟ್ಟದ ಪರಿಸರವನ್ನು ಅಭಿವೃದ್ಧಿ ಹೆಸರಿನಲ್ಲಿ ನಾಶ ಮಾಡುವುದು ಬೇಡ ಎಂದು ಆಗ್ರಹಿಸಿದರು.

ಬೆಟ್ಟಕ್ಕೆ ಸಂಬಂಧಿಸಿದ ಯಾವುದೇ ಯೋಜನೆ ಬಗ್ಗೆ ಸಾರ್ವಜನಿಕರು ಹಾಗೂ ಸಂಘ ಸಂಸ್ಥೆಗಳೊಡನೆ ಚರ್ಚೆ ಆಗಬೇಕು. ಬೆಟ್ಟದ ನಂದಿಯ ಮೇಲಿದ್ದ ಲೇಪವನ್ನು ತೆರವುಗೊಳಿಸಿರುವುದರಿಂದಾಗಿ ಅದಕ್ಕೆ ಅಪಾಯವೊದಗಿದೆ. ಅದು ಮೃದು ಕಲ್ಲಿನದಾಗಿರುವ ಕಾರಣ ಅಲ್ಲಲ್ಲಿ ಬಿರುಕುಬಿಟ್ಟಿದೆ. ಲೇಪನ ತೆಗೆದು ಹಾಕಿರುವ ಕಾರಣ ಬಿರುಕುಗಳಲ್ಲಿ ಪಾಚಿ ಬೆಳೆಯುತ್ತಿದೆ. ಈ ಬಗ್ಗೆ ಪುರಾತತ್ವ ಇಲಾಖೆ ಕೂಡಲೇ ಕ್ರಮ ವಹಿಸಬೇಕು. ಇಲ್ಲದಿದ್ದಲ್ಲಿ ಪುರಾತತ್ವ ಇಲಾಖೆ ಎದುರು ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದರು.

ದೇವೀಕರೆ ಮೊದಲಿನ ಸ್ವರೂಪದಲ್ಲಿ ಉಳಿದಿಲ್ಲ. ಬೆಟ್ಟದ ಪರಿಸರ ನಾಶ ಕುರಿತಂತೆ ಅರಣ್ಯ ಇಲಾಖೆ ಲೋಪವೂ ಇದೆ. ಬೆಟ್ಟದ ಪಾದದಿಂದ ಸುಮಾರು 12 ಮಂಟಪಗಳಿವೆ. ಇವುಗಳಲ್ಲಿ ಒಂದು ಈಗಾಗಲೇ ಕುಸಿದಿದೆ. ಮತ್ತೆ ಕೆಲವು ಅಪಾಯದ ಸ್ಥಿತಿಯಲ್ಲಿದ್ದು, ಆಷಾಢ ಶುಕ್ರವಾರಗಳಂದು ಪರ ಮಾಡಲು ಭಕ್ತಾದಿಗಳು ಈ ಮಂಟಪಗಳನ್ನು ಬಳಸಿಕೊಳ್ಳುತ್ತಾರೆ. ಹೀಗಾಗಿ ಇವನ್ನು ದುರಸ್ತಿ ಮಾಡದಿದ್ದರೆ ಅಪಾಯದ ಸಾಧ್ಯತೆ ಇದೆ ಎಂದು ಎಚ್ಚರಿಸಿ, ಸಿದ್ದರಾಮಯ್ಯ ಅವರು ಮತ್ತೆ ಸಿಎಂ ಆಗಿರುವುದರಿಂದಾಗಿ ಬೆಟ್ಟದ ಸಂರಕ್ಷಣೆಗೂ ಗಮನ ನೀಡಲೆಂದು ಕೋರುವುದಾಗಿ ತಿಳಿಸಿದರು.

ನಗರದ ವಿವೇಕಾನಂದ ವೃತ್ತದ ದುರಸ್ತಿಗಾಗಿ ಪಾಲಿಕೆ ಕ್ರಮ ಕೈಗೊಂಡಿದೆ. ಆದರೆ, ಈ ಹಿಂದೆ 2016ರಲ್ಲಿ ನಿರ್ಮಾಣ ಮಾಡಿರುವ ಜಯಚಾಮರಾಜೇಂದ್ರ ಒಡೆಯರ್ ವೃತ್ತವು ಶಿಥಿಲಗೊಂಡಿದ್ದು, ಸುತ್ತಲೂ ಇರುವ ಟೈಲ್ಸ್‌ಗಳು ಕುಸಿದಿವೆ. ಸ್ವಲ್ಪ ಮಳೆಯಾದರೂ ಗೋಪುರದಿಂದ ನೀರು ಸೋರುತ್ತಿದೆ. ಹೀಗಾಗಿ ಒಡೆಯರ್‌ಗಳ ಪ್ರತಿಮೆ ಇರುವ ಗೋಪುರವನ್ನು ಸಂರಕ್ಷಣೆ ಮಾಡಿ. ಮೈಸೂರಿಗೆ ಹಾಗೂ ನಾಡಿಗೆ ಒಡೆಯರ್ ಕೊಡುಗೆಗಳು ಅಪಾರವಿದೆ. ಇದರ ಬಗ್ಗೆ ಪಾಲಿಕೆಯೂ ಸೂಕ್ತ ಕ್ರಮವಹಿಸದಿದ್ದರೆ, ಮುಂದಿನ ದಿನಗಳಲ್ಲಿ ಇದನ್ನು ವಿರೋಧಿಸಿ ಪಾಲಿಕೆ ಮುಂಭಾಗ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಲಯನ್ಸ್ ಕ್ಲಬ್‌ನ ಸಿದ್ದಲಿಂಗಪ್ಪ, ವೆಂಕಟೇಶ್, ವಾಸು, ಆನಂದ್ ಇದ್ದರು.

ವಾರಕ್ಕೊಮ್ಮೆ ಅಧಿಕಾರಿಗಳು ಜನರ ಬಳಿಗೆ ಹೋಗಬೇಕು

ಕೃತಜ್ಞತಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರಿಗೆ ಅದ್ದೂರಿ ಸ್ವಾಗತ

- ಸರ್ಕಾರ ಬದಲಾಗಿದೆ, ಕೆಲಸ ಮಾಡದ ಅಧಿಕಾರಿಗಳು ಬದಲಾಗಬೇಕು
- ಜನಶಕ್ತಿಯ ಮುಂದೆ ಯಾರ ಆಟ ನಡೆಯದು



ತಿ.ನರಸೀಪುರ ತಾಲೂಕಿನ ಮೂಗೂರು ಗ್ರಾಮದ ಗ್ರಾಮ ಪಂಚಾಯಿತಿ ಮುಂಭಾಗ ಭಾನುವಾರ ಹೋಬಳಿಯ ಮತದಾರರಿಗೆ ಹಮ್ಮಿಕೊಂಡಿದ್ದ ಕೃತಜ್ಞತಾ ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ತಿ.ನರಸೀಪುರ, ಜೂ.18– ರಾಜ್ಯದಲ್ಲಿ ಜನಪರ ಕೆಲಸ ಮಾಡದ ಸರ್ಕಾರ ಬದಲಾಗಿದ್ದು, ಕ್ಷೇತ್ರದಲ್ಲಿಯೂ ಕೆಲಸ ಮಾಡದ ಅಧಿಕಾರಿಗಳು ಬದಲಾಗಬೇಕು ಎಂದ ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಾರಕ್ಕೊಮ್ಮೆ ತಾಲೂಕು ಮಟ್ಟದ ಅಧಿಕಾರಿಗಳು ಜನರ ಬಳಿಗೆ ಹೋಗಿ ಅವರ ಸಮಸ್ಯೆ ಆಲಿಸಬೇಕು ಎಂದರು.

ತಾಲೂಕಿನ ಮೂಗೂರು ಗ್ರಾಮದ ಗ್ರಾಮ ಪಂಚಾಯಿತಿ ಮುಂಭಾಗ ಭಾನುವಾರ ಹೋಬಳಿಯ ಮತದಾರರಿಗೆ ಹಮ್ಮಿಕೊಂಡಿದ್ದ ಕೃತಜ್ಞತಾ ಸಮಾರಂಭವನ್ನು ಉದ್ಘಾಟಿಸಿ, ಅದ್ದೂರಿ ಸ್ವಾಗತವನ್ನು ಸ್ವೀಕರಿಸಿ ಮಾತನಾಡಿದರು.

ರಾಜ್ಯದಲ್ಲಿ ನಾಲ್ಕು ದಿನ ಸಚಿವರಾಗಿ ಕೆಲಸವನ್ನು ಮಾಡಿದರೆ, ಇನ್ನುಳಿದ ಮೂರು ದಿನ ಜಿಲ್ಲೆ ಹಾಗೂ ಕ್ಷೇತ್ರದ ಕೆಲಸವನ್ನು ಮಾಡುತ್ತೇನೆ. ವಾರಕ್ಕೊಮ್ಮೆ ತಾಲೂಕು ಮಟ್ಟದ ಅಧಿಕಾರಿಗಳು ಜನರ ಬಳಿಗೆ ಹೋಗಬೇಕು. ಸರ್ಕಾರಿ ಕಚೇರಿಗಳಲ್ಲಿ ಸಾಮಾನ್ಯ ಜನರಿಗೆ ಯಾವುದೇ ಶಿಫಾರಸು, ಹಣವಿಲ್ಲದೆ ಕೆಲಸವಾಗುತ್ತೆ ಎಂಬ ನಂಬಿಕೆ ಬರಬೇಕು. ಬಡವರು, ರೈತರು, ಕಾರ್ಮಿಕರು ಹಾಗೂ ಮಹಿಳೆಯರ ಕೆಲಸಗಳ ಕಾರ್ಯಗಳು ನಿಗದಿತ ಅವಧಿಯಲ್ಲಿ ಆಗಬೇಕು. ನಾಳೆಯೇ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯನ್ನು ಕರೆದಿದ್ದೇನೆ. ಸಮಾಜ ಕಲ್ಯಾಣ ಇಲಾಖೆಯಷ್ಟೇ ಅಲ್ಲ ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲಿಯೂ ಸಂವಿಧಾನದ ಆಶಯಗಳಂತೆ ಕೆಲಸಗಳು ನಡೆಯಬೇಕು. ತಪ್ಪಿದ್ದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮವನ್ನು ಜರುಗಿಸುತ್ತೇನೆ ಎಂದು ಸಚಿವರು ಎಚ್ಚರಿಸಿದರು.

ಜನಶಕ್ತಿಯ ಮುಂದೆ ಯಾರ ಆಟವೂ ನಡೆಯದು. ಚುನಾವಣೆಯ ವೇಳೆ ಗ್ರಾಮದ ಮರಿ ಪುಡಾರಿಗಳಿಬ್ಬರು ರಾಜಕಾರಣವನ್ನೇ ತಿರುಗು ಮುರುಗು ಮಾಡಿಬಿಡುತ್ತೇವೆ ಎಂಬಂತೆ ಆಡುತ್ತಿದ್ದರು. ಕಾಂಗ್ರೆಸ್ ಗೆಲುವಿಗಾಗಿ ಕಾರ್ಯಕರ್ತರು ಹಾಗೂ ಮುಖಂಡರು ಹಬ್ಬದ ಸಂಭ್ರಮದಂತೆ ಚುನಾವಣೆ ನಡೆಸಿ ಗೆಲ್ಲಿಸಿದರು. ಎಲ್ಲಾ ವರ್ಗದ ಜನರು ಕೂಡ ಮತವನ್ನು ಕೊಟ್ಟಿದ್ದಾರೆ ಎಂದರು.

ವಿಶ್ವಬ್ಯಾಂಕಿನಲ್ಲೂ ಮಹದೇವಪ್ಪನೇ ಬೆಸ್ಟ್

ಸಾರ್ವಜನಿಕ ಕ್ಷೇತ್ರವಾಗಿರುವ ರಾಜಕಾರಣದಲ್ಲಿ ಅಧಿಕಾರ ಇರುವುದು ಜನರ ಸೇವೆ ಹಾಗೂ ಅಭಿವೃದ್ಧಿ ಮಾಡಲಿಕ್ಕೆ ಅಭಿವೃದ್ಧಿಯಲ್ಲಿ ಇಂಡಿಯಾಕ್ಕೆ ಡಾ.ಹೆಚ್.ಸಿ. ಮಹದೇವಪ್ಪ ಅವರೇ ಬೆಸ್ಟ್ ಅಂತ ಬರೆದಿದ್ದಾರೆ. ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ಗೋವಿಂದರಾಜ್ ತೆಗೆಸಿ ನೋಡ್ರಿ. ಕಳ್ಳ ಸುಳ್ಳರು ಖಾಕಿ ಕಂಡರೆ, ಪೊಲೀಸ್ ಠಾಣೆಗೆ ಬಂದರೆ ಚಡ್ಡಿ ಒದ್ದೆಯಾಗುವಂತೆ ಪೊಲೀಸರ ಕಾರ್ಯವೈಖರಿ ಇರಬೇಕು. ಯಾರೇ ಆಗಲಿ ಕಾನೂನನ್ನ ಕೈಗೆ ಎತ್ತಿಕೊಂಡಾಗ ಕಾನೂನು ತಂತಾನೆ ಕೆಲಸವನ್ನು ಮಾಡಬೇಕು. –ಡಾ.ಹೆಚ್.ಸಿ. ಮಹದೇವಪ್ಪ, ಸಚಿವ

ವಸತಿ ಯೋಜನೆ ಸಮಿತಿಯ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ಮಾತನಾಡಿ, ರಾಜ್ಯದ 223 ಕ್ಷೇತ್ರಗಳನ್ನು ಕಾಂಗ್ರೆಸ್ ಗೆಲ್ಲಲಿ, ನರಸೀಪುರದಲ್ಲಿ ಮಾತ್ರ ಜೆಡಿಎಸ್ ಗೆಲ್ಲಬೇಕು ಎಂಬ ಬಹುದೊಡ್ಡ ಅಪೇಕ್ಷೆಯನ್ನು ಇಟ್ಟುಕೊಂಡಿದ್ದ ಗ್ರಾಮದ ಮುಖಂಡರೊಬ್ಬರು ಈಗ ಯಾವುದೇ ಸಂಕೋಚವಿಲ್ಲದೆ ಸಿಎಂ ಸಿದ್ದರಾಮಯ್ಯ ಅವರ ಬಳಿ ಮುಖ ಮುಚ್ಚಿಕೊಂಡು ವೈಯಕ್ತಿಕ ಕೆಲಸವನ್ನು ಮಾಡಿಸಿಕೊಂಡು ಬಂದಿದ್ದಾರೆ. ಚುನಾವಣೆಯಲ್ಲಿ ಇಂತಹವರ ಮಾತಿಗೆ ಕಿಮ್ಮತ್ತನ್ನೂ ನೀಡದ ನರಸೀಪುರ ಕ್ಷೇತ್ರದ ಮತದಾರರು ಕೈ ಹಿಡಿದಿದ್ದಾರೆ. ಹಾಗಾಗಿ ಕ್ಷೇತ್ರದ ಜನರ ಸೇವೆ ಮಾಡಲು ಸದಾಕಾಲವೂ ಸಿದ್ಧನಿದ್ದೇನೆ ಎಂದು ತಿಳಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿ, ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ನೂರಾರು ಕೋಟಿ ರೂಗಳ ಅನುದಾನವನ್ನು ನೀಡಿದ್ದರಿಂದ ಈಗಾಗಲೇ ಗ್ರಾಮದಲ್ಲಿ ಶೇ.90ರಷ್ಟು ಅಭಿವೃದ್ಧಿ ಆಗಿದ್ದು, ಶೇ.10ರಷ್ಟು ಬಾಕಿಯಿದೆ ಎಂದರು.

ಮೂಗೂರು ಗ್ರಾಮಕ್ಕೆ ಆಗಮಿಸಿದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಬೃಹತ್ ಗಾತ್ರದ ಸೇಬಿನ ಹಾರವನ್ನು ಹಾಕಿ ಅದ್ದೂರಿ ಸ್ವಾಗತ ನೀಡಲಾಯಿತು. ರಾಷ್ಟ್ರೀಯ ಹೆದ್ದಾರಿ ಜಂಕ್ಷನ್‌ನಿಂದ ಶ್ರೀ ತ್ರಿಪುರಸುಂದರಿ ಅಮ್ಮನವರ ದೇವಾಲಯದವರೆಗೂ ತೆರೆದ ವಾಹನದಲ್ಲಿ ಮೆರವಣಿಗೆಯ ಮೂಲಕ ಸಚಿವರನ್ನು ಕರೆತರಲಾಯಿತು. ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಹಾಗೂ ಸಹಕಾರ ಮಹಾಮಂಡಳ ನಿರ್ದೇಶಕ ವೈ.ಎನ್.ಶಂಕರೇಗೌಡ ಮಾತನಾಡಿದರು.



ಭಾರೀ ಗಾತ್ರದ ಸೇಬಿನ ಹಾರ ಹಾಕುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್. ಶಿವಮೂರ್ತಿ, ಸಹಕಾರ ಮಹಾಮಂಡಳ ನಿರ್ದೇಶಕ ವೈ.ಎನ್.ಶಂಕರೇಗೌಡ, ಮಾಜಿ ಪ್ರಧಾನ ಹೆಚ್.ವಿ.ಶೇಷಾದ್ರಿ, ಜಿ.ಪಂ ಮಾಜಿ ಸದಸ್ಯರಾದ ಎಂ.ಸುಧಾ ಮಹದೇವಯ್ಯ, ಕೆ.ಚಂದ್ರಶೇಖರ್, ಹೊನ್ನನಾಯಕ, ತಾಪಂ ಮಾಜಿ ಅಧ್ಯಕ್ಷರಾದ ಹೆಚ್.ಸಿ.ಉಮೇಶ್, ಎಂ.ಮಲ್ಲಿಕಾರ್ಜುನಸ್ವಾಮಿ, ಎಸ್ಸಿ, ಎಸ್ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಕೆ. ಮಲ್ಲು, ಶ್ರೀಕಂಠೇಶ್ವರ ದೇವಾಲಯದ ಧರ್ಮದರ್ಶಿ ಮಂಡಳಿಯ ನಿಕಟಪೂರ್ವ ಅಧ್ಯಕ್ಷ ಇಂದನ್ ಬಾಬು, ಸಹಾಯಕ ಪ್ರಾಧ್ಯಾಪಕ ಡಾ.ಬಿ.ಕೆ.ಜ್ಞಾನಪ್ರಕಾಶ್, ಗುತ್ತಿಗೆದಾರ ಕೇತಹಳ್ಳಿ ರಾಜಣ್ಣ, ಪಿಎಸಿಸಿಎಸ್ ಮಾಜಿ ಅಧ್ಯಕ್ಷ ಎ.ಬಿ.ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜು, ಪ.ಪಂ ಮಾಜಿ ಅಧ್ಯಕ್ಷರಾದ ಬಸವಣ್ಣ, ಎನ್.ಎಸ್.ಬಸವರಾಜು, ಎನ್.ಮಹದೇವಸ್ವಾಮಿ, ಮಾಜಿ ಉಪಾಧ್ಯಕ್ಷೆ ರೇಣುಕಾರಾಮು, ಬೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎಜೆ ವೆಂಕಟೇಶ್. ಒಕ್ಕಲಿಗರ ಸಂಘದ ಅಧ್ಯಕ್ಷ ಪಿ ಸ್ವಾಮಿನಾಥ್ ಗೌಡ, ಉಪನ್ಯಾಸಕ ಕುಮಾರಸ್ವಾಮಿ, ನಿವೃತ್ತ ಪಿಡಿಓ ಮಹದೇವಯ್ಯ, ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಪಿ.ಪುಟ್ಟರಾಜು, ಆರ್‌ಡಿಬಸ್ ಮಾಲೀಕ ಕುಮಾರ್, ಸೋಸಲೆ ಪಿಎಸಿಸಿಎಸ್ ಅಧ್ಯಕ್ಷ ಎಂ.ಪರಶಿವಮೂರ್ತಿ, ಎಪಿಎಂಸಿ ಮಾಜಿ ಅಧ್ಯಕ್ಷ ಚೌಹಳ್ಳಿ ಮಹದೇವಪ್ಪ, ಮುಖಂಡರಾದ ಎಂ.ಎನ್.ಸೋಮಣ್ಣ ಎಂ.ಬಿ.ಸಾಗರ್, ಕುಮಾರಸ್ವಾಮಿ. ಎಂ.ಶಿವ ಮೂರ್ತಿ, ಜಗದೀಶಮೂರ್ತಿ, ದಿಲೀಪ್ ಕುಮಾರ್, ಕನ್ನಹಳ್ಳಿ ಲಕ್ಷ್ಮಣ್, ಡೈರಿ ನಾಗೇಂದ್ರ ಹಾಗೂ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಭಾಗವಹಿಸಿದ್ದರು.



ದಾವಣಗೆರೆ ಜಿಲ್ಲೆ, ಹರಿಹರ ತಾಲೂಕು ರಾಜನಹಳ್ಳಿ ಗುರು ಪೀಠದ ಶ್ರೀ ಪ್ರಸನ್ನ ನಂದಾಪುರಿ ಸ್ವಾಮೀಜಿ ಅವರನ್ನು ಹೆಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಅನಿಲ್ ಚಿಕ್ಕಮಾದು ಅಭಿನಂದಿಸಿದರು. ಈ ಸಂದರ್ಭದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್ ಸಿ.ಬಸವರಾಜು, ಮುಖಂಡರುಗಳಾದ ಶಂಭುಲಿಂಗ ನಾಯಕ, ಕ್ಯಾತನಹಳ್ಳಿ ನಾಗರಾಜು, ಜಿನ್ನಳ್ಳಿ ರಾಜನಾಯಕ ಮುಂತಾದವರು ಇದ್ದರು.

ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ಶ್ರಮದಾನ

ವಿದ್ಯಾರ್ಥಿಗಳಿಂದ ಮೆಟ್ಟಿಲುಗಳು, ದೇವಸ್ಥಾನದ ಸುತ್ತ ಬೆಳೆದಿದ್ದ ಗಿಡ–ಗಂಟಿಗಳ ತೆರವು

ಬೆಟ್ಟದಪುರ, ಜೂ.18– ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಹಾಗೂ ಬೆಟ್ಟದ ಮೆಟ್ಟಿಲುಗಳ ಮೇಲೆ ಬೆಳೆದಿದ್ದ ಗಿಡ–ಗಂಟಿಗಳನ್ನು ಸ್ವಚ್ಛತೆ ಮಾಡಿದ ಪಿರಿಯಾಪಟ್ಟಣ ಶಿವು ಸೈನಿಕ ಶಾಲೆಯ ವಿದ್ಯಾರ್ಥಿಗಳು. ಇವರ ಈ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ.

ಪಿರಿಯಾಪಟ್ಟಣದ ಶಿವು ಸೈನಿಕ ಶಾಲೆಯ ವಿದ್ಯಾರ್ಥಿಗಳು ಇಂದು ಬೆಟ್ಟದಪುರದ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬೆಟ್ಟಕ್ಕೆ ಆಗಮಿಸಿ ಬೆಟ್ಟದ ಮೇಲೆ ದೇವಸ್ಥಾನದ ಸುತ್ತ ಬೆಳೆದಿದ್ದ ಗಿಡ ಗಂಟಿಗಳು ಹಾಗೂ ಮೆಟ್ಟಿಲುಗಳ ಮೇಲೆ ಬೆಳೆದಿದ್ದ ಹುಲ್ಲಿನ ಗಿಡಗಳನ್ನು ತೆರವುಗೊಳಿಸಿ ಸಾರ್ವಜನಿಕರು ಓಡಾಡಲು ಅನುವು ಮಾಡಿಕೊಟ್ಟರು.

ದೇವಸ್ಥಾನವು ಶಿಥಿಲಾವಸ್ಥೆ ತಲುಪಿದ್ದು, ಸಾರ್ವಜನಿಕರು, ಸಚಿವರಾದ ವೆಂಕಟೇಶ್ ಅವರು ಬೆಟ್ಟದಪುರದ ಪ್ರವಾಸಿ ಕ್ಷೇತ್ರ ಅಭಿವೃದ್ಧಿಗೆ ಹೆಚ್ಚಿನ ಒಲವು ನೀಡಿ ಈ ಕ್ಷೇತ್ರವನ್ನು ಅಭಿವೃದ್ಧಿಪಡಿಸಬೇಕೆಂದು ಸೈನಿಕ ಶಾಲೆ ವಿದ್ಯಾರ್ಥಿಗಳು ಮನವಿ ಮಾಡಿದ್ದಾರೆ.



ಸೈನಿಕ ಶಾಲೆಯ ವಿದ್ಯಾರ್ಥಿಗಳ ಈ ಸಮಾಜಸೇವೆಗೆ ಸಮಾಜ ಸೇವಕರಾದ ಸುನಿಲ್ ಕುಮಾರ್, ದಿನೇಶ್ ಕುಮಾರ್, ಮೆಡಿಕಲ್ ನಾಗರಾಜ್, ಆಂಜನೇಯ ಸ್ವಾಮಿ, ಅರ್ಚಕ ಮೋಹನ್ ಕುಮಾರ್, ಎಸ್.ಮಲ್ಲೇಶ್, ಬಿ.ಟಿ. ವೆಂಕಟೇಶ್ ಸೇರಿದಂತೆ ಇತರರು ಸ್ವಚ್ಛತಾ ಕಾರ್ಯ ಕೈಗೊಂಡ ಸೈನಿಕ ಶಾಲೆಯ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಶ್ರೀ ತೋಪಿನಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ಮರದೂರು ಗ್ರಾಮದ ಶ್ರೀ ತೋಪಿನಮ್ಮ ದೇವಸ್ಥಾನದಲ್ಲಿ ಮಣ್ಣೆತ್ತಿನ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ, ಅಭಿಷೇಕಗಳು ನಡೆದವು. ಅರ್ಚಕರಾದ ಪ್ರಸನ್ನ ದೇವರಿಗೆ ವಿಶೇಷ ಅಲಂಕಾರ ಮತ್ತು ವಿವಿಧ ರೀತಿಯ ಅಭಿಷೇಕ ಪೂಜೆಗಳನ್ನು ನೆರವೇರಿಸಿದರು.

ಸುತ್ತೂರು ಶ್ರೀಮಠದಲ್ಲಿ ಮಾಸಿಕ ಸಾಮೂಹಿಕ ವಿವಾಹ



ಸುತ್ತೂರು ಶ್ರೀಮಠದಲ್ಲಿ ಜರುಗಿದ 113ನೇ ಮಾಸಿಕ ಸಾಮೂಹಿಕ ವಿವಾಹದಲ್ಲಿ ಎರಡು ಜೋಡಿಗಳು ದಂಪತಿಗಳಾದವು. ಚಿತ್ರದಲ್ಲಿ ವಧು–ವರರ ಬಂಧುಗಳು, ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಇತರರನ್ನು ಕಾಣಬಹುದು.

ನೀರು ಬಳಕೆದಾರರ ಸಂಘಕ್ಕೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಹಿರೀಕ್ಯಾತನಹಳ್ಳಿ, ಜೂ.18– ಹುಣಸೂರು ತಾಲೂಕಿನ ಅಗ್ರಹಾರ ಗ್ರಾಮದ ನೀರು ಬಳಕೆದಾರರ ಸಹಕಾರ ಸಂಘದ ಅಧ್ಯಕ್ಷರಾಗಿ ಶಿವಕರ್, ಉಪಾಧ್ಯಕ್ಷರಾಗಿ ಶಂಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ರಮೇಶ್, ಸಾಕಯ್ಯ, ಮಮತಾ, ನಂಜಮ್ಮ, ಮಾಗಳಿಗೌಡ, ವೆಂಕಟೇಶ್, ರಮೇಶ್, ಶ್ರೀನಿವಾಸ್, ನಾಗರಾಜಚಾರಿ, ನಂಜುಂಡೇಗೌಡ ಆಯ್ಕೆಯಾಗಿದ್ದು, ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಮಂಜು ಕಾರ್ಯ ನಿರ್ವಹಿಸಿದರು. ಈ ವೇಳೆ ಸಂಘದ ಕಾರ್ಯದರ್ಶಿ ಮಹದೇವ್ ಇನ್ನಿತರರಿದ್ದರು ಎಂದು ನೀರು ಬಳಕೆದಾರರ ಸಂಘದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಲಗೂಡಿನಲ್ಲಿ ಸಚಿವ ಡಾ.ಮಹದೇವಪ್ಪಗೆ ಸನ್ಮಾನ



ತಿ.ನರಸೀಪುರ, ಜೂ.18– ಜಿಲ್ಲಾ ಉಸ್ತುವಾರಿ ಸಚಿವರಾದ ನಂತರ ಮೊದಲ ಬಾರಿಗೆ ಮೂಗೂರಿಗೆ ಕಾರ್ಯಕರ್ತರ ಕೃತಜ್ಞತಾ ಸಮಾರಂಭಕ್ಕೆ ತೆರಳುವ ಸಂದರ್ಭದಲ್ಲಿ ಮಾರ್ಗಮಧ್ಯ ಪಟ್ಟಣದ ಆಲಗೂಡು ಗ್ರಾಮಕ್ಕೆ ಭೇಟಿ ನೀಡಿದ್ದ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸಂಘದ ಸದಸ್ಯರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಪುರಸಭಾ ಸದಸ್ಯ ತುಂಬಲ ಸಿ.ಪ್ರಕಾಶ್, ಯುವ ಮುಖಂಡರಾದ ಮದನ್ ರಾಜು, ನಾಗರಾಜು ಮೂರ್ತಿ, ಆನಂದ, ರಾಜು, ಶಿವು, ಬಾಲು, ಮೂರ್ತಿ, ರಘು, ನಾಗರಾಜು(ಚಿಕ್ಕ), ಯ.ಮಾದಯ್ಯ, ಕೃಷ್ಣಯ್ಯ, ರಾಚಯ್ಯ, ಸಿದ್ದಯ್ಯ, ಮಲ್ಲರಾಜು, ಅಪ್ಪಣ್ಣ, ಮನು, ದರ್ಶನ್, ವಿಕಾಸ್, ಪ್ರಜ್ವಲ್, ಸಾಗರ್, ಶಿವಶಂಕರ, ವಿಶ್ವ ಪ್ರಸನ್ನ, ದರ್ಶನ್, ಬಸವರಾಜು, ಬಿ.ಎಂ. ಮಹದೇವ, ಲಕ್ಕ, ಸಿದ್ದರಾಜು, ನಾಗರಾಜು, ಪ್ರಕಾಶ್, ಯ. ನಾಗರಾಜು ಮತ್ತಿತರರು ಹಾಜರಿದ್ದರು.

ಕಚುವಿನಹಳ್ಳಿಯಲ್ಲಿ ಶ್ರೀ ದೊಡ್ಡಮ್ಮ ತಾಯಿ ದೇವಸ್ಥಾನ ಲೋಕಾರ್ಪಣೆ

ಹನಗೋಡು, ಜೂ.18– ಹನಗೋಡು ಹೋಬಳಿಯ ಕಚುವಿನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಶ್ರೀ ದೊಡ್ಡಮ್ಮ ತಾಯಿ ದೇವಸ್ಥಾನವನ್ನು ನೂರಾರು ಭಕ್ತರ ಸಮ್ಮುಖದಲ್ಲಿ ವಿಶೇಷ ಧಾರ್ಮಿಕ ಪೂಜಾ ವಿಧಿ–ವಿಧಾನಗಳೊಂದಿಗೆ ಲೋಕಾರ್ಪಣೆಗೊಂಡಿತು.

ಹುಣಸೂರಿನ ಅರ್ಚಕ ಶೇಷಚಲಯ್ಯನವರ ತಂಡವು ಎರಡು ದಿನಗಳ ಕಾಲ ದೇವಾಲಯದ ಆವರಣದಲ್ಲಿ ಗಂಗಾ ಮತ್ತು ಗೋ ಪೂಜೆಯೊಂದಿಗೆ ವಿಶೇಷ ಹೋಮ, ಹವನ, ಪೂರ್ಣಾಹುತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳನ್ನು ನಡೆಸಿ ನೂತನವಾಗಿ ನಿರ್ಮಿಸಿರುವ ದೇವಾಲಯದಲ್ಲಿ ದೊಡ್ಡಮ್ಮ ತಾಯಿ ದೇವಿಯ ಪ್ರತಿಷ್ಠಾಪನೆ ಮಾಡಲಾಯಿತು.

ಗ್ರಾಮಸ್ಥರಿಂದ ಬುಧವಾರ ಮಧ್ಯಾಹ್ನ ನಡೆಸಿದ ಅನ್ನ ಸಂತರ್ಪಣೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ಗ್ರಾಮದ ಯಜಮಾನರಾದ ಮಾದೇಗೌಡ, ಚಿಯ. ರೇವಣ್ಣ, ಕೆ.ಬಿ ಉಜ್ಜನಿ ಗೌಡ, ಕೆ.ಎಸ್.ಅನಂದ್, ಸದಾಶಿವ, ಲೋಕೇಶ್, ಗ್ರಾಪಂ ಮಾಜಿ ಅಧ್ಯಕ್ಷ ಕೆ.ಡಿ. ಮಹೇಶ್, ಗ್ರಾಪಂ ಸದಸ್ಯರಾದ ಅಮಾಸೆಗೌಡ, ರುಕ್ಮಿಣಿ ಸುರೇಶ್, ದೇವಾಲಯದ ಅರ್ಚಕರಾದ ಕರೀಗೌಡ, ಶಿವಣ್ಣನಾಯಕ ಅರ್ಜುನ್, ಗ್ರಾಮಸ್ಥರು ಭಾಗವಹಿಸಿದ್ದರು.



ಹನಗೋಡು ಹೋಬಳಿಯ ಕಚುವಿನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ದೊಡ್ಡಮ್ಮತಾಯಿ ದೇವಾಲಯದ ಉದ್ಘಾಟನಾ ಪೂಜಾ ಕಾರ್ಯದಲ್ಲಿ ಗಂಗಾ ಹಾಗೂ ಗೋಪೂಜೆ ನೆರವೇರಿಸಲಾಯಿತು.

ಭೀಮನಕೊಲ್ಲಿಯಲ್ಲಿ ವಿಜೃಂಭಣೆಯ ಆಷಾಢ ಅಮಾವಾಸ್ಯೆ ಪೂಜೆ

ಶ್ರೀ ಮಹದೇಶ್ವರ ಸ್ವಾಮಿಯ ದರ್ಶನ ಪಡೆದ ಸಾವಿರಾರು ಭಕ್ತರು

ಹೆಚ್.ಡಿ.ಕೋಟೆ, ಜೂ.18– ಶ್ರೀ ಮಹದೇಶ್ವರ ಸ್ವಾಮಿ ದೇವಾಲಯದಲ್ಲಿ ಭಾನುವಾರ ಆಷಾಢ ಅಮಾವಾಸ್ಯೆ ಅಂಗವಾಗಿ ವಿಶೇಷ ಪೂಜೆ ವಿಜೃಂಭಣೆಯಿಂದ ನಡೆಯಿತು. ಸಾವಿರಾರು ಭಕ್ತರು ಪಾಲ್ಗೊಂಡಿದ್ದು, ಎಲ್ಲೇ ನೋಡಿದರೂ ಭಕ್ತ ಸಾಗರವೇ ತುಂಬಿತ್ತು.

ತಾಲೂಕಿನ ಭೀಮನ ಕೊಲ್ಲಿ ಗ್ರಾಮದಲ್ಲಿರುವ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಆಷಾಢ ಅಮಾವಾಸ್ಯೆಯ ಪ್ರಯುಕ್ತ ಭಾನುವಾರ ಬೆಳಗಿನ ಜಾವದಿಂದಲೇ ಸ್ವಾಮಿಗೆ ರುದ್ರಭಿಷೇಕ, ಬಿಲ್ವಾರ್ಚನೆ ಮಾಡುವುದರ ಮೂಲಕ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು.

ಮಹದೇಶ್ವರನ ಉತ್ಸವ ಮೂರ್ತಿಯನ್ನು, ವಿವಿಧ ಹೂಗಳಿಂದ ವಿಶೇಷವಾಗಿ ಅಲಂಕರಿಸಿ ವೀರಗಾಸೆ, ನಂದಿ ಕಂಬ, ಕಂಸಾಳೆ, ಮಂಗಳವಾದ್ಯಗಳ ಮೂಲಕ ದೇವಸ್ಥಾನದ ಹೊರ ಆವರಣದಲ್ಲಿ ನೆರೆದಿದ್ದ ಭಕ್ತ ಸಾಗರದೊಡನೆ ಮೆರವಣಿಗೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ದೇವಸ್ಥಾನದ ಹೊರ ಆವರಣದಲ್ಲಿ ಮಹದೇಶ್ವರ ರಥವನ್ನು ಎಳೆಯಲಾಯಿತು.





ಆಷಾಢ ಅಮಾವಾಸ್ಯೆಯ ಪೂಜೆಗೆ ಶ್ರೀ ಮಹದೇಶ್ವರನ ದರ್ಶನ ಪಡೆಯಲು ವಿವಿಧ ಜಿಲ್ಲೆ ಹಾಗೂ ವಿವಿಧ ತಾಲೂಕುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಮಹದೇಶ್ವರ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸುವುದರ ಮೂಲಕ ಮಹದೇಶ್ವರನ ದರ್ಶನ ಪಡೆದು ಪುನೀತರಾದರು.

ನಂಜನಗೂಡು ತಾಲೂಕಿನ ಮಹದೇಶ್ವರ ಭಕ್ತ ಮಂಡಳಿ ವತಿಯಿಂದ, ಭೀಮನ ಕೊಲ್ಲಿ ಶ್ರೀ ಮಹದೇಶ್ವರನ ಸನ್ನಿಧಿಗೆ ಆಗಮಿಸಿದ್ದ, ಸಾವಿರಾರು ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನೆರವೇರಿಸಲಾಯಿತು.

ಪೂಜೆಗೆ ಆಗಮಿಸಿದಂತ ಸಾವಿರಾರು ಭಕ್ತಾದಿಗಳಿಗೆ ಯಾವುದೇ ಸಮಸ್ಯೆಗಳು ಆಗದ ರೀತಿಯಲ್ಲಿ ಸುಲಲಿತವಾಗಿ ದೇವರ ದರ್ಶನ ಪಡೆಯಲು ಭೀಮನಕೊಲ್ಲಿ ಮಹದೇಶ್ವರ ಸ್ವಾಮಿ ಆಡಳಿತ ಮಂಡಳಿ ವತಿಯಿಂದ ಅನುಕೂಲ ಮಾಡಿಕೊಡಲಾಗಿತ್ತು.

ಇದೇ ಸಂದರ್ಭದಲ್ಲಿ ದೇವಾಲಯದ ಆಡಳಿತ ಮಂಡಳಿಯ ಅಧ್ಯಕ್ಷ ಎಂ.ಪಿ.ಎಸ್. ಮೂರ್ತಿ, ಉಪಾಧ್ಯಕ್ಷ ಗುರುಮಲ್ಲಪ್ಪ ಕಾರ್ಯದರ್ಶಿ ಎಂ.ಎನ್.ಜಗದೀಶ್, ಕಾರ್ಯಕಾರಿ ಮಂಡಳಿ ಸದಸ್ಯರುಗಳಾದ ಗುರುಮಲ್ಲಪ್ಪ, ಗುರುಮೂರ್ತಿ, ಬಿ.ಎಸ್.ನಂಜಪ್ಪ ಎಂ.ಎನ್. ಭೀಮರಾಜ್, ಬಿ.ಟಿ. ನರಸಿಂಹಮೂರ್ತಿ, ಎಚ್.ಎಮ್.ಮಲ್ಲಿಕಾರ್ಜುನ, ಸುಬ್ಬಣ್ಣ, ಬಸವರಾಜು, ಕೆ.ಎಸ್. ಗುರುಲಿಂಗಪ್ಪ, ದಯಾನಂದ್ ಹಾಜರಿದ್ದರು.

ಮಹದೇವ ನಿಧನ



ತಿ.ನರಸೀಪುರ, ಜೂ.18– ತಾಲೂಕಿನ ಹಿಟ್ಟುವಳ್ಳಿ ಗ್ರಾಮದ ನಿವಾಸಿ ಮಹದೇವ(64) ಭಾನುವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ ಸುಶೀಲಮ್ಮ, ಪುತ್ರ ಮಹೇಶ್, ಪುತ್ರಿ ಜಯ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ ಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಪಘಾತಕ್ಕೆ ಸೋಪಾನವಾಗಿದೆ ಕಾರಂಜಿ ಕೆರೆ ಬಂಡ್ ರಸ್ತೆ

ಅಪಘಾತ ತಪ್ಪಿಸಲು ಬ್ಯಾರಿಕೇಡ್ ಅಳವಡಿಕೆ





ಮೈಸೂರು, ಜೂ.18(ಬಿಎಲ್‌ಯು)– ಅಪಘಾತ ರಹಿತ ಹಾಗೂ ಸುಗಮ ವಾಹನ ಸಂಚಾರಕ್ಕಾಗಿ ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತದೆ. ಆದರೆ ಈ ರಸ್ತೆ ಅಪಘಾತಕ್ಕೆ ಸೋಪಾನವಾಗಿದೆ. ಮೈಸೂರಿನ ಕಾರಂಜಿ ಕೆರೆ ಬಂಡ್ ರಸ್ತೆ ಅಪಘಾತಕ್ಕೆ ಬಾಯಿ ತೆರೆದುಕೊಂಡಿದೆ. ಇಲ್ಲಿ ಪ್ರತಿ ದಿನ ಒಂದಲ್ಲಾ ಒಂದು ಅಪಘಾತವಾಗುತ್ತಲೆ ಇರುತ್ತದೆ.

ಮೈಸೂರಿನ ಕಾರಂಜಿ ಕೆರೆ ಬಂಡ್ ರಸ್ತೆ ಅಥವಾ ಕಾರಂಜಿ ಕೆರೆ ಏರಿ ರಸ್ತೆ ಎಂದು ಕರೆಯಲ್ಪಡುವ ಈ ರಸ್ತೆಯಲ್ಲಿ ಹೋಗಲು ಜನರು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆ ಸುಮಾರು ಇಪತ್ತು ಅಡಿ ಅಗಲ ಇದ್ದು, ಮೂರು ಕಡೆ ಹಳ್ಳ ಬಿದ್ದಿದೆ. ಅಪಘಾತ ಆಗಬಾರದೆಂದು ಪೊಲೀಸರು ಬ್ಯಾರಿಕೇಡ್‌ಗಳನ್ನು ನಿಲ್ಲಿಸಿದ್ದಾರೆ. ಇದು ಅಪಾಯಕಾರಿ ಸ್ಥಳ ಎಂದು ವಾಹನ ಸವಾರರಿಗೆ ತಿಳಿಸಲು ಬ್ಯಾರಿಕೇಡ್‌ಗೆ ಕೆಂಪು ಬಟ್ಟೆ ಕಟ್ಟಲಾಗಿದೆ.

ಕಾರಂಜಿ ಕೆರೆ ಬಂಡ್ ರಸ್ತೆಯ ಮಧ್ಯೆ ದೊಡ್ಡದಾದ ಪೈಪ್‌ಗಳಿರುವ ಯುಜಿಡಿ ಲೈನ್ ಹಾದು ಹೋಗಿದೆ. ಗುಣಮಟ್ಟದ ಕಾಮಗಾರಿ ಮಾಡದ ಕಾರಣ ಮ್ಯಾನ್ ಹೋಲ್ ಗಳು ಕುಸಿದಿವೆ. ಇದರಿಂದ ರಸ್ತೆಯ ಮಧ್ಯೆ ಎರಡು ಕಡೆ ಹಳ್ಳವಾಗಿದೆ. ವಾಹನಗಳು ಹಳ್ಳಕ್ಕೆ ಬಿದ್ದು, ಕೆಲವು ಅಪಘಾತವಾಗಿದ್ದ ಕಾರಣ ಈಗ ಬ್ಯಾರಿಕೇಡ್ ಹಾಕಲಾಗಿದೆ.

ರಸ್ತೆ ತಿರುವಿನಲ್ಲಿ ಹಳ್ಳದ ಮಧ್ಯೆ ಬ್ಯಾರಿಕೇಡ್ ಹಾಕಿರುವ ಕಾರಣ ಎರಡು ಕಡೆಯಿಂದ ವೇಗವಾಗಿ ಬರುವ ವಾಹನ ಸವಾರರಿಗೆ ಇದು ಕಾಣುವುದಿಲ್ಲ. ಇದರಿಂದ ಪ್ರತಿದಿನ ಅಪಘಾತ ಆಗುತ್ತಲೆ ಇದೆ. ಮತ್ತೊಂದು ಕಡೆ ಕೆರೆ ಇಳಿಜಾರಿಗೆ ಹೊಂದಿಕೊಂಡಂತೆ ಕೆಪಿಟಿಸಿಎಲ್‌ನವರು ಪವರ್ ಕೇಬಲ್ ಅಳವಡಿಸಿದ್ದಾರೆ. ಅಲ್ಲಿ ಕೂಡ ಹಳ್ಳವಾಗಿದ್ದು, ಬ್ಯಾರಿಕೇಡ್ ನಿಲ್ಲಿಸಲಾಗಿದೆ.

ರಿಜೆನ್ಸಿ ಥಿಯೇಟರ್ ಹಾಗೂ ನಜರ್‌ಬಾದ್ ನಿಂದ ಲಲಿತ ಮಹಲ್ ರಸ್ತೆ ಕಡೆಗೆ ಹೋಗುವವರು ಇದೇ ರಸ್ತೆಯಲ್ಲಿ ಸಾಗುತ್ತಾರೆ. ತಿ.ನರಸೀಪುರ, ಕೊಳ್ಳೆಗಾಲ ಸೇರಿದಂತೆ ಹಲವು ಕಡೆ ಹೋಗಲು ಇದೇ ಕಾರಂಜಿ ಕೆರೆ ಬಂಡ್ ರಸ್ತೆಯಲ್ಲಿ ಬಸ್, ಆಟೋ, ಕಾರು, ಲಾರಿ, ದ್ವಿಚಕ್ರ ವಾಹನ ಸೇರಿದಂತೆ ಹಲವು ವಾಹನಗಳು ಸಂಚರಿಸುತ್ತಿವೆ.

ಬಂಡ್ ರಸ್ತೆಯ ಅಲ್ಲಲ್ಲಿ ಹಳ್ಳ ಬಾಯಿ ತೆರೆದುಕೊಂಡಿದ್ದು, ಆಗಿಂದಾಗ್ಗೆ ಅಪಘಾತ ಸಂಭವಿಸುತ್ತಲೆ ಇದೆ. ಹಳ್ಳ ಬಿದ್ದು ಹಲವು ದಿನಗಳೇ ಕಳೆದಿದ್ದರೂ ನಗರ ಪಾಲಿಕೆ ಅಧಿಕಾರಿಗಳು ಇದನ್ನು ರಿಪೇರಿ ಮಾಡಿಸುವ ಗೋಜಿಗೆ ಹೋಗಿಲ್ಲ. ಇದರಿಂದ ಅಪಘಾತವಾಗಿ ಗಾಯಗೊಂಡವರು ನಗರ ಪಾಲಿಕೆ ಅಧಿಕಾರಿಗಳಿಗೆ ಶಾಪ ಹಾಕುತ್ತಿದ್ದಾರೆ.

ಕಾರಂಜಿ ಕೆರೆ ಬಂಡ್ ರಸ್ತೆಯ ಈ ಅವ್ಯವಸ್ಥೆ ಬಗ್ಗೆ 'ಮೈಸೂರು ಮಿತ್ರ' ನಗರ ಪಾಲಿಕೆ ಸೂಪರಿಡೆಂಟೆಂಟ್ ಇಂಜಿನಿಯರ್ ಮಹೇಶ್ ಅವರ ಗಮನಕ್ಕೆ ತಂದಾಗ, "ಮೊನ್ನೆ ಕೆಲವು ಅಧಿಕಾರಿಗಳ ಜೊತೆ ಈ ರಸ್ತೆಯ ಅಪಘಾತ ಸ್ಥಳದ ಬಗ್ಗೆ ಪರಿಶೀಲನೆ ಮಾಡಿದ್ದೇನೆ. ಇನ್ನು ಎರಡು ದಿನದಲ್ಲಿ ರಿಪೇರಿ ಮಾಡಿಸುತ್ತೇನೆ" ಎಂದು ಭರವಸೆ ನೀಡಿದರು.

ರೈತ ಮುಖಂಡರಿಂದ ಜಿಲ್ಲಾ ಉಸ್ತುವಾರಿ ಸಚಿವರ ಭೇಟಿ

ವಿವಿಧ ಬೇಡಿಕೆ ಈಡೇರಿಸಲು ಒತ್ತಾಯ



ಮೈಸೂರು, ಜೂ.18(ಎಸ್‌ಬಿಡಿ)– ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅವರನ್ನು ರೈತ ಮುಖಂಡರು ಭೇಟಿ ಮಾಡಿ, ವಿವಿಧ ಬೇಡಿಕೆಗಳ ಈಡೇರಿಸಲು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ನೇತೃತ್ವದಲ್ಲಿ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸಚಿವರನ್ನು ಭಾನುವಾರ ಭೇಟಿ ಮಾಡಿ, ಭೂಪರಿಹಾರ, ಬಗರ್‌ಹುಕುಂ ಇನ್ನಿತರ ವಿಚಾರಗಳ ಬಗ್ಗೆ ಗಮನ ಸೆಳೆದರು.

ಶ್ರೀರಂಗಪಟ್ಟಣ–ಮಡಿಕೇರಿ ನೂತನ ರಾಷ್ಟ್ರೀಯ ಹೆದ್ದಾರಿ 275ರ ನಿರ್ಮಾಣಕ್ಕೆ ಮೈಸೂರು, ಹುಣಸೂರು ಮತ್ತು ಪಿರಿಯಾಪಟ್ಟಣ ತಾಲೂಕು ವ್ಯಾಪ್ತಿಯಲ್ಲಿ ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ ಭೂಮಿ ನೀಡಿದ ರೈತರಿಗೆ ಪರಿಹಾರ ನಿಗದಿಪಡಿಸುವಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು ತಾರತಮ್ಯ ಅನುಸರಿಸಿದ್ದಾರೆ. ಇದರಿಂದ ಅನೇಕ ರೈತರಿಗೆ ಅನ್ಯಾಯವಾಗಿದೆ ಎಂದು ರೈತ ಮುಖಂಡರು ಆರೋಪಿಸಿದ್ದಾರೆ.

ಹುಣಸೂರು ತಾಲೂಕಿನ ಗೌಡಗೆರೆ ಹೋಬಳಿ, ಅಗ್ರಹಾರ, ಕಟ್ಟೆಮಳಲವಾಡಿ ಕೊಪ್ಪಲ್, ತೊಂಡಾಳು ಅಕ್ಕಪಕ್ಕದಲ್ಲಿದ್ದು, ಇಲ್ಲಿ ಒಂದೇ ರೀತಿಯ ಫಲವತ್ತಾದ ಭೂಪ್ರದೇಶವಿದೆ. ಆದರೆ ಎಕರೆ ಭೂಮಿಗೆ ತೊಂಡಾಳಿನಲ್ಲಿ 28.50 ಲಕ್ಷ ರೂ., ಕಟ್ಟೆಮಳಲವಾಡಿ ಕೊಪ್ಪಲ್ ಹಾಗೂ ಅಗ್ರಹಾರ ಭಾಗದಲ್ಲಿ 9 ಲಕ್ಷ ರೂ., ಕೆಂಪನಹಳ್ಳಿಯಲ್ಲಿ 20 ಲಕ್ಷ, ಗೆರೆಸನಹಳ್ಳಿಯಲ್ಲಿ 26.80 ಲಕ್ಷ ರೂ. ಹೀಗೆ ಪರಿಹಾರ ನಿಗದಿಯಲ್ಲಿ ತಾರತಮ್ಯ ಮಾಡಲಾಗಿದೆ ಎಂದು ತಿಳಿಸಿದರು.

ಒಂದೇ ಉದ್ದೇಶಕ್ಕಾಗಿ ಒಂದೇ ಪ್ರಾಥಮಿಕ ಅಧಿಸೂಚನೆಯಡಿ ಸ್ವಾಧೀನಪಡಿಸಿಕೊಳ್ಳಲಾಗಿರುವ ಭೂಮಿಗಳಿಗೆ ಒಂದೇ ತರನಾದ ಬೆಲೆ ನಿಗದಿ ಮಾಡಬೇಕೆಂದು ಉನ್ನತ ನ್ಯಾಯಾಲಯದ ತೀರ್ಪಿದೆ. ಆದರೆ ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ಬೆಲೆಯನ್ನು ನಿಗದಿ ಮಾಡಲಾಗಿದೆ. ಹಾಗಾಗಿ ರೈತರಿಗೆ ಒಂದೇ ರೀತಿಯ ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಶೀಘ್ರ ಸಭೆ ನಡೆಸಿ, ಸೂಕ್ತ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದರು.

ಈ ಪ್ರದೇಶದಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಹೆಚ್ಚಿನ ಭೂಮಿಯು ದರಖಾಸ್ತು ಮೂಲಕ ಮಂಜೂರಾಗಿದ್ದು, ದುರಸ್ತಿ ಆಗದ ಕಾರಣದಿಂದ ಪರಿಹಾರ ಪಾವತಿಗೆ ತಾಂತ್ರಿಕ ತೊಂದರೆಗಳು ಎದುರಾಗಿವೆ ಇಂತಹ ಪ್ರಕರಣಗಳನ್ನು ವಿಶೇಷ ಆದ್ಯತೆ ಮೇರೆಗೆ ದುರಸ್ತಿ ಪ್ರಕಿಯೆ ನಡೆಸಲು ಕ್ರಮ ವಹಿಸಬೇಕು. ಸ್ವಾಧೀನಪಡಿಸಿಕೊಳ್ಳಲಾಗಿರುವ ಭೂಮಿಯಲ್ಲಿ ದಲಿತರು, ಹಿಂದುಳಿದವರು ಮತ್ತು ಸಣ್ಣ ರೈತರು 40–45 ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದು, ದರಕಾಸ್ತು ಕೋರಿ ಫಾರಂ ನಂ.50, 53, ಮತ್ತು 57ರಡಿ ಅರ್ಜಿ ಸಲ್ಲಿಸಿದ್ದು, ಅವು ದರಕಾಸ್ತು ಕಮಿಟಿ ಮುಂದೆ ಬಾಕಿ ಇವೆ. ಅಂತಹ ರೈತರಿಗೂ ಮಾನವೀಯ ನೆಲೆಗಟ್ಟಿನಲ್ಲಿ ಪರಿಹಾರ ದೊರಕಿಸಿಕೊಡಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಪ್ರಸನ್ನ ಎನ್. ಗೌಡ, ಹೊಸಕೋಟೆ ಬಸವರಾಜು, ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್ ಮತ್ತಿತರರು ಉಪಸಿತರಿದ್ದರು.

ಹಂಪಿ ವಿವಿಗೆ ಒಂದಲ್ಲ, ಬರೋಬ್ಬರಿ 85 ಲಕ್ಷ ರೂ. ಕರೆಂಟ್ ಬಿಲ್

ವಿಜಯನಗರ, ಜೂ.18– ಕಾಂಗ್ರೆಸ್ ಉಚಿತ 200 ಯೂನಿಟ್ ವಿದ್ಯುತ್ ನೀಡುವ ಭರವಸೆ ನೀಡಿದ ಬೆನ್ನಲ್ಲೇ ಜನರು ಏರಿಕೆಯಾಗಿರುವ ವಿದ್ಯುತ್ ಬಿಲ್ ದರವನ್ನು ನೋಡಿ ಶಾಕ್ ಆಗಿದ್ದಾರೆ. ನಾಡಿನ ಪ್ರತಿಷ್ಠಿತ ವಿಶ್ವವಿದ್ಯಾಲಯವಾಗಿರುವ ಹಂಪಿ ವಿಶ್ವವಿದ್ಯಾಲಯಕ್ಕೆ ಬರೋಬ್ಬರಿ 85 ಲಕ್ಷ ರೂ. ವಿದ್ಯುತ್ ಬಿಲ್ ಬಂದಿದ್ದು, ಬಿಲ್ ಕಟ್ಟಲು ಹಣವಿಲ್ಲದೆ ಪರದಾಡುತ್ತಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯ ಕನ್ನಡದ ಸಂಶೋಧನೆಗಾಗಿ ಜನ್ಮ ತಾಳಿರುವ ಏಕೈಕ ವಿಶ್ವ ವಿದ್ಯಾಲಯ. ಈ ವಿವಿಗೆ ಅನುದಾನ ಸರಿಯಾಗಿ ಬಾರದ ಕಾರಣ ಹಿಂದಿನ ಕರೆಂಟ್ ಬಿಲ್ ಸಹ ಕಟ್ಟಿರಲಿಲ್ಲ. ಇದೀಗ ಹಿಂದಿನ ಬಾಕಿ ಮೊತ್ತವನ್ನು ಸೇರಿಸಿದಂತೆ ಇಲ್ಲಿವರೆಗಿನ ಒಟ್ಟು ವಿದ್ಯುತ್ ಬಿಲ್ 85 ಲಕ್ಷ ರೂ.ಗಳಷ್ಟಾಗಿದ್ದು, ಹಂಪಿ ವಿಶ್ವವಿದ್ಯಾಲಯ ಸಂಕಷ್ಟಕ್ಕೆ ಸಿಲುಕಿದೆ.

ಮನ್ನಾ ಮಾಡುವಂತೆ ಮನವಿ: ಆರ್ಥಿಕ ಸಂಕಷ್ಟಕ್ಕೊಳಗಾಗಿರುವ ಹಂಪಿ ವಿಶ್ವವಿದ್ಯಾಲಯ ಕರೆಂಟ್ ಬಿಲ್ ಮನ್ನಾ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ. ಹಂಪಿ ವಿವಿಯ ಕುಲಪತಿ ಡಾ.ಪರಮಶಿವಮೂರ್ತಿ ಈಗಾಗಲೇ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ಕರೆಂಟ್ ಬಿಲ್ ಮನ್ನಾ ಮಾಡುವಂತೆ ಮನವಿ ಮಾಡಿಕೊಂಡಿದ್ದಾರೆ.

ದೈಹಿಕ, ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿ

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಮತ



ಮೈಸೂರು, ಜೂ.18(ಎಸ್‌ಬಿಡಿ)– ದೈಹಿಕ, ಮಾನಸಿಕ ಆರೋಗ್ಯಕ್ಕೆ ಯೋಗ ಸಹಕಾರಿ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ಯೋಗ ಅಸೋಸಿಯೇಷನ್, ರೋಟರಿ ಕ್ಲಬ್ ಆಫ್ ಮೈಸೂರ್ ಸ್ಟಾರ್ಸ್ ಸಂಸ್ಥೆಯ ಸಹಯೋಗದಲ್ಲಿ ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ಸಾಹಿತ್ಯ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಮಹರ್ಷಿ ಪತಂಜಲಿ ಯೋಗ ಸೂತ್ರಗಳು ಕುರಿತ ವಿಶೇಷ ಉಪನ್ಯಾಸ ಉದ್ಘಾಟಿಸಿ ಅವರು ಮಾತನಾಡಿದರು.

ನಾನು ವೈದ್ಯನಾಗಿ, ಆಡಳಿತಾಧಿಕಾರಿಯಾಗಿ ವೈದ್ಯಕೀಯ ಸೇವೆ ಮಾಡಿದವನು. ಪ್ರತಿಯೊಬ್ಬರಿಗೂ ಆರೋಗ್ಯ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಒಳ್ಳೆಯ ಅಭ್ಯಾಸಗಳನ್ನು ರೂಡಿಸಿಕೊಳ್ಳಬೇಕು. ದೈಹಿಕ ಆರೋಗ್ಯ ಚೆನ್ನಾಗಿದ್ದರೆ ಮಾನಸಿಕ ಆರೋಗ್ಯ ಕಾಯ್ದುಕೊಳ್ಳಲು ಸಾಧ್ಯ. ಈ ಮೂಲಕ ಸಾಮಾಜಿಕ ಆರೋಗ್ಯ ಸುಸ್ಥಿತಿಯಲ್ಲಿರುತ್ತದೆ. ಇದರಿಂದ ಆರೋಗ್ಯವಂತ ಸಮಾಜ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು.

ದೈಹಿಕವಾಗಿ ಸದೃಢವಾಗಿರಲು ನಿತ್ಯ ವ್ಯಾಯಾಮ ಮಾಡಬೇಕು. ದೇಹವನ್ನು ದಂಡಿಸಿದರೆ ಅಂಗಾಂಗಳು ಸುಸ್ಥಿತಿಯಲ್ಲಿರುತ್ತವೆ. ಇದು ಯೋಗದಿಂದ ಸಾಧ್ಯವಿದೆ. ಪ್ರಾಣಾಯಾಮದಲ್ಲಿ ದೀರ್ಘವಾಗಿ ಉಸಿರೆಳೆದುಕೊಳ್ಳಲಾಗುತ್ತದೆ. ಇದರಿಂದ ಶ್ವಾಸಕೋಶ ಹಿಗ್ಗಿ ದೇಹಕ್ಕೆ ಸಮರ್ಪಕ ಆಕ್ಸಿಜನ್ ಪೂರೈಕೆಯಾಗುವುದರಿಂದ ದೇಹದ ಶಕ್ತಿವರ್ಧನೆಯಾಗುತ್ತದೆ. ಉತ್ತಮ ಆರೋಗ್ಯಕ್ಕೆ ಪೂರಕವಾದ ಯೋಗಾಭ್ಯಾಸವನ್ನು ಮುಖ್ಯವಾಗಿ ಯುವ ಸಮುದಾಯ ರೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಯೋಗ, ಯೋಗಕ್ಷೇಮ, ಯೋಗಿ, ಯೋಗ್ಯ, ಯೋಜನೆ, ಯೋಚನೆ, ಯಜ್ಞ, ಯತ್ನ, ಯತಿ, ಯುಕ್ತಿ, ಯುಗ, ಯುದ್ಧ ಹೀಗೆ ಯ ಮತ್ತು ಯ ಅಕ್ಷರದಿಂದ ಆರಂಭವಾಗುವ ಪದಗಳು ಅರ್ಥಪೂರ್ಣ ಹಾಗೂ ಶಕ್ತಿಯುತವಾಗಿರುವುದನ್ನು ಗಮನಿಸಬಹುದು ಎಂದು ಇದೇ ವೇಳೆ ಹೇಳಿದರು.

ಕಾರ್ಯಕ್ರಮದಲ್ಲಿ ಯೋಗ ತರಬೇತುದಾರ ಬಿ.ಶ್ರೀನಾಥ್ ಅವರನ್ನು ಅಭಿನಂದಿಸಲಾಯಿತು. ಹಿರಿಯ ಯೋಗಾಚಾರ್ಯ ಡಾ.ಪಿ.ಎನ್.ಗಣೇಶ್‌ಕುಮಾರ್ ಉಪನ್ಯಾಸ ನೀಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಟಿ.ಜಲೇಂದ್ರ ಕುಮಾರ್, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗ ಪ್ರಕಾಶ್, ಜಿಲ್ಲಾ ಕಸಾಪ ಉಪಾಧ್ಯಕ್ಷ ಎನ್.ಅನಂತ್, ರೋಟರಿ ಕ್ಲಬ್ ಆಫ್ ಮೈಸೂರ್ ಸ್ಟಾರ್ಸ್ ಸಂಸ್ಥೆ ಅಧ್ಯಕ್ಷ ಸಂತೋಷ್ ಎಸ್.ಗೌಡ ಮತ್ತಿತರರು ಉಪಸ್ಥಿತರಿದ್ದರು.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್ ಅಬ್ದುಲ್ ಮಾಜಿದ್ ಖಾನ್ ಸೂರ್ಯಾನಿ ರವರ ಮಗ ಶ್ರೀ. ಅಬ್ದುಲ್ ಅಲೀಂ ಖಾನ್ ಸೂರ್ಯಾನಿ ರವರು ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಒಪ್ಪಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 07 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ನಗರ, ದೇವರಾಜ ಮೊಹಲ್ಲಾ, ಯಾದವಗಿರಿ, ವಿವೇಕಾನಂದ ರಸ್ತೆ ಯಲ್ಲಿರುವ ಖಾಲಿ ನಿವೇಶನ ಸಂಖ್ಯೆ. ಡಿ– 6/4, ಹಳೆಯ ಸಿ.ಐ.ಟಿ.ಬಿ ನಿವೇಶನ ಸಂಖ್ಯೆ.39, ಮೈಸೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ. 18 ಪಿಐಡಿ ಸಂಖ್ಯೆ. 128717 ರ ವ್ಯಾಪ್ತಿಯಲ್ಲಿರುವ ಸ್ವತ್ತಿನ ಒಟ್ಟು ವಿಸ್ತೀರ್ಣ 5,100 ಚದರ ಅಡಿಗಳು. ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ. ಡಿ–6/3 ಸೂರ್ಯಾನಿ ರವರ ಮನೆ ಪಶ್ಚಿಮಕ್ಕೆ: ಖಾಸಗಿ ಸ್ವತ್ತು– ಬ್ರಿಗೇಡ್ ಅಪಾರ್ಟ್‌ಮೆಂಟ್ ಉತ್ತರಕ್ಕೆ: ರಸ್ತೆ ಹಾಗೂ ಖಾಸಗಿ ಸ್ವತ್ತಿನ ಸಂಖ್ಯೆ. 38/ಎ ಶಶಿಶೇಖರ್ ರವರ ಮನೆ ಮತ್ತು ದಕ್ಷಿಣಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ. ಡಿ6/1 – ಭಾಮಿ ಶೆಣೈ ರವರ ಮನೆ

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್, ನಂ. 1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು–570001. ಮೊ: 9844640641, email: sldlawfirm2021@gmail.com

ಚಾಮರಾಜನಗರ ನಿರ್ಮಿತಿ ಕೇಂದ್ರ,

ಚಾಮರಾಜನಗರ ಜಿಲ್ಲೆ

ಸಂಖ್ಯೆ: ಸಿ.ಡಿ.ಎನ್.ಕೆ । ಯೋ ವ್ಯ, ನೇಮಕಾತಿ/2023-24 ದಿನಾಂಕ: 15.06.2023

ಜಾಹಿರಾತು ಪ್ರಕಟಣೆ

ಚಾಮರಾಜನಗರ ಜಿಲ್ಲೆ ನಿರ್ಮಿತಿ ಕೇಂದ್ರದಲ್ಲಿ ಯೋಜನಾ ವ್ಯವಸ್ಥಾಪಕರ ಹುದ್ದೆಗೆ ನೇಮಕಾತಿ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

1) ಹುದ್ದೆಯ ಹೆಸರು : ಯೋಜನಾ ವ್ಯವಸ್ಥಾಪಕರು, (ಗರಿಷ್ಠ 05 ವರ್ಷ ಅವಧಿಗೆ)
2) ಹುದ್ದೆಯ ಸಂಖ್ಯೆ : 01
3) ವಿದ್ಯಾರ್ಹತೆ : M Tech Structure ಪದವೀಧರರಾಗಿರಬೇಕು,
4) ಸೇವಾ ಅನುಭವ : ಸಿವಿಲ್ ಇಂಜಿನಿಯರ್ ಹುದ್ದೆಯಲ್ಲಿ ಕಟ್ಟಡ ನಿರ್ಮಾಣ ಅಂದಾಜು ಪಟ್ಟಿ ತಯಾರಿಕೆ, ವಿನ್ಯಾಸ ತಯಾರಿಕೆಯಲ್ಲಿ ಕನಿಷ್ಠ 10 ವರ್ಷ ಅನುಭವ ಹೊಂದಿರಬೇಕು.

ನಿರ್ಮಿತಿ ಕೇಂದ್ರದಲ್ಲಿ / ಕೆ.ಆರ್.ಐ.ಡಿ.ಎಲ್/ ಹೌಸಿಂಗ್ ಬೋರ್ಡ್ ಇಲ್ಲ ಕರ್ತವ್ಯ ನಿರ್ವಹಿಸಿದ ಸೇವಾ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು. (ಪ್ರಸ್ತುತ ನಿರ್ಮಿತಿ ಕೇಂದ್ರದಲ್ಲಿ / ಕೆ.ಆರ್.ಐ.ಡಿ.ಎಲ್/ ಹೌಸಿಂಗ್ ಬೋರ್ಡ್ ಇಲ್ಲ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಇಲಾಖೆಯ ಮುಖ್ಯಸ್ಥರು/ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಪೂರ್ವಾನುಮತಿ ಪತ್ರವನ್ನು ಕಡ್ಡಾಯವಾಗಿ ಅರ್ಜಿ ಜೊತೆಯಲ್ಲಿ ಸಲ್ಲಿಸತಕ್ಕದ್ದು)

5) ವಯೋಮಿತಿ 45 ವರ್ಷದೊಳಗಿರಬೇಕು.

ಮೇಲಿನ ಕ್ಷೇತ್ರಗಳಲ್ಲಿ, ವಿದ್ಯಾರ್ಹತೆ ಮತ್ತು ಕಾರ್ಯನಿರ್ವಾಹಕ ಆಡಳಿತಾತ್ಮಕ ಕ್ಷೇತ್ರಗಳಲ್ಲಿ ಅನುಭವವಿರುವ ಅರ್ಹ ಅಭ್ಯರ್ಥಿಗಳು ನಿಗಧಿತ ಅರ್ಜಿ ನಮೂನೆಯಲ್ಲಿ ದಾಖಲಾತಿಗಳೊಂದಿಗೆ ದಿನಾಂಕ: 15.07.2023 ರ ಸಾಯಂಕಾಲ 5:00 ರೊಳಗೆ ತಲುಪುವಂತೆ ಅಂಚೆ ಮೂಲಕ ಅಥವಾ ಖುದ್ದಾಗಿ ಅರ್ಜಿಯನ್ನು ಕೆಳಕಂಡ ವಿಳಾಸಕ್ಕೆ ಸಲ್ಲಿಸುವುದು.

ವಿಳಾಸ: ಯೋಜನಾ ವ್ಯವಸ್ಥಾಪಕರು,
ಚಾಮರಾಜನಗರ ನಿರ್ಮಿತಿ ಕೇಂದ್ರ, ಮಂಗಲ ಗ್ರಾಮ, ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ

ಸೂಚನೆ : 1. ಅರ್ಜಿ ಸಲ್ಲಿಸುವ ಕೊನೆ ದಿನಾಂಕಕ್ಕೆ ಎಲ್ಲಾ ಅರ್ಹತೆಗಳನ್ನು ಹೊಂದಿರತಕ್ಕದ್ದು
2. ನಿಗಧಿತ ಸಮಯದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
3. **ಹೆಚ್ಚಿನ ಮಾಹಿತಿಗಾಗಿ** : 6361524361 ಗೆ ಸಂಪರ್ಕಿಸಲು ಕೋರಿದೆ,

ಸಹಿ/– ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ನಿರ್ಮಿತಿ ಕೇಂದ್ರ, ಚಾಮರಾಜನಗರ

ವಾ.ಸಾ.ಸಂ.ಇ/ಚಾ.ನಗರ.33/2023–24